ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಅಕ್ಟೋಬರ್ 11 ಶುಕ್ರವಾರ 2024

ಸಂಪುಟ: 45 | ಸಂಚಿಕೆ: 176 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ನಾಳೆ ಜಂಬೂಸವಾರಿ



● ಅರಮನೆ ಆವರಣದಲ್ಲಿ ಶನಿವಾರ ಸಂಜೆ 4ರಿಂದ 4.30 ಗಂಟೆಯೊಳಗೆ ಸಲ್ಲುವ ಶುಭ ಕುಂಭ ಲಗ್ನದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯರಿಂದ ಚಿನ್ನದ ಅಂಬಾರಿಯಲ್ಲಿ ಸರ್ವಾಲಂಕಾರ ಭೂಷಿತೆ ಅಧಿದೇವತೆ ಶ್ರೀ ಚಾಮುಂಡೇಶ್ವರಿ ಮೂರ್ತಿಗೆ ಪುಷ್ಪಾರ್ಚನೆ ಮಾಡುವ ಮೂಲಕ ಐತಿಹಾಸಿಕ ವಿಜಯದಶಮಿ ಮೆರವಣಿಗೆಗೆ ವಿಧ್ಯುಕ್ತ ಚಾಲನೆ ● ಸಂಜೆ 7 ಗಂಟೆಗೆ ಬನ್ನಿಮಂಟಪದ ಪಂಜಿನ ಕವಾಯತು ಮೈದಾನದಲ್ಲಿ ಆಕರ್ಷಕ ಟಾರ್ಚ್‌ಲೈಟ್ ಪರೇಡ್, ಡ್ರೋನ್ ಶೋ

ಮೈಸೂರು, ಅ.10(ಆರ್‌ಕೆ)–ಅಕ್ಟೋಬರ್ 12ರಂದು ವಿಶ್ವ ವಿಖ್ಯಾತ ಮೈಸೂರು ದಸರಾ ಮಹೋತ್ಸವದ ಪ್ರಮುಖ ಆಕರ್ಷಣೆಯಾದ ವೈಭವೋಪೇತ ಜಂಬೂ ಸವಾರಿ ಮೆರವಣಿಗೆ ನಡೆಯಲಿದೆ.

ನವರಾತ್ರಿ ಉತ್ಸವದ ಅಂತಿಮ ದಿನವಾದ ಶನಿವಾರ ಅರಮನೆ ಬಲರಾಮ ದ್ವಾರದ ಶ್ರೀ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಬಳಿ ಮಧ್ಯಾಹ್ನ 1.41 ರಿಂದ 2.10 ಗಂಟೆಯೊಳಗೆ ಸಲ್ಲುವ ಶುಭ ಮಕರ ಲಗ್ನದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನಂದಿ ಧ್ವಜಕ್ಕೆ ಪೂಜೆ ಸಲ್ಲಿಸುವ ಮೂಲಕ ಐತಿಹಾಸಿಕ ವಿಜಯದಶಮಿ ಮೆರವಣಿಗೆಗೆ ಚಾಲನೆ ನೀಡುವರು. ನಂತರ ಸಂಜೆ 4ರಿಂದ 4.30 ಗಂಟೆವರೆಗೆ ಸಲ್ಲುವ





ಶುಭ ಕುಂಭ ಲಗ್ನದಲ್ಲಿ ಅರಮನೆ ಆವರಣದಲ್ಲಿ ಆನೆ ಮೇಲೆ ಚಿನ್ನದ ಅಂಬಾರಿಯಲ್ಲಿ ಆಸೀನಳಾದ ನಾಡಿನ ಅಧಿದೇವತೆ ತಾಯಿ ಶ್ರೀ ಚಾಮುಂಡೇಶ್ವರಿ ದೇವಿಯ ಉತ್ಸವ ಮೂರ್ತಿಗೆ ಮುಖ್ಯಮಂತ್ರಿಗಳು ಪುಷ್ಪಾರ್ಚನೆ ಮಾಡುವರು. ಆ ವೇಳೆ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ರಾಜ ವಂಶಸ್ಥರಾದ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ.ಮಹದೇವಪ್ಪ, ಸಚಿವರಾದ ಕೆ.ವೆಂಕಟೇಶ್, ಶಿವರಾಜ್ ತಂಗಡಗಿ ಸೇರಿದಂತೆ ಸಂಪುಟದ ಇನ್ನಿತರ ಸದಸ್ಯರು, ಶಾಸಕರು, ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ ರೆಡ್ಡಿ, ನಗರ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್ ಸೇರಿದಂತೆ ಹಲವು ಗಣ್ಯರು ಭಾಗವಹಿಸುವರು. ನಾಡಿನ ಕಲಾ ವೈಭವ ಸಾರುವ 60ಕ್ಕೂ ಹೆಚ್ಚು ಜಾನಪದ ಕಲಾ ತಂಡಗಳು, ಸರ್ಕಾರದ ಸಾಧನೆ, ಗ್ಯಾರಂಟಿ ಯೋಜನೆ, ಸಂವಿಧಾನ, ಪ್ರಜಾಪ್ರಭುತ್ವ, ಪ್ರವಾಸಿ ತಾಣಗಳು, ಧಾರ್ಮಿಕ ಕೇಂದ್ರಗಳು, ಬುಡಕಟ್ಟು ಪರಂಪರೆಯಂತಹ ವೈವಿಧ್ಯಮಯ ವಿಶೇಷತೆ ಬಿಂಬಿಸುವ 50 ಸ್ತಬ್ಧಚಿತ್ರಗಳು, ಕರ್ನಾಟಕ ಪೊಲೀಸ್ ವಾದ್ಯ, ಅಶ್ವದಳ, ಅಂಬಾರಿ ಹೊರುವ ಅಭಿಮನ್ಯು ಜೊತೆ ಲಕ್ಷ್ಮಿ ಮತ್ತು ಹಿರಣ್ಯಾ ಸಾಥ್ ನೀಡುವ ಗಜ ಗಾಂಭೀರ್ಯ ನಡಿಗೆ, ಎನ್‌ಸಿಸಿ, ಕೆಎಸ್‌ಆರ್‌ಪಿ ತುಕಡಿಗಳ ಶಿಸ್ತುಬದ್ಧ ಕವಾಯತುಗಳು ಜಂಬೂ ಸವಾರಿ ಮೆರವಣಿಗೆಯಲ್ಲಿ ಸಾಗಲಿವೆ. ಅರಮನೆ ಆವರಣದಿಂದ ಆರಂಭವಾಗುವ ■ 5ನೇ ಪುಟಕ್ಕೆ

ಶುಭಾಶಯಗಳು



ನಾಡಿನ ಸಮಸ್ತರಿಗೂ
ಆಯುಧ ಪೂಜೆ ಹಾಗೂ
ವಿಜಯದಶಮಿಯ ಶುಭಾಶಯಗಳು

ಬಿಡುವು

ಆಯುಧ ಪೂಜೆ ಪ್ರಯುಕ್ತ ಇಂದು ನಮ್ಮ ಕಾರ್ಯಾಲಯಕ್ಕೆ ರಜೆ ಇರುವುದರಿಂದ 12–10–2024ರ ಶನಿವಾರದ 'ಮೈಸೂರು ಮಿತ್ರ' ಸಂಚಿಕೆ ಪ್ರಕಟವಾಗುವುದಿಲ್ಲ. –ಸಂ.

ಕೋವಿಡ್ ಸಂದರ್ಭದ ಅವ್ಯವಹಾರ ಎಸ್‌ಐಟಿಯಿಂದ ತನಿಖೆ

● ಸಂಪುಟ ಸಭೆ ತೀರ್ಮಾನ ● ಅಕ್ರಮದಲ್ಲಿನ ತಪ್ಪಿತಸ್ಥರ ವಿರುದ್ಧ ಕ್ರಮಕ್ಕೆ ಸಂಪುಟ ಉಪ ಸಮಿತಿ ರಚನೆ ● ನಿವೃತ್ತ ನ್ಯಾಯಮೂರ್ತಿ ಜಾನ್ ಮೈಕಲ್ ಕುನ್ಹ ನೇತೃತ್ವದ ಆಯೋಗ ನೀಡಿರುವ ವರದಿ ಆಧರಿಸಿ ಈ ತೀರ್ಮಾನ ● 7 ಸಾವಿರ ಕೋಟಿ ಅವ್ಯವಹಾರ; 500 ಕೋಟಿ ವಸೂಲಿಗೆ ಕ್ರಮ

ಬೆಂಗಳೂರು, ಅ.10(ಕೆಎಂಶಿ)– ಕೋವಿಡ್ ನಿರ್ವಹಣೆ ಹೆಸರಿನಲ್ಲಿ ನಡೆದ ಅಕ್ರಮಗಳ ಕುರಿತು ಎಸ್‌ಐಟಿಯಿಂದ ತನಿಖೆ ನಡೆಸಲು ರಾಜ್ಯ ಸಚಿವ ಸಂಪುಟ ಇಂದಿಲ್ಲಿ ತೀರ್ಮಾನಿಸಿದೆ.

ಅವ್ಯವಹಾರಗಳ ಕುರಿತು ಸಮಗ್ರವಾಗಿ ಪರಿಶೀಲಿಸಿ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಲು ಸಚಿವ ಸಂಪುಟ ಉಪಸಮಿತಿ ರಚಿಸಲಾಗಿದೆ. ಸಭೆ ನಂತರ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಖಾತೆ ಸಚಿವ ಎಚ್.ಕೆ.ಪಾಟೀಲ್, ಕೋವಿಡ್ ನಿರ್ವಹಣೆಯಲ್ಲಿನ ಹಗರಣಗಳ ಬಗ್ಗೆ ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಜಾನ್‌ಮೈಕಲ್ ಕುನ್ಹ ನೇತೃತ್ವದ ಆಯೋಗ ನೀಡಿರುವ ಮಧ್ಯಂತರ ವರದಿ ಆಧರಿಸಿ ಸಂಪುಟ ಈ ತೀರ್ಮಾನ ಕೈಗೊಂಡಿದೆ ಎಂದರು. ಈ ಅಕ್ರಮದಲ್ಲಿ ಆರೋಗ್ಯ, ವೈದ್ಯಕೀಯ ಶಿಕ್ಷಣ ಮತ್ತು ನಗರಾಭಿವೃದ್ಧಿ ಇಲಾಖೆ ಅಧಿಕಾರಿಗಳು ಭಾಗಿಯಾಗಿರುವುದರಿಂದ ಎರಡು ಹಂತದಲ್ಲಿ ತನಿಖೆ ನಡೆಸಲಾಗುವುದು. ಹಗರಣದಲ್ಲಿ ಅಪರಾಧ ಕೃತ್ಯ ನಡೆದಿರುವುದರಿಂದ ■ 5ನೇ ಪುಟಕ್ಕೆ

ಪಾಂಡವಪುರದ ಮೆಕ್ಯಾನಿಕ್ ಅಲ್ತಾಫ್‌ಗೆ ಒಲಿಯಿತು ಕೇರಳ ಲಾಟರಿ ಬಂಪರ್ 25 ಕೋಟಿ!



ಪಾಂಡವಪುರ: ಪಾಂಡವಪುರದಲ್ಲಿ ಮೆಕ್ಯಾನಿಕ್ ಆಗಿರುವ ಅಲ್ತಾಫ್, ರಾತ್ರೋರಾತ್ರಿ ಕೋಟ್ಯಾಧಿಪತಿಯಾಗಿದ್ದಾರೆ. ಅವರಿಗೆ ಕೇರಳದ ತಿರುಓಣಂ ಬಂಪರ್ ಲಾಟರಿಯಲ್ಲಿ ಬರೋಬ್ಬರಿ 25 ಕೋಟಿ ಬಂದಿದೆ.

ಇತ್ತೀಚೆಗೆ ಕೇರಳಕ್ಕೆ ಹೋಗಿದ್ದ ಅವರು ಅಲ್ಲಿನ ತಿರುಓಣಂ ಲಾಟರಿ ಟಿಕೆಟನ್ನು 500 ರೂ. ಕೊಟ್ಟು ಖರೀದಿಸಿದ್ದರು. ಈ ಟಿಕೆಟ್‌ಗೆ ಡ್ರಾನಲ್ಲಿ ಬಂಪರ್ ಬಹುಮಾನ ಬರೋಬ್ಬರಿ 25 ಕೋಟಿ ಲಭಿಸಿದ್ದು, ಎಲ್ಲಾ ತೆರಿಗೆ ಕಳೆದು 12.8 ಕೋಟಿ ■ 5ನೇ ಪುಟಕ್ಕೆ

ಶುದ್ಧ ಸಂಗೀತದ ಎಲ್ಲಾ ಪ್ರಾಕಾರಗಳ ಮೂಲಕ ನೆರೆದ ಜನರ ರಂಜಿಸಿದ ಡಾ.ಇಳಯರಾಜ ಗಾನ ತಂಡ

● ಕನ್ನಡ ಪ್ರೇಮ ಮೆರೆದ ಹಿರಿಯ ದಿಗ್ಗಜ ● ಯಶಸ್ವಿ ತೆರೆಕಂಡ ಯುವ ದಸರಾ



ಸಂಗೀತ ಸಾಮ್ರಾಟ ಡಾ.ಇಳಯರಾಜ



ಗಾಯಕ ಹರಿಚರಣ್‌ರೊಂದಿಗೆ ಸುಮಧುರ ಗಾಯನ

ಮೈಸೂರು, ಅ.10(ಎಂಕೆ)– ತಣ್ಣನೆಯ ತಂಪಾದ ವಾತಾವರಣದಲ್ಲಿ ಕಲಾ ಮನಸ್ಸುಗಳಿಗೆ ಇಂಪು ನೀಡಿದ ಸಂಗೀತ ದಿಗ್ಗಜ, ಪದ್ಮವಿಭೂಷಣ ಡಾ.ಇಳಯರಾಜ ಅವರ ಭಕ್ತಿ, ಶಾಸ್ತ್ರೀಯ, ಸುಗಮ ಸಂಗೀತ ಸುಧೆಯೊಂದಿಗೆ ವಿಶ್ವವಿಖ್ಯಾತ ಮೈಸೂರು ದಸರಾ ಮೆಗಾ ಇವೆಂಟ್ ಖ್ಯಾತಿಯ ಯುವ ದಸರಾ ಭವ್ಯ ವೇದಿಕೆಗೆ ಯಶಸ್ವಿ ತೆರೆಬಿದ್ದಿತು.

ನಾಡಹಬ್ಬ ಮೈಸೂರು ದಸರಾ ಅಂಗವಾಗಿ ಮೊದಲ ಬಾರಿಗೆ ನಗರದ ಹೊರವಲಯದ ರಿಂಗ್ ರಸ್ತೆಯಲ್ಲಿರುವ ಉತ್ತನಹಳ್ಳಿ ಜ್ವಾಲಾಮುಖಿ ತ್ರಿಪುರ ಸುಂದರಿ ಅಮ್ಮನವರ ದೇವಸ್ಥಾನದ ಸಮೀಪದಲ್ಲಿನ ಸುಮಾರು 100 ಎಕರೆ ಮೈದಾನದಲ್ಲಿ ಐದು ದಿನಗಳ ಕಾಲ ಮಳೆಯ ಆತಂಕದ ನಡುವೆ ಅದ್ಧೂರಿಯಾಗಿ ನೆರವೇರಿದ ಯುವ ದಸರಾ, ಸಂಗೀತ ಸಾಮ್ರಾಟ ಡಾ. ಇಳಯರಾಜ ಮತ್ತು ಅವರ ತಂಡದ ಸುಮಧುರ ಸಂಗೀತ, ನಾದಮಯ ಲೋಕದ ಅನಾವರಣದೊಂದಿಗೆ ಸಂಪನ್ನಗೊಂಡಿತು. ಕಲಾವಿದರ ದಂಡೆ ತುಂಬಿದ್ದ ವೇದಿಕೆಯಲ್ಲಿ ಕಲಾವಿದ ರವಿ ಮತ್ತು ತಂಡದ 'ತಿಂಗಾಳು ಮುಳುಗಿದವೋ... ರಂಗೋಲಿ ಬೆಳಗಿದವೋ... ತಾಯಿ ಚಾಮುಂಡಿಯ ಪೂಜೆಗೆಂದು ಇಳಯರಾಜ ಬಂದಿಹರೋ'... ಎಂಬ ಜಾನಪದ ಸೊಗಡು, 'ಗುರುಬ್ರಹ್ಮ ಗುರು ವಿಷ್ಣು ಗುರುದೇವೋ ಮಹೇಶ್ವರ ಗುರು ಸಾಕ್ಷಾತ್ ಪರಬ್ರಹ್ಮ ತಸ್ಮೈ ಶ್ರೀ ಗುರುವೇ ನಮಃ' ಗುರುಭಕ್ತಿಯ ಜಪದ ನಡುವೆ ಮೈಸೂರು ಜನತೆಗೆ ಕೈ ಮುಗಿಯುತ್ತ ವೇದಿಕೆಗೆ ಆಗಮಿಸಿದ ■ 5ನೇ ಪುಟಕ್ಕೆ



ಸಂಗೀತ ನಿರ್ದೇಶಕ ಕೆ.ಕಲ್ಯಾಣ್, ಗಾಯಕರೊಂದಿಗೆ ಹಾಡೊಂದನ್ನು ಪ್ರಸ್ತುತಪಡಿಸಿದರು.

ಗೊಂಬೆಗಳ ಪ್ರದರ್ಶನ

ಮೈಸೂರು, ಅ.10–ಮೈಸೂರಿನ ಕೃಷ್ಣ ಮೂರ್ತಿಪುರಂನಲ್ಲಿರುವ ಅಕ್ಯೂಮೆನ್ ಲ್ಯಾಬ್ಸ್ ಕೇರಿಂಗ್ ಸಲೂಷನ್ಸ್ ಚಾರಿಟಬಲ್ ಫೌಂಡೇಷನ್ ವತಿಯಿಂದ ವಿನೂತನ ಗೊಂಬೆಗಳ ಪ್ರದರ್ಶನ ಏರ್ಪಡಿಸಲಾಗಿದೆ.

ನಾಡು, ನುಡಿ, ಸಂಸ್ಕೃತಿ ಮತ್ತು ಚರಿತ್ರೆಗಳ ಬಗೆಗಿನ ಗೊಂಬೆಗಳನ್ನು ಪ್ರದರ್ಶಿಸುವುದಲ್ಲದೆ, ಅವುಗಳ ಬಗ್ಗೆ ಸಂಕ್ಷಿಪ್ತ ಮಾಹಿತಿ ನೀಡುತ್ತಿದ್ದಾರೆ. ಆಸಕ್ತರು ಸಂಜೆ 5ರಿಂದ 8ರವರೆಗೆ ಭೇಟಿ ನೀಡಬಹುದು. ಹೆಚ್ಚಿನ ಮಾಹಿತಿಗೆ ನವ್ಯಶ್ರೀ ಯೋಗಾನಂದ ಅವರನ್ನು ಮೊ. 9900268224 ಮೂಲಕ ಸಂಪರ್ಕಿಸಬಹುದು.

ಇಂದು ಮೈಸೂರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ



ಮೈಸೂರು, ಅ.10(ಬಿಎಲ್‌ಯು)– ವಿಶ್ವ ವಿಖ್ಯಾತ ದಸರಾ ಜಂಬೂ ಸವಾರಿ ಮೆರವಣಿಗೆ ಹಾಗೂ ಇತರೆ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಮೂರು ದಿನಗಳ ಪ್ರವಾಸಕ್ಕಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ನಾಳೆ (ಅ.11) ಮೈಸೂರಿಗೆ ಆಗಮಿಸಲಿದ್ದಾರೆ.

ನಾಳೆ ಬೆಳಗ್ಗೆ 10 ಗಂಟೆಗೆ ಬೆಂಗಳೂರಿನ ಹೆಚ್‌ಎಎಲ್ ವಿಮಾನ ನಿಲ್ದಾಣದಿಂದ ವಿಶೇಷ ವಿಮಾನದಲ್ಲಿ ಹೊರಡುವ ಸಿದ್ದರಾಮಯ್ಯ 10.25ಕ್ಕೆ ಮೈಸೂರು

ಎರಡು ದಿನ ನಗರದಲ್ಲೇ ವಾಸ್ತವ್ಯ

ವಿಮಾನ ನಿಲ್ದಾಣಕ್ಕೆ ಆಗಮಿಸಿ ವಿವಿಧ ಕಾರ್ಯಕ್ರಮಗಳಲ್ಲಿ ಭಾಗವಹಿಸುವರು. ತರುವಾಯ ನಾಳೆ ಮೈಸೂರಿನಲ್ಲೇ ವಾಸ್ತವ್ಯ ಹೂಡುವರು. ಅ.12ರಂದು ಬೆಳಗ್ಗೆ 10 ಗಂಟೆಗೆ ನಗರದ ಚಾಮುಂಡಿಬೆಟ್ಟದ ತಪ್ಪಲಿನ ಶ್ರೀ ಸುತ್ತೂರು ಶಾಖಾ ಮಠಕ್ಕೆ ಭೇಟಿ ನೀಡಲಿದ್ದಾರೆ. ನಂತರ ಮಧ್ಯಾಹ್ನ 1.41ರಿಂದ 2.10 ಗಂಟೆವರೆಗೆ ಸಲ್ಲುವ ಶುಭ ಲಗ್ನದಲ್ಲಿ ಅರಮನೆಯ ಬಲರಾಮ ದ್ವಾರದಲ್ಲಿ ನಂದಿಧ್ವಜಕ್ಕೆ ಪೂಜೆ ಸಲ್ಲಿಸುವರು. ದಸರಾ ಜಂಬೂಸವಾರಿ ಮೆರವಣಿಗೆ ವೀಕ್ಷಿಸಿ, ಸಂಜೆ 4ರಿಂದ 4.30 ಗಂಟೆಗೆ ಸಲ್ಲುವ ಶುಭ ಲಗ್ನದಲ್ಲಿ ವಿಜಯದಶಮಿ ಮೆರವಣಿಗೆ ಉದ್ಘಾಟಿಸುವರು. ನಂತರ ರಾತ್ರಿ 7 ಗಂಟೆಗೆ ನಗರದ ಬನ್ನಿಮಂಟಪದಲ್ಲಿ ನಡೆಯುವ ಪಂಜಿನ ಕವಾಯತು ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವರು. ಈ ಎಲ್ಲಾ ಕಾರ್ಯಕ್ರಮದ ನಂತರ ಮೈಸೂರಿನಲ್ಲೇ ವಾಸ್ತವ್ಯ ಹೂಡುವರು. ಅ.13ರಂದು ಬೆಳಗ್ಗೆ 11ಕ್ಕೆ ಕಡಕೊಳದಲ್ಲಿ ನಡೆಯುವ ಖಾಸಗಿ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವ ಸಿದ್ದರಾಮಯ್ಯ 11.30 ಗಂಟೆಗೆ ಮೈಸೂರಿನಿಂದ ಹುಬ್ಬಳ್ಳಿಗೆ ವಿಶೇಷ ವಿಮಾನದಲ್ಲಿ ತೆರಳುವರು.

ಆಯುಧಪೂಜೆಗೆ ಮೈಸೂರಲ್ಲಿ ಭರದ ಸಿದ್ಧತೆ

ಬೆಲೆ ದುಬಾರಿಯಾದರೂ ಪೂಜಾ ಪದಾರ್ಥಗಳ ಖರೀದಿ ಜೋರು



ಆಯುಧ ಪೂಜೆಗೆ ಮೈಸೂರಲ್ಲಿ ಗುರುವಾರ ಜನರು ಹೂ, ಹಣ್ಣು, ಪೂಜಾ ಸಾಮಗ್ರಿಗಳನ್ನು ಖರೀದಿಸುತ್ತಿರುವುದು.

ಮೈಸೂರು, ಅ.10(ಆರ್‌ಕೆ)– ನಾಳೆ (ಅ.11)ಯ ಆಯುಧಪೂಜೆಗೆ ಮೈಸೂರಲ್ಲಿ ಜನರು ಸರ್ವ ರೀತಿಯ ಸಿದ್ಧತೆ ಮಾಡಿಕೊಂಡಿದ್ದಾರೆ.

ಕಳೆದ ಮೂರು ದಿನಗಳಿಂದಲೂ ಜನರು ತಮ್ಮ ವಾಹನ, ಆಯುಧಗಳು, ಕಾರ್ಖಾನೆ, ಅಂಗಡಿ ಮುಂಗಟ್ಟುಗಳನ್ನು ಸ್ವಚ್ಛಗೊಳಿಸಿ ಪೂಜಾ ಸಾಮಗ್ರಿಗಳನ್ನು ಖರೀದಿಸಿ ಪೂಜೆಗೆ ಸಕಲ ರೀತಿಯಲ್ಲಿ ತಯಾರಿ ನಡೆಸುತ್ತಿದ್ದು, ನಾಳೆ (ಶುಕ್ರವಾರ) ಶುಭ ಘಳಿಗೆಯಲ್ಲಿ ಪೂಜಾ ವಿಧಿ–ವಿಧಾನಗಳನ್ನು ನೆರವೇರಿಸುವರು.

ಕೆಲ ಕಂಪನಿ, ಕಾರ್ಖಾನೆ, ಕೈಗಾರಿಕೆಗಳಲ್ಲಿ ಇಂದೇ ಆಯುಧ ಪೂಜೆ ನೆರವೇರಿಸಿ ತಮ್ಮ ಕಾರ್ಮಿಕರಿಗೆ ಸಿಹಿ ವಿತರಿಸಿದರು. ಮೈಸೂರು ನಗರಾದ್ಯಂತ ಎಲ್ಲಾ ಸರ್ವೀಸ್ ಸ್ಟೇಷನ್‌ಗಳಲ್ಲಿ ವಾಹನಗಳನ್ನು ವಾಟರ್ ಸರ್ವೀಸ್ ಮಾಡಿಸಲು ಜನರು ಸಾಲುಗಟ್ಟಿ ನಿಂತಿದ್ದರು. ತಡರಾತ್ರಿವರೆಗೂ ವಾಹನ ಕ್ಲೀನ್ ಮಾಡುವ ಕೆಲಸ ನಿರಂತರವಾಗಿ ನಡೆಯಿತು.

ಸೇವಂತಿಗೆ, ಕಲರ್ ಹೂ, ಬಟನ್ ಹೂ, ಬೂದಕುಂಬಳಕಾಯಿ, ನಿಂಬೆಹಣ್ಣು ಬಾಳೆಕಂದು, ಕಡ್ಲೆಪುರಿ, ಪೂಜಾ ಸಾಮಗ್ರಿ ಖರೀದಿಸಲು ಜನರು ಮೈಸೂರು ನಗರಾದ್ಯಂತ ಮುಗಿಬೀಳುತ್ತಿದ್ದುದು ಕಂಡು ಬಂದಿತು.

ಮಾರು ಸೇವಂತಿಗೆ ಹೂ 120ರಿಂದ 150 ರೂ., ಬೂದಕುಂಬಳಕಾಯಿ 50ರಿಂದ 100 ರೂ., ಜೋಡಿ ಬಾಳೆಕಂದು 25ರಿಂದ 50 ರೂ.ಗಳಿಗೆ ಮಾರಾಟವಾಯಿತು. ಉಳಿದಂತೆ ಹಣ್ಣುಗಳ ಬೆಲೆ ಜಾಸ್ತಿ ಇದ್ದರೂ ಲೆಕ್ಕಿಸದೇ ಖರೀದಿಸುತ್ತಿದ್ದ ಜನರು, ಸಿಹಿ ತಿಂಡಿ ಖರೀದಿಸಲು ಸ್ವೀಟ್ ಮಾರ್ಟ್, ಬೇಕರಿಗಳಲ್ಲಿ ಮುಗಿಬೀಳುತ್ತಿದ್ದು, ನೂಕು–ನುಗ್ಗಲು ಉಂಟಾಗಿತ್ತು.

ಮೈಸೂರಿನ ದೇವರಾಜ, ಕೆ.ಆರ್., ಮಂಡಿ ಮಾರುಕಟ್ಟೆ, ಜೆಕೆ ಮೈದಾನದ ಸುತ್ತಲಿನ ರಸ್ತೆಬದಿ, ಆಕಾಶವಾಣಿ ಮುಂಭಾಗ ಕೆಆರ್‌ಎಸ್ ರಸ್ತೆ, ವಿವಿ ಮೊಹಲ್ಲಾದ ಮಾತೃಮಂಡಳಿ ಸರ್ಕಲ್, ಹೆಬ್ಬಾಳಿನ ಸೂರ್ಯ ಬೇಕರಿ ಸರ್ಕಲ್, ಅಗ್ರಹಾರ ಸರ್ಕಲ್ ಸೇರಿದಂತೆ ಮೈಸೂರು ನಗರಾದ್ಯಂತ ಪ್ರಮುಖ ಸರ್ಕಲ್, ರಸ್ತೆಗಳಲ್ಲಿ ಹೂ, ಹಣ್ಣು, ಪೂಜಾ ಸಾಮಗ್ರಿಗಳು ಭರ್ಜರಿ ಮಾರಾಟವಾದವು. ಬೆಲೆ ಹೆಚ್ಚಾದರೂ ಲೆಕ್ಕಿಸದೇ ಆಯುಧ ಪೂಜಾ ಕೈಂಕರ್ಯಕ್ಕೆ ಜನರು ಸಜ್ಜುಗೊಂಡಿದ್ದಾರೆ.

ಮೈಸೂರು, ಮಂಡ್ಯ ಜಿಲ್ಲೆಗಳಿಂದ ರೈತರು ಬೆಳೆದ ಸೇವಂತಿಗೆ ಹೂ, ಕುಂಬಳಕಾಯಿ ಹಾಗೂ ಬಾಳೆಕಂದುಗಳನ್ನು ತಂದು ಮಧ್ಯವರ್ತಿಗಳಿಲ್ಲದೆ ನೇರವಾಗಿ ಮೈಸೂರಿನ ರಸ್ತೆಬದಿ, ಸರ್ಕಲ್‌ಗಳಲ್ಲಿ ಮಾರುತ್ತಿದ್ದರಿಂದ ಆಯುಧಪೂಜೆಗೆ ಬೇಕಾದ ಸಾಮಗ್ರಿಗಳೆಲ್ಲಾ ಆಯಾ ಬಡಾವಣೆಗಳಲ್ಲೇ ಲಭ್ಯವಾದ ಕಾರಣ, ವಾಹನದಟ್ಟಣೆ, ಟ್ರಾಫಿಕ್ ಜಾಮ್ ನಡುವೆ ನಗರದ ಹೃದಯ ಭಾಗಕ್ಕೆ ಬರುವ ತೊಂದರೆ ತಪ್ಪಿದಂತಾಯಿತು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

11.10.2024 ಶುಕ್ರವಾರ, ಮಳೆ ನಕ್ಷತ್ರ: ಚಿತ್ತ, 10.10.2024ರಿಂದ 23.10.2024 ಕ್ರೋಧಿನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಅಶ್ವಯುಜ ಮಾಸ, ಶುಕ್ಲ ಪಕ್ಷ, ತಿಥಿ: ಅಷ್ಟಮಿ, ನಕ್ಷತ್ರ: ಉಷಾ, ರಾಹುಕಾಲ: ಬೆಳಗ್ಗೆ 10.30ರಿಂದ 12ರವರೆಗೆ

■ **ಶ್ರೀ ಶ್ರೀ ಸುಬ್ಬರಾಯ ದಾಸರ ಪ್ರಸನ್ನ ಶ್ರೀ ವೆಂಕಟರಮಣಸ್ವಾಮಿ ದೇವಸ್ಥಾನ:** ನವರಾತ್ರಿ ಬ್ರಹ್ಮೋತ್ಸವ, ಬೆಳಗ್ಗೆ ಉತ್ಸವ, ನವಗ್ರಹ ಹೋಮ, ಸಂಜೆ ಗಜೇಂದ್ರ ಮೋಕ್ಷ, ಸ್ಥಳ: ದೇವಸ್ಥಾನ ಆವರಣ, ದೇವರಾಜ ಮೊಹಲ್ಲಾ.

■ **ಶ್ರೀ ಲಕ್ಷ್ಮೀ ವೆಂಕಟರಮಣಸ್ವಾಮಿ ದೇವಸ್ಥಾನ ಟ್ರಸ್ಟ್:** ಶ್ರೀ ಲಕ್ಷ್ಮೀವೆಂಕಟರಮಣ ಸ್ವಾಮಿಯ 50ನೇ ಬ್ರಹ್ಮೋತ್ಸವ, ಪ್ರಾಕಾರೋತ್ಸವ, ನಿವೇದನ, ಮಂಗಳಾರತಿ, ಶಾತ್ತುಮೊರೈ, ನವಗ್ರಹ ಹೋಮ, ಮೂರ್ತಿ ಹೋಮ, ತೀರ್ಥಪ್ರಸಾದ ವಿನಿಯೋಗ, ಸಂಜೆ ಗಜವಾಹನೋತ್ಸವ, ಗಜೇಂದ್ರ ಮೋಕ್ಷ, ನಿವೇದನ, ಶಾತ್ತುಮೊರೈ, ತೀರ್ಥಪ್ರಸಾದ ವಿನಿಯೋಗ, ಸ್ಥಳ: ದೇವಸ್ಥಾನದ ಆವರಣ, ವಾಣಿವಿಲಾಸ ಮೊಹಲ್ಲಾ.

■ **ಚಾಮುಂಡಿಬೆಟ್ಟದ ತಪ್ಪಲಿನ ಶಬರಿಮಲೆ ಶ್ರೀ ಅಯ್ಯಪ್ಪ ಪೂಜಾ ಸಮಿತಿ:** ಶ್ರೀ ಅಯ್ಯಪ್ಪಸ್ವಾಮಿ ದೇವಸ್ಥಾನದಲ್ಲಿ ನವರಾತ್ರಿ ಪ್ರಯುಕ್ತ ದಸರಾ ಆಚರಣೆ, ಸ್ಥಳ: ಶ್ರೀಅಯ್ಯಪ್ಪ ಸ್ವಾಮಿ ದೇವಸ್ಥಾನ, ಚಾಮುಂಡಿಬೆಟ್ಟ ತಪ್ಪಲು.

■ **ಶೃಂಗೇರಿ ಶ್ರೀ ಶಂಕರ ಮಠ, ಅಭಿನವ ಶಂಕರಾಲಯ:** ಶ್ರೀ ಶಾರದಾಶರನ್ನವರಾತ್ರೋತ್ಸವ–2024, ಶ್ರೀ ಸಿಂಹವಾಹಿನಿ (ಚಾಮುಂಡೇಶ್ವರಿ ಅಲಂಕಾರ), ಶ್ರೀ ನವಚಂಡಿಕಾ ಹೋಮ, ಸ್ಥಳ: ಶಂಕರ ಮಠದ ಆವರಣ, ಫೋರ್ಟ್ ಮೊಹಲ್ಲಾ.

■ **ತ್ರಯೀನ್ಯಾಸ್ ಶ್ರೀ ವಿದ್ಯಾ ಫೌಂಡೇಷನ್ :** 28ನೇ ವರ್ಷದ ಶರನ್ನವರಾತ್ರಿ ಮಹೋತ್ಸವ, ಬೆಳಗ್ಗೆ 5.00 ಗಂಟೆಗೆ ಶ್ರೀ ಶ್ರೀ ವಾಂಛಾಕಲ್ಪಲತಾ ಶ್ರೀ ವಿದ್ಯಾ ಗಣೇಶ ಪರ್ಯಾಯ ಹೋಮ, ಬೆಳಗ್ಗೆ 10ಕ್ಕೆ ಸಗ್ರಹಮಖ ನವಚಂಡಿಯಾಗ, ಬೆಳಗ್ಗೆ 1 ಗಂಟೆಗೆ ಪೂರ್ಣಾಹುತಿ, ಬಲಿಹರಣ, ಕುಮಾರಿ, ಸುವಾಸಿನಿ, ವಟುಕ ಪೂಜಾ, ಮಹಾಮಂಗಳಾರತಿ, ಅಷ್ಟಾವಧಾನ ಸೇವೆ, ಪ್ರಸಾದ ವಿನಿಯೋಗ, ಸ್ಥಳ: ತ್ರಯಿನ್ಯಾಸ್, ಜಯಲಕ್ಷ್ಮೀಪುರಂ.

■ **ಹೇಮಲತಾ ಕುಮಾರಸ್ವಾಮಿ :** ಮೈಸೂರು ಮನೆ ಮನೆ ದಸರಾ ಬೊಂಬೆ ಪ್ರದರ್ಶನ, ಸ್ಥಳ: 567/3, 2ನೇ ರಾಮಚಂದ್ರ ಅಗ್ರಹಾರ, ಖಿಲ್ಲೆ ಮೊಹಲ್ಲಾ.

■ **ಶ್ರೀ ಚಂದ್ರಮೌಳೇಶ್ವರ ಸ್ವಾಮಿ ದೇವಸ್ಥಾನ ಚಾರಿಟಬಲ್ ಟ್ರಸ್ಟ್:** ಶರನ್ನವರಾತ್ರಿ ಉತ್ಸವ–2024, ಬೆಳಗ್ಗೆ 9ಕ್ಕೆ ಶ್ರೀ ಚಂಡಿಕಾಹೋಮ (ಪೂರ್ಣಾಹುತಿ ಮಧ್ಯಾಹ್ನ 1.30ಕ್ಕೆ), ದಂಪತಿ ಪೂಜೆ, ದುರ್ಗಾ ಅಲಂಕಾರ, ಸ್ಥಳ: ದೇವಸ್ಥಾನದ ಪ್ರಾಂಗಣ, ವಾಣಿವಿಲಾಸ ಮೊಹಲ್ಲಾ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಗರ್ಭಾಶಯದ ಫೈಬ್ರಾಯ್ಡ್‌ಗಳ ವೈದ್ಯಕೀಯ ತಪಾಸಣಾ ಶಿಬಿರ, ಗುದಗತ ರೋಗಗಳಾದ ಪೈಲ್ಸ್, ಮೂಲವ್ಯಾಧಿ, ಪಿಸ್ತುಲಾ, ಭಗಂದರ, ನಾಡಿವ್ರಣ, ಫಿಶರ್ ತೊಂದರೆಗಳಿಗೆ ಉಚಿತ ತಪಾಸಣಾ ಮತ್ತು ಸಲಹಾ ಶಿಬಿರ, ಮೂತ್ರಪಿಂಡ (ಕಿಡ್ನಿ) ಕಾಯಿಲೆಗೆ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿ ರಸ್ತೆ, ಆಲನಹಳ್ಳಿ, ಬೆಳಗ್ಗೆ 9ರಿಂದ ಸಂಜೆ 4.30ರವರೆಗೆ.

■ **ವ್ಯವಸ್ಥಾಪಕರು:** ಕೆ.ಎಸ್.ರಾಘವೇಂದ್ರ ಅವರಿಂದ ಪೇಪರ್ ಪಲ್ಸ್ ಉಪಯೋಗಿಸಿ ಕೈಯಿಂದ ಮಾಡಿದ ಬೊಂಬೆಗಳ ಮೂಲಕ ದಶಾವತಾರ ಒಳಗೊಂಡ ಶ್ರೀ ಬಾಲಕೃಷ್ಣ ಲೀಲೆ ಪ್ರಸಂಗಗಳ ಪ್ರದರ್ಶನ, ಸ್ಥಳ: ಇಂಚರ ಕಲಾಕ್ಷೇತ್ರ, ವಿಜಯನಗರ 2ನೇ ಹಂತ, ಬೆಳಗ್ಗೆ 10 ರಿಂದ.

■ **ಸ್ವರ್ಣ ನೃಸಿಂಹ ದತ್ತ ಸಾಯಿ ಪೀಠಿಕೆ ಸೇವಾ ಟ್ರಸ್ಟ್ :** ಶರನ್ನವರಾತ್ರಿ ವೈಭವ–2024, ನವಮಿ, ಚಂಡಿ ಹೋಮ, ಸ್ಥಳ: ಶ್ರೀ ವೆಂಕಟಾರ್ಜುನ ಧ್ಯಾನ ಮಂದಿರ, ಹಾರೋಹಳ್ಳಿ. ಸಂಜೆ ಭಜನೆ, ಆರತಿ, ಸ್ಥಳ: ಗುರುನಿವಾಸ, ಸೋನಾರ್ ಬೀದಿ, ನಾರಾಯಣಶಾಸ್ತ್ರಿ ರಸ್ತೆ.

■ **ರಾಮ್‌ಸನ್ಸ್ ಪ್ರತಿಷ್ಠಾನ :** ಬೊಂಬೆ ಮನೆ, ದಸರೆಯ ಬೊಂಬೆ ಪ್ರದರ್ಶನದ 20ನೇ ಅವತರಣಿಕೆ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ಆಮ್ರಪಾಲಿ ಸೀರೆ ಮಳಿಗೆಯ ಮೇಲೆ, ನಜರ್‌ಬಾದ್, ಬೆಳಗ್ಗೆ 10ರಿಂದ ಸಂಜೆ 7ರವರೆಗೆ.

■ **ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಮೈಸೂರು ಫೋಟೋ ಜರ್ನಲಿಸ್ಟ್ ಅಸೋಸಿಯೇಷನ್:** ದಸರಾ ಮಹೋತ್ಸವ–2024 ಅಂಗವಾಗಿ ಛಾಯಾಚಿತ್ರ ಪ್ರದರ್ಶನ, ಸ್ಥಳ: ಸುಚಿತ್ರ ಕಲಾ ಗ್ಯಾಲರಿ, ಕಲಾಮಂದಿರ, ಬೆಳಗ್ಗೆ 11.30ರಿಂದ.

■ **ಶ್ರೀ ರಾಮಕೃಷ್ಣ ಆಶ್ರಮ:** ಶ್ರೀ ಶ್ರೀ ದುರ್ಗಾಪೂಜೆ, ಮಹಾಷ್ಟಮಿ ಮತ್ತು ಮಹಾನವಮಿ, ಬೆಳಗ್ಗೆ 7 ರಿಂದ ಶ್ರೀ ದುರ್ಗಾಮಾತೆಗೆ ಪೂಜೆ, ಬೆಳಗ್ಗೆ 8 ರಿಂದ ದುರ್ಗಾಸಪ್ತಶತೀ ಪಾರಾಯಣ, 11 ರಿಂದ ಭಜನೆ, 11.45ರಿಂದ ಆರತಿ, ಪುಷ್ಪಾಂಜಲಿ, ಸಂಜೆ 7ಕ್ಕೆ ಸಂಧ್ಯಾರತಿ, ವಿಶೇಷ ಭಜನೆ, ಸ್ಥಳ: ಶ್ರೀ ರಾಮಕೃಷ್ಣ ಆಶ್ರಮ, ಯಾದವಗಿರಿ.

■ **ಶ್ರೀ ಮುಕ್ಕಣ್ಣೇಶ್ವರ ಸ್ವಾಮಿ ದೇವಸ್ಥಾನ :** ನವರಾತ್ರಿ ಪೂಜಾ ಕಾರ್ಯಕ್ರಮ, ಭಜನೆ, ರವಿಕಾಂತಾ ನಂದ ಸ್ವಾಮಿ ಅವರಿಂದ ಪ್ರವಚನ, ಸ್ಥಳ: ದೇವಸ್ಥಾನದ ಆವರಣ, ಸಂಜೆ 5.30ರಿಂದ.

■ **ರಂಗಾಯಣ, ಮೈಸೂರು:** ನವರಾತ್ರಿ ಅಂಗವಾಗಿ ರಂಗ ಉತ್ಸವ, ಶ್ರೀ ರಾಮೇಶ್ವರ ಕೃಪಾಪೋಷಿತ ಯಕ್ಷಗಾನ ಸೂತ್ರದ ಬೊಂಬೆ ಮೇಳ, ಹಲ್ಲರೆ ಗ್ರಾಮ, ನಂಜನಗೂಡು ತಾಲೂಕು ಅವರಿಂದ ಸತ್ಯ ಹರಿಶ್ಚಂದ್ರ ನಾಟಕ ಪ್ರದರ್ಶನ, ಸನ್ಮಾನಿತರು : ವೃತ್ತಿರಂಗಭೂಮಿ ಹಿರಿಯ ಕಲಾವಿದರಾದ ಶ್ರೀಮತಿ ಇಂದಿರಮ್ಮ, ಸ್ಥಳ: ರಂಗಾಯಣ ಆವರಣ, ಸಂಜೆ 6.30ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ದಸರಾ ಗೀತಾರಾಧನ, 6.30 ದಸರಾ ದಲ್ಲಿ ಇಂದು, ಪ್ರಸ್ತುತಿ: ಜಾಂಪಣ್ಣ ಆಶೀಹಾಳ್, 6.35 ಮತ್ತು ಸಂಜೆ 6.10 ಬಣ್ಣದ ಬಾನಾಡಿಗಳು–ಬಾನುಲಿ ಸರಣಿ, ರಚನೆ : ಡಾ. ಕಲೀಂವುಲ್ಲಾ, ಪ್ರಸ್ತುತಿ: ಜಿ. ಶಾಂತಕುಮಾರ್, 6.40 ಮತ್ತು ಸಂಜೆ 5.45 ಕರಾಮುವಿವಿ ಮುಕ್ತವಾಣಿ–ಕರ್ನಾಟಕ ರಾಜ್ಯ ಮುಕ್ತ ವಿಶ್ವ ವಿದ್ಯಾನಿಲಯದ ಅಧ್ಯಯನ ಅವಕಾಶಗಳನ್ನು ಕುರಿತ ಪ್ರಾಯೋಜಿತ ಬಾನುಲಿ ಸರಣಿ. ಭಾಗವಹಿಸುತ್ತಾರೆ: ಡಾ.ಎಂ.ಪವಿತ್ರಾ, ಸಹಾಯಕ ಪ್ರಾಧ್ಯಾಪಕರು, ಗಣಿತ ಶಾಸ್ತ್ರ ಅಧ್ಯಯನ ವಿಭಾಗ, ಪ್ರಾಯೋಜಕರು: ಕರ್ನಾಟಕ ರಾಜ್ಯ ಮುಕ್ತ ವಿಶ್ವ ವಿದ್ಯಾನಿಲಯ, ಮೈಸೂರು. ಪ್ರಸ್ತುತಿ: ಎನ್. ಕೇಶವಮೂರ್ತಿ, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 7.45 ಶರಣ ಸಂಸ್ಕೃತಿ ಉತ್ಸವ–ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು–ಶ್ರೀಜಗದ್ಗುರು ಮುರುಘ ರಾಜೇಂದ್ರ ಬೃಹನ್ಮಠ, ಚಿತ್ರದುರ್ಗ, 8.30 ಚಿತ್ರಗೀತೆಗಳು, 9.05 ಚಾಮುಂಡಿ ಹಬ್ಬ–ದಸರಾ ಸಂಭ್ರಮ, ಜನಪದರ ನಾಲಿಗೆಯಲ್ಲಿ ಮೈಸೂರು ದೇವತೆ, ರಚನೆ: ಡಾ.ಪಿ.ಕೆ.ರಾಜಶೇಖರ್, ಪ್ರಸ್ತುತಿ: ಡಾ.ಮೈಸೂರು ಉಮೇಶ್, 9.35 ಗಾಂಧಿ ಸ್ಮೃತಿ, 10.00 ದಸರಾ ಪ್ರಯುಕ್ತ ಶ್ರೀ ಮುತ್ತುಸ್ವಾಮಿ ದೀಕ್ಷಿತರ ನವಾವರಣ ಕೃತಿಗಳನ್ನೊಳಗೊಂಡ ವಿಶೇಷ ಸಂಗೀತ ಸರಣಿ–ನಮೋ ಜಗತ್ತಾರಿಣಿ, ನಿರ್ಮಾಣ–ಮೈಸೂರು. ಎಸ್.ರಾಜಲಕ್ಷ್ಮೀ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ–ಸಂಗೀತ ಸಂಭ್ರಮ ನಾದಲಯ ಸಂಗಮ, ಪ್ರಸ್ತುತಿ: ಹೆಚ್.ಎಲ್.ಶಿವಶಂಕರಸ್ವಾಮಿ **ಮಧ್ಯಾಹ್ನ:** 12.30 ದೇವರನಾಮ–ಅಂಜನಾ. ಡಿ.ಕುಂಬ್ಳೆ, 12.45 ಕಾದಂಬರಿ ವಿಹಾರ–ಅ.ನ.ಕೃ ಅವರ 'ಉದಯರಾಗ' ಕಾದಂಬರಿಯ ಬಾನುಲಿ ಓದು, ಪ್ರಸ್ತುತಿ: ಉಮೇಶ್ ಎಸ್.ಎಸ್., 1.00 ರಾಜಮಾರ್ಗ–ಮೈಸೂರಿನ ಇತಿಹಾಸ ಪ್ರಸಿದ್ಧ ಮಾರ್ಗಗಳ ಪರಿಚಯ, ಪ್ರಸ್ತುತಿ: ಡಾ.ಮೈಸೂರು ಉಮೇಶ್, 1.20 ಭಾವಗೀತೆಗಳು–ಸಿ.ಶಶಿಕಲಾ, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40 ದಾರಿದೀಪ–ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು: FEBA India, 2.55 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ: ಜಿ.ಕೆ.ರವೀಂದ್ರಕುಮಾರ್, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ: ಎನ್.ರವಿಕಿರಣ್–ಚಿತ್ರವೀಣಾ, 4.00 ಮಹಿಳಾರಂಗ–ಸಖೀ ಸಂವಾದ, ವಿಷಯ: ನವರಾತ್ರಿ ವಿಶೇಷ, ಪ್ರಸ್ತುತಿ: ಕೀರ್ತನ ಮತ್ತು ಸಹನ, 4.30 ನಮ್ಮ ಆರೋಗ್ಯ: ವಿಶ್ವ ಮಾನಸಿಕ ಆರೋಗ್ಯ ದಿನಾಚರಣೆ ಸಂದರ್ಭದಲ್ಲಿ 'ಮಹಿಳೆಯರ ಮಾನಸಿಕ ಆರೋಗ್ಯ' ಕುರಿತು ಡಾ.ಸುಧಾರಾಣಿ. ಪಿ. ನಾಯಕ್ ಅವರೊಂದಿಗೆ ಮಾತುಕತೆ. ನಂತರ ರ್‍ಯಾಷನಲ್ ಆಂಟಿಬಯಾಟಿಕ್ ಅವೇರ್‌ನೆಸ್ ವೀಕ್ ಸಂದರ್ಭದಲ್ಲಿ 'ಆಂಟಿಬಯಾಟಿಕ್ ಔಷಧಗಳ ಬಳಕೆ' ಕುರಿತು ಡಾ.ಶಶಿಕಿರಣ್ ಕೆ.ಬಿ. ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ ಬೇದ್ರೆ ಮಂಜುನಾಥ್, 6.50 ಕೃಷಿರಂಗ : ಕೃಷಿ ಉತ್ಪನ್ನಗಳ ಮೌಲ್ಯವರ್ಧನೆ ಕುರಿತು ಸಂವಾದ. ಭಾಗವಹಿಸುತ್ತಾರೆ : ಮೈಸೂರಿನ ಗ್ರಾಮ್ ಸಂಸ್ಥೆಯ ಕಾರ್ಯನಿರ್ವಾಹಕ ನಿರ್ದೇಶಕರಾದ ಡಾ.ಬಸವರಾಜು ಆರ್. ಶ್ರೇಷ್ಠ ಮತ್ತು ಹುಣಸೂರು ತಾಲೂಕು ಬಿಳಿಕೆರೆ ಗ್ರಾಮದ ಆಸರೆ ಸಂಜೀವಿನಿ ಆಹಾರ ಉತ್ಪನ್ನ ಘಟಕದ ಪಾರ್ವತಿ, ಪ್ರಸ್ತುತಿ: ಎನ್.ಕೇಶವಮೂರ್ತಿ, 7.45 ಚಿತ್ರಗೀತೆಗಳು, 8.00 ಕನ್ನಡ ಭಾರತಿ: ನಾಗವರ್ಮನ ಕರ್ನಾಟಕ ಕಾದಂಬರಿಯಲ್ಲಿ ಮಹಾಶ್ವೇತೆಯ ಪ್ರಸಂಗ. ಈ ಬಗ್ಗೆ ಮಾತನಾಡುತ್ತಾರೆ ಡಾ.ಕೆ.ತಿಮ್ಮಯ್ಯ, ಮೈಸೂರು ಅರಸರ ಆಳ್ವಿಕೆಯಲ್ಲಿ ಆಡಳಿತ ಭಾಷೆಯಾಗಿ ಕನ್ನಡ. ಈ ಕುರಿತು ವಿ. ಗಣೇಶ್ ಅವರಿಂದ ಭಾಷಣ, ಪ್ರಸ್ತುತಿ: ಜಿ.ಶಾಂತಕುಮಾರ್, 8.30 ಅರಮನೆ ಸಂಗೀತ ವೈಭವ–ಸಂಗೀತ ರೂಪಕ, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ : ಮಾತಂಗಿ ಸತ್ಯಮೂರ್ತಿ–ಹಾಡುಗಾರಿಕೆ, 10.00 ತತ್ವಸಂಚಾರ: ಜನಪದ ಗಾಯಕರ ತತ್ವಗಾಯನ, ಪ್ರಸ್ತುತಿ: ಡಾ.ಮೈಸೂರು ಉಮೇಶ್, 10.30 ಸವಿನೆನಪು

ಮೈಸೂರು ಹಾಗೂ ಸುತ್ತಮುತ್ತ ನಾಳೆ...

ನಾಳಿನ ಪಂಚಾಂಗ

12.10.2024 ಶನಿವಾರ, ಮಳೆ ನಕ್ಷತ್ರ: ಚಿತ್ತ, 10.10.2024 ರಿಂದ 23.10.2024 ಕ್ರೋಧಿನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಅಶ್ವಯುಜ ಮಾಸ, ಶುಕ್ಲ ಪಕ್ಷ, ತಿಥಿ: ದಶಮಿ, ನಕ್ಷತ್ರ: ಶ್ರವಣ, ರಾಹುಕಾಲ : ಬೆಳಗ್ಗೆ 9 ರಿಂದ 10.30ರವರೆಗೆ

■ **ಶ್ರೀ ಶ್ರೀ ಸುಬ್ಬರಾಯ ದಾಸರ ಪ್ರಸನ್ನ ಶ್ರೀ ವೆಂಕಟರಮಣಸ್ವಾಮಿ ದೇವಸ್ಥಾನ :** ನವರಾತ್ರಿ ಬ್ರಹ್ಮೋತ್ಸವ, ಶನಿವಾರ ವಿಜಯದಶಮಿ, ಬೆಳಗ್ಗೆ 7.30 ರಿಂದ 8.30 ರವರೆಗೆ, ದಿವ್ಯ ರಥಾರೋಹಣೋತ್ಸವ, ಸಂಜೆ ಮಹಾಮಂಗಳಾರತಿ, ಸ್ಥಳ: ದೇವಸ್ಥಾನ ಆವರಣ, ಕೃಷ್ಣ ವಿಲಾಸ ರಸ್ತೆ, ದೇವರಾಜ ಮೊಹಲ್ಲಾ.

■ **ಶ್ರೀ ಲಕ್ಷ್ಮೀ ವೆಂಕಟರಮಣಸ್ವಾಮಿ ದೇವಸ್ಥಾನ ಟ್ರಸ್ಟ್:** ಶ್ರೀ ಲಕ್ಷ್ಮೀವೆಂಕಟರಮಣ ಸ್ವಾಮಿಯ 50ನೇ ಬ್ರಹ್ಮೋತ್ಸವ, ಬೆಳಗ್ಗೆ ರಥಾಂಗಹೋಮ, ರಥಸ್ನಪನ, ಬಲಿಪ್ರದಾನ, ಯಾತ್ರಾದಾನ, ಮಂಟಪೋತ್ಸವ, ನಿವೇದನ, ರಥಾರೋಹಣ (ತೇರು), ಶ್ರೀಗಳು ಹಾಗೂ ಆಗಮಿಕರಿಗೆ ಆಚಾರ್ಯಪೂಜೆ, ನಿವೇದನ, ಶಾತ್ತುಮೊರೈ, ಮಂಗಳಾರತಿ, ಬೆಳಗ್ಗೆ 10.57 ರಿಂದ 11.27 ರೊಳಗೆ ದಿವ್ಯರಥಾರೋಹಣ, ಸಂಜೆ ಶಾಂತ್ಯುತ್ಸವ, ಶಾತ್ತುಮೊರೈ, ತೀರ್ಥಪ್ರಸಾದ ವಿನಿಯೋಗ, ಸ್ಥಳ: ದೇವಸ್ಥಾನದ ಆವರಣ, ವಾಣಿವಿಲಾಸ ಮೊಹಲ್ಲಾ.

■ **ಚಾಮುಂಡಿಬೆಟ್ಟದ ತಪ್ಪಲಿನ ಶಬರಿಮಲೆ ಶ್ರೀ ಅಯ್ಯಪ್ಪ ಪೂಜಾ ಸಮಿತಿ:** ಶ್ರೀ ಅಯ್ಯಪ್ಪಸ್ವಾಮಿ ದೇವಸ್ಥಾನದಲ್ಲಿ ನವರಾತ್ರಿ ಪ್ರಯುಕ್ತ ದಸರಾ ಹಬ್ಬದ ಆಚರಣೆ, ಸ್ಥಳ: ಶ್ರೀಅಯ್ಯಪ್ಪಸ್ವಾಮಿ ದೇವಸ್ಥಾನ, ಚಾಮುಂಡಿಬೆಟ್ಟ ತಪ್ಪಲು.

■ **ಶೃಂಗೇರಿ ಶ್ರೀ ಶಂಕರ ಮಠ, ಅಭಿನವ ಶಂಕರಾಲಯ:** ಶ್ರೀ ಶಾರದಾಶರನ್ನವರಾತ್ರೋತ್ಸವ–2024, ಶ್ರೀ ಗಜಲಕ್ಷ್ಮೀ ಅಲಂಕಾರ, ಶ್ರೀ ಧನ್ವಂತರಿ ಹೋಮ, ಸ್ಥಳ: ಶಂಕರ ಮಠದ ಆವರಣ, ಫೋರ್ಟ್ ಮೊಹಲ್ಲಾ.

■ **ಹೇಮಲತಾ ಕುಮಾರಸ್ವಾಮಿ:** ಮೈಸೂರು ಮನೆ ಮನೆ ದಸರಾ ಬೊಂಬೆ ಪ್ರದರ್ಶನ, ಸ್ಥಳ: 567/3, 2ನೇ ರಾಮಚಂದ್ರ ಅಗ್ರಹಾರ, ಖಿಲ್ಲೆ ಮೊಹಲ್ಲಾ.

■ **ಶ್ರೀ ಚಂದ್ರಮೌಳೇಶ್ವರ ಸ್ವಾಮಿ ದೇವಸ್ಥಾನ ಚಾರಿಟಬಲ್ ಟ್ರಸ್ಟ್:** ಶರನ್ನವರಾತ್ರಿ ಉತ್ಸವ–2024, ಬೆಳಗ್ಗೆ 9ಕ್ಕೆ ಲಕ್ಷಾರ್ಚನೆ ಹೋಮ, ಮಹಿಷಮರ್ಧಿನಿ ಅಲಂಕಾರ, ಸಂಜೆ ಪ್ರಾಕಾರೋತ್ಸವ, ಶಮೀ ಪೂಜೆ, ಸ್ಥಳ: ದೇವಸ್ಥಾನದ ಪ್ರಾಂಗಣ, ವಾಣಿವಿಲಾಸ ಮೊಹಲ್ಲಾ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಗರ್ಭಾಶಯದ ಫೈಬ್ರಾಯ್ಡ್‌ಗಳ ವೈದ್ಯಕೀಯ ತಪಾಸಣಾ ಶಿಬಿರ, ಗುದಗತ ರೋಗಗಳಾದ ಪೈಲ್ಸ್, ಮೂಲವ್ಯಾಧಿ, ಪಿಸ್ತುಲಾ, ಭಗಂದರ, ನಾಡಿವ್ರಣ, ಫಿಶರ್ ತೊಂದರೆಗಳಿಗೆ ಉಚಿತ ತಪಾಸಣಾ ಮತ್ತು ಸಲಹಾ ಶಿಬಿರ, ಮೂತ್ರಪಿಂಡ (ಕಿಡ್ನಿ) ಕಾಯಿಲೆಗೆ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿ ರಸ್ತೆ, ಆಲನಹಳ್ಳಿ, ಬೆಳಗ್ಗೆ 9ರಿಂದ ಸಂಜೆ 4.30ರವರೆಗೆ.

■ **ವ್ಯವಸ್ಥಾಪಕರು:** ಕೆ.ಎಸ್.ರಾಘವೇಂದ್ರ ಅವರಿಂದ ಪೇಪರ್ ಪಲ್ಸ್ ಉಪಯೋಗಿಸಿ ಕೈಯಿಂದ ಮಾಡಿದ ಬೊಂಬೆಗಳ ಮೂಲಕ ದಶಾವತಾರ ಒಳಗೊಂಡ ಶ್ರೀ ಬಾಲಕೃಷ್ಣ ಲೀಲೆ ಪ್ರಸಂಗಗಳ ಪ್ರದರ್ಶನ, ಸ್ಥಳ: ಇಂಚರ ಕಲಾಕ್ಷೇತ್ರ, ವಿಜಯನಗರ 2ನೇ ಹಂತ, ಬೆಳಗ್ಗೆ 10 ರಿಂದ.

■ **ಸ್ವರ್ಣ ನೃಸಿಂಹ ದತ್ತ ಸಾಯಿ ಪೀಠಿಕೆ ಸೇವಾ ಟ್ರಸ್ಟ್ :** ಶರನ್ನವರಾತ್ರಿ ವೈಭವ–2024, ಸಪ್ತಮಿ, ದಶಮಿ, ದೀಪೋತ್ಸವ (ಸಂಜೆ 6ಕ್ಕೆ), ಸ್ಥಳ: ಶ್ರೀ ವೆಂಕಟಾರ್ಜುನ ಧ್ಯಾನ ಮಂದಿರ, ಹಾರೋಹಳ್ಳಿ. ಸಂಜೆ ಭಜನೆ, ಆರತಿ, ಸ್ಥಳ: ಗುರುನಿವಾಸ, ಸೋನಾರ್ ಬೀದಿ, ನಾರಾಯಣಶಾಸ್ತ್ರಿ ರಸ್ತೆ.

■ **ರಾಮ್‌ಸನ್ಸ್ ಪ್ರತಿಷ್ಠಾನ :** ಬೊಂಬೆ ಮನೆ, ದಸರೆಯ ಬೊಂಬೆ ಪ್ರದರ್ಶನದ 20ನೇ ಅವತರಣಿಕೆ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ಆಮ್ರಪಾಲಿ ಸೀರೆ ಮಳಿಗೆಯ ಮೇಲೆ, ನಜರ್‌ಬಾದ್, ಬೆಳಗ್ಗೆ 10ರಿಂದ ಸಂಜೆ 7ರವರೆಗೆ.

■ **ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಮೈಸೂರು ಫೋಟೋ ಜರ್ನಲಿಸ್ಟ್ ಅಸೋಸಿಯೇಷನ್ :** ದಸರಾ ಮಹೋತ್ಸವ–2024 ಅಂಗವಾಗಿ ಛಾಯಾಚಿತ್ರ ಪ್ರದರ್ಶನ, ಸ್ಥಳ: ಸುಚಿತ್ರ ಕಲಾ ಗ್ಯಾಲರಿ, ಕಲಾಮಂದಿರ, ಬೆಳಗ್ಗೆ 11.30ರಿಂದ.

■ **ಶ್ರೀ ರಾಮಕೃಷ್ಣ ಆಶ್ರಮ:** ಶ್ರೀ ಶ್ರೀ ದುರ್ಗಾಪೂಜೆ, ವಿಜಯದಶಮಿ, ಬೆಳಗ್ಗೆ 7ರಿಂದ ಶ್ರೀ ದುರ್ಗಾ ಮಾತೆಗೆ ಪೂಜೆ, ಬೆಳಗ್ಗೆ 8ರಿಂದ ದುರ್ಗಾಸಪ್ತಶತೀ ಪಾರಾಯಣ, 11ರಿಂದ ಭಜನೆ, 11.45ರಿಂದ ಆರತಿ, ಪುಷ್ಪಾಂಜಲಿ, ಸಂಜೆ 7ಕ್ಕೆ ಸಂಧ್ಯಾರತಿ, ವಿಶೇಷ ಭಜನೆ, ಸ್ಥಳ: ಶ್ರೀ ರಾಮಕೃಷ್ಣ ಆಶ್ರಮ, ಯಾದವಗಿರಿ.

■ **ಕಲಾಸುರುಚಿ:** ಕಥೆ ಕೇಳೋಣ ಬನ್ನಿ ಕಾರ್ಯಕ್ರಮ –849, ಕಥೆ ಹೇಳುವವರು: ಆನಂದ್ ಎಸ್, ಸಹ ಶಿಕ್ಷಕರು, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಡಿ. ಸಾಲುಂಡಿ, ಮೈಸೂರು ತಾಲೂಕು, ಸ್ಥಳ: ಸುರುಚಿ ರಂಗಮನೆ, 476, ಕುವೆಂಪುನಗರ, ಸಂಜೆ 4.30ಕ್ಕೆ.

■ **ಶ್ರೀ ಮುಕ್ಕಣ್ಣೇಶ್ವರ ಸ್ವಾಮಿ ದೇವಸ್ಥಾನ :** ನವರಾತ್ರಿ ಪೂಜೆ, ವಿಜಯದಶಮಿ, ಬನ್ನಿಪೂಜೆ, ಭಜನೆ, ರವಿಕಾಂತಾನಂದಸ್ವಾಮಿ ಅವರಿಂದ ಪ್ರವಚನ, ಸ್ಥಳ: ದೇವಸ್ಥಾನದ ಆವರಣ, ಸಂಜೆ 5.30ರಿಂದ.

■ **ಕಲಾಸುರುಚಿ, ಕುತೂಹಲಿ–ಕನ್ನಡ, ದಿ ಅಕಾಡೆಮಿ ಟ್ರಸ್ಟ್:** ಸೈನ್ಸ್ ಸಂಜೆ, ಬೆಂಗಳೂರಿನ ವಿಜ್ಞಾನ ಗ್ಯಾಲರಿ ನಿರ್ದೇಶಕರಾದ ಡಾ.ಜಾಹ್ನವಿ ಫಾಲ್ಕೆ ಅವರಿಂದ ಭಾಷಣ, ಸ್ಥಳ: ಸುರುಚಿ ರಂಗ ಮನೆ, ಕುವೆಂಪು ನಗರ, ಸಂಜೆ 6.30ರಿಂದ.

ಮೈಸೂರು ಆಕಾಶವಾಣಿ

ಬೆಳಗ್ಗೆ: 6.10 ಚಿಂತನ, 6.15 ದಸರಾ ಗೀತಾರಾಧನ, 6.30 ದಸರಾದಲ್ಲಿ ಇಂದು, ಪ್ರಸ್ತುತಿ: ಜಾಂಪಣ್ಣ ಆಶೀಹಾಳ್, 6.35 ಮತ್ತು ಸಂಜೆ 6.10 CFTRI ಶೋಧ ಅನುಶೋಧ, ಪ್ರಾಯೋಜಿತ ಬಾನುಲಿ ಸರಣಿ, ಪ್ರಾಯೋಜಕರು: CSIR, CFTRI, Mysuru, 6.40 ರಾಜಮಾರ್ಗ–ಮೈಸೂರಿನ ಇತಿಹಾಸ ಪ್ರಸಿದ್ಧ ಮಾರ್ಗಗಳ ಪರಿಚಯ, ಪ್ರಸ್ತುತಿ: ಡಾ.ಮೈಸೂರು ಉಮೇಶ್, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು–ಎಸ್.ಪಿ. ಬಾಲಸುಬ್ರಹ್ಮಣ್ಯಂ, 7.45 ಶರಣ ಸಂಸ್ಕೃತಿ ಉತ್ಸವ–ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು–ಶ್ರೀಜಗದ್ಗುರು ಮುರುಘ ರಾಜೇಂದ್ರ ಬೃಹನ್ಮಠ, ಚಿತ್ರದುರ್ಗ, 8.30 ಹಾದಿಯಲ್ಲಿ ಕಂಡ ಮುಖ–ಬಾನುಲಿ ಸರಣಿ, ಪ್ರಸ್ತುತಿ: ಅಬ್ದುಲ್ ರಶೀದ್, 9.05 ಚಾಮುಂಡಿ ಹಬ್ಬ–ದಸರಾ ಸಂಭ್ರಮ, ಜನಪದರ ನಾಲಿಗೆಯಲ್ಲಿ ಮೈಸೂರು ದೇವತೆ, ರಚನೆ: ಡಾ.ಪಿ.ಕೆ.ರಾಜಶೇಖರ್, ಪ್ರಸ್ತುತಿ: ಡಾ.ಮೈಸೂರು ಉಮೇಶ್, 9.35 ಚಿತ್ರಗೀತೆಗಳು, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ, ಮಣಿ ಕೃಷ್ಣಸ್ವಾಮಿ–ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ 'ನಮ್ಮೂರ್ ಹೆಸರು' ಪ್ರಸ್ತುತಿ: ಡಾ.ಮೈಸೂರು ಉಮೇಶ್ **ಮಧ್ಯಾಹ್ನ:** 12.30 ಆಯುಷ್‌ವಾಣಿ–ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು: ಆಯುಷ್ ಇಲಾಖೆ, 12.35 ದೇವರನಾಮ, 12.45 ಜನಪದ ಸಂಗೀತ, 1.20 ಮೈಸೂರಿನ ಅಂಬಾ ವಿಲಾಸ ಅರಮನೆ ಆವರಣದಲ್ಲಿ ನಡೆಯಲಿರುವ ಜಂಜೂಸವಾರಿ ನೇರ ವೀಕ್ಷಕ ವಿವರಣೆ, 6.50 ಕೃಷಿರಂಗ: ಕಿಸಾನ್‌ವಾಣಿ–ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ, ಸಮಗ್ರ ಕೃಷಿಯ ಪ್ರಾಮುಖ್ಯತೆ ಕುರಿತು ಗುಂಡ್ಲುಪೇಟೆ ತಾಲೂಕು ಬೇಗೂರು ಹೋಬಳಿ ಹಳೇಪುರದ ನಂಜಯ್ಯ ಅವರೊಂದಿಗೆ ಸಂದರ್ಶನ. ಸಂದರ್ಶಕರು: ಎನ್.ಕೇಶವಮೂರ್ತಿ, 8.00 ಯುವವಾಣಿ, 8.30 ಅರಮನೆ ಸಂಗೀತ ವೈಭವ–ಸಂಗೀತ ರೂಪಕ, 9.30 ಸವಿನೆನಪು–ಹಳೆಯ ಕನ್ನಡ ಚಿತಗೀತೆಗಳು, 10.00 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ, ವಿದುಷಿ ಆರ್.ಎಸ್.ಜಯಲಕ್ಷ್ಮೀ–ವೀಣಾವಾದನ

ಆಕರ್ಷಕ ದೀಪಾಲಂಕಾರ ಬೆಳಗಲು ವಿಳಂಬ

● ಸ್ಥಳೀಯರು, ಪ್ರವಾಸಿಗರ ಬೇಸರ ● ಕೆಲಕಾಲ ನಿಂತಲ್ಲೇ ನಿಂತ ಅಂಬಾರಿ ಬಸ್



ಮೈಸೂರಿನ ಹೃದಯಭಾಗದಲ್ಲಿರುವ ಕೆ.ಆರ್.ವೃತ್ತದಲ್ಲಿ ಗುರುವಾರ ರಾತ್ರಿ 7.30ರಲ್ಲೂ ವಿದ್ಯುತ್ ದೀಪಾಲಂಕಾರ ಬೆಳಗಿರಲಿಲ್ಲ.

ಮೈಸೂರು, ಅ.10(ಎಸ್‌ಬಿಡಿ)– ಮೈಸೂರು ದಸರಾ ವೈಭವ ಹೆಚ್ಚಿಸಿರುವ ಅತ್ಯಾಕರ್ಷಕ ವಿದ್ಯುತ್ ದೀಪಾಲಂಕಾರ ಬೆಳಗುವುದು ವಿಳಂಬವಾದ ಕಾರಣದಿಂದ ಜನ ಬೇಸರಗೊಂಡ ಪ್ರಸಂಗ ನಡೆಯಿತು.

ನವರಾತ್ರಿಯ ಎಂಟನೇ ದಿನವಾದ ಗುರುವಾರ ಸಂಜೆ ವರ್ಣರಂಜಿತ ವಿದ್ಯುತ್ ದೀಪಾಲಂಕಾರವನ್ನು ಕಣ್ತುಂಬಿಕೊಳ್ಳಲು ಸಾವಿರಾರು ಜನ ಜಮಾಯಿಸಿದ್ದರು. ಆಯುಧಪೂಜೆಗೆ ಪೂಜಾ ಸಾಮಗ್ರಿಗಳ ಖರೀದಿಗೆ ಬಂದಿದ್ದವರೂ ನಗರ ಪ್ರದಕ್ಷಿಣೆ ಮಾಡುತ್ತಿದ್ದರು. ಹಸಿರು ಚಪ್ಪರ ಸೇರಿದಂತೆ ಪ್ರಮುಖ ರಸ್ತೆ ಹಾಗೂ ವೃತ್ತಗಳಲ್ಲಿ ಕಾದು ನಿಂತಿದ್ದರು. ಆದರೆ ನಿಗದಿತ ಸಮಯವಾದ ಸಂಜೆ 7ಕ್ಕೆ ವಿದ್ಯುತ್ ದೀಪಗಳು ಪ್ರಜ್ವಲಿಸಲಿಲ್ಲ. 5–10 ನಿಮಿಷ ಹೆಚ್ಚು, ಕಡಿಮೆ ಆಗಬಹುದು ಎಂದು ಎದುರು ನೋಡಿದರು.

ಆದರೆ ಅರ್ಧ ಗಂಟೆ ಕಳೆದರೂ ಆನ್ ಆಗಲೇ ಇಲ್ಲ. ಇದರಿಂದ ಕಾದಿದ್ದವರ ಮುಖದಲ್ಲಿ ಬೇಸರ ಭಾವ ಮೂಡಲಾರಂಭಿಸಿತು. ಇಂದು ವಿದ್ಯುತ್ ದೀಪಾಲಂಕಾರ ಬೆಳಗುವುದೋ, ಇಲ್ಲವೋ ಎಂಬ ಗೊಂದಲಕ್ಕೆ ಒಳಗಾದರು. ಕೆಲವರು ರಸ್ತೆ ಬದಿಯಲ್ಲೇ ನಿಧಾನವಾಗಿ ಹೆಜ್ಜೆ ಹಾಕುತ್ತಿದ್ದರು. ಮತ್ತಷ್ಟು ಮಂದಿ ವೃತ್ತಗಳಲ್ಲಿನ ವಿಶೇಷ ವಿದ್ಯುತ್ ದೀಪಾಲಂಕೃತ ಆಕೃತಿಗಳನ್ನು ಕಣ್ತುಂಬಿಕೊಳ್ಳಲೆಂದು ಅಲ್ಲಿಯೇ ನಿಂತಿದ್ದರು. ರಾತ್ರಿ 7.42ಕ್ಕೆ ವಿದ್ಯುತ್ ದೀಪಾಲಂಕಾರ ಝಗಮಗಿಸಿತು. ಸುಮಾರು ಮುಕ್ಕಾಲು ಗಂಟೆ ಕಾದಿದ್ದವರ ಸಂತಸ ಮುಗಿಲು ಮುಟ್ಟಿತ್ತು. ಹೋ... ಎಂದು ಉದ್ಘರಿಸಿ ತಮ್ಮ ಮೊಬೈಲ್‌ಗಳಲ್ಲಿ ಸೆರೆ ಹಿಡಿದರು.

ಅಂಬಾರಿ ಬಸ್‌ಗೂ ಬ್ರೇಕ್: ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ(ಕೆಎಸ್‌ಟಿಡಿಸಿ)ದ 'ಅಂಬಾರಿ' ಡಬ್ಬಲ್ ಡೆಕ್ಕರ್ ಬಸ್ ಸಂಚಾರಕ್ಕೆ ಉತ್ತಮ ಸ್ಪಂದನೆ ವ್ಯಕ್ತವಾಗುತ್ತಿದೆ. ಅದರಲ್ಲೂ ದಸರಾ ದೀಪಾಲಂಕಾರ ವೀಕ್ಷಣೆಗೆಂದೇ ವಿಶೇಷ ಟ್ರಿಪ್ ವ್ಯವಸ್ಥೆ ಮಾಡಲಾಗಿದೆ. ಈ ಬಸ್‌ನ ಅಪ್ಪರ್ ಡೆಕ್ಕರ್ ಸೀಟ್‌ಗಳಿಗಂತೂ ಭಾರೀ ಬೇಡಿಕೆ ಇದೆ. ಹಾಗೆಯೇ ಗುರುವಾರ ಸಂಜೆ 6.30ರ ಬಸ್‌ನಲ್ಲಿ ತೆರಳಿದ ಪ್ರಯಾಣಿಕರಿಗೆ ನಿರಾಸೆಯಾಯಿತು. ಪ್ರಯಾಣಿಕರು ಬೇಸರ ವ್ಯಕ್ತಪಡಿಸಿದ್ದರಿಂದ ಅಂಬಾರಿ ಬಸ್ ಅನ್ನು ರಾಮಸ್ವಾಮಿ ವೃತ್ತದಲ್ಲಿ ನಿಲ್ಲಿಸಿ, ದೀಪಾಲಂಕಾರ ಬೆಳಗಿದ ನಂತರ ಸಂಚಾರ ಮುಂದುವರೆಸಲಾಯಿತು ಎಂದು ತಿಳಿದು ಬಂದಿದೆ.

ತಾಂತ್ರಿಕ ಸಮಸ್ಯೆ: ವಿದ್ಯುತ್ ದೀಪಾಲಂಕಾರದ ಬಗ್ಗೆ ಸಾರ್ವಜನಿಕರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗುತ್ತಿದೆ. ದೀಪಾಲಂಕಾರದಲ್ಲಿ ವ್ಯತ್ಯಯವಾಗದಂತೆ ನಿಗಾ ವಹಿಸಲಾಗಿದೆ. ಆದರೆ ತಾಂತ್ರಿಕ ಸಮಸ್ಯೆಯಿಂದಾಗಿ ಗುರುವಾರ ರಾತ್ರಿ ವಿಳಂಬವಾಯಿತು. ಅಡಚಣೆಗಾಗಿ ವಿಷಾಧಿಸುವುದಾಗಿ ಸೆಸ್ಕ್ ಅಧಿಕಾರಿಗಳು ತಿಳಿಸಿದ್ದಾರೆ.



ವಿದ್ಯುತ್ ದೀಪಗಳಿಂದ ನಿರ್ಮಿಸಿರುವ ಡೊಳ್ಳು ಕಲಾವಿದನ ಕಲಾಕೃತಿ ಜೊತೆಗೆ ವರ್ಣರಂಜಿತವಾಗಿ ಕಂಗೊಳಿಸಿದ ಕೆ.ಆರ್.ವೃತ್ತವನ್ನು ಜನ ಕಣ್ತುಂಬಿಕೊಂಡರು.

ಪೊಲೀಸ್ ಸಿಬ್ಬಂದಿಗೆ ದಸರಾ ಪಾಸ್ ವಿತರಣೆಯಲ್ಲಿ ನಿರ್ಲಕ್ಷ

ಮೈಸೂರು, ಅ.10– ವಿಶ್ವವಿಖ್ಯಾತ ದಸರಾ ಮಹೋತ್ಸವ ಯಶಸ್ವಿಯಾಗಿ ಸಂಪನ್ನಗೊಳ್ಳುವಲ್ಲಿ ಪೊಲೀಸರ ಪಾತ್ರ ಬಹಳ ಮಹತ್ವದ್ದಾಗಿದೆ. ಆದರೆ ಜಂಬೂಸವಾರಿ ಹಾಗೂ ಪಂಜಿನ ಕವಾಯತು ಪಾಸ್ ವಿತರಣೆಯಲ್ಲಿ ಸಿಬ್ಬಂದಿಯನ್ನು ಸಂಪೂರ್ಣವಾಗಿ ನಿರ್ಲಕ್ಷಿಸಲಾಗಿದೆ ಎಂಬ ಅಳಲು ವ್ಯಕ್ತವಾಗಿದೆ.

ದಸರಾ ಮಹೋತ್ಸವದ ಹತ್ತು ದಿನಗಳೂ ಪೊಲೀಸ್ ಸಿಬ್ಬಂದಿ ತಮಗೆ ನಿಯೋಜಿಸಿದ ಸ್ಥಳದಲ್ಲಿ ಕಾರ್ಯ ನಿರ್ವಹಿಸಬಹುದೇ ಹೊರತು, ಸಾಮಾನ್ಯರಂತೆ ಕುಟುಂಬದವರೊಂದಿಗೆ ದಸರಾ ಸಂಭ್ರಮವನ್ನು ಪರಿಪೂರ್ಣವಾಗಿ ಆಸ್ವಾದಿಸಲು ಸಾಧ್ಯವೇ ಇಲ್ಲ. ಈ ಬಗ್ಗೆ ಕುಟುಂಬದವರಲ್ಲೂ ಬೇಸರವಿದೆ. ಶ್ರಮಿಕ ಪೊಲೀಸ್ ಸಿಬ್ಬಂದಿ ಕುಟುಂಬದವರಿಗೆ ಜಂಬೂಸವಾರಿ ಹಾಗೂ ಪಂಜಿನ ಕವಾಯತು ವೀಕ್ಷಣೆಗೆ ಅವಕಾಶವಾಗಬೇಕು. ಇದೇ ಉದ್ದೇಶದಿಂದ ಹಿಂದಿನ ವರ್ಷಗಳಲ್ಲಿ ಪೊಲೀಸ್ ಸಿಬ್ಬಂದಿಗೆ ಪಾಸ್ ನೀಡಲಾಗುತ್ತಿತ್ತು. ಆದರೆ ಈ ಬಾರಿ ಒಂದೂ ಪಾಸ್ ಸಿಬ್ಬಂದಿ ಕೈ ಸೇರಿಲ್ಲ. ಅದರಲ್ಲೂ ಕೆಎಸ್‌ಆರ್‌ಪಿ ಹಾಗೂ ಸಿಎಆರ್ ಸಿಬ್ಬಂದಿಯನ್ನಂತೂ ಕೇಳುವವರೇ ಇಲ್ಲ. ದಣಿವರಿಯದೆ ದುಡಿಯುವ ನಮನ್ನು ಇಷ್ಟೊಂದು ನಿರ್ಲಕ್ಷಿಸಿದರೆ ಹೇಗೆ? ನಮಗೂ ಕುಟುಂಬವಿದೆ, ಭಾವನೆಗಳಿವೆ. ಕುಟುಂಬದ ಸದಸ್ಯರ ಆಸೆ–ಅಭಿಲಾಷೆಯನ್ನೂ ಪೂರೈಸಲಾಗದಿದ್ದರೆ ನೋವಾಗುವುದಿಲ್ಲವೇ ಎಂದು ಪೊಲೀಸ್ ಸಿಬ್ಬಂದಿ ಅಳಲು ತೋಡಿಕೊಂಡಿದ್ದಾರೆ.

ದಸರಾ ಮಹೋತ್ಸವದಲ್ಲಿ ಸಾರ್ವಜನಿಕರ ರಕ್ಷಣೆ, ಸಂಚಾರ ನಿರ್ವಹಣೆ, ಕಾನೂನು–ಸುವ್ಯವಸ್ಥೆ ನಿರ್ವಹಣೆಗಾಗಿ ಹಗಲಿರುಳು ಕೆಲಸ ಮಾಡುವ ಸಿಬ್ಬಂದಿಯ ಕುಟುಂಬದ ಬಗ್ಗೆ ಮೇಲಧಿಕಾರಿಗಳು ಗಮನಹರಿಸುವರೇ ಎಂದು ನೋಡಬೇಕಿದೆ.

ಸಿಎಂ ಸಿದ್ದರಾಮಯ್ಯ ನಾಯಕತ್ವಕ್ಕೆ ಸಂಪುಟ ಒಕ್ಕೊರಲ ಬೆಂಬಲ

ಬೆಂಗಳೂರು, ಅ.10(ಕೆಎಂಶಿ)– ಮುಖ್ಯಮಂತ್ರಿ ಸಿದ್ದರಾಮಯ್ಯ ನಾಯಕತ್ವಕ್ಕೆ ರಾಜ್ಯ ಸಚಿವ ಸಂಪುಟ ಇಂದಿಲ್ಲಿ ತನ್ನ ಪೂರ್ಣ ಬೆಂಬಲ ವ್ಯಕ್ತಪಡಿಸಿದೆ.

ಮುಡಾ ಪ್ರಕರಣಕ್ಕೆ ಸಂಬಂಧಿಸಿದಂತೆ ಇ.ಡಿ. ಮತ್ತು ಲೋಕಾಯುಕ್ತ ತನಿಖೆ ನಡೆದಿರುವ ಬೆನ್ನಲ್ಲೇ ಆಡಳಿತ ಪಕ್ಷದಲ್ಲಿ ಕೇಳಿಬರುತ್ತಿರುವ ಒಳ ರಾಜಕೀಯ ಮಾತುಗಳ ಹಿನ್ನೆಲೆಯಲ್ಲಿ ಸಿದ್ದರಾಮಯ್ಯ ಅವರ ನಾಯಕತ್ವಕ್ಕೆ ಪೂರ್ಣ ಬೆಂಬಲ ವ್ಯಕ್ತಪಡಿಸಿ ಸಂಪುಟ ನಿರ್ಣಯ ಕೈಗೊಂಡಿದೆ.

ಸಿದ್ದರಾಮಯ್ಯ ಆಪ್ತ ವಲಯದಲ್ಲಿ ಗುರುತಿಸಿಕೊಂಡಿರುವ ಪರಿಶಿಷ್ಟ ಜಾತಿ ಮತ್ತು ವರ್ಗದ ಸಚಿವರು ಆಗಿಂದಾಗ್ಯೆ ಸಭೆ ಸೇರಿ ಚರ್ಚೆ ಮಾಡುವುದು ಹಾಗೂ ಕೆಲವು ಶಾಸಕರನ್ನು ವಿಶ್ವಾಸಕ್ಕೆ ಪಡೆಯಲು ಹೊರಟಿರುವುದು ಸಭೆಯಲ್ಲಿ ಪ್ರಸ್ತಾಪವಾಗಿದೆ. ಸಂಪುಟ ಸಭೆ ನಂತರ ಅಧಿಕಾರಿಗಳನ್ನು ಹೊರಗೆ ಕಳುಹಿಸಿ, ಪ್ರಸಕ್ತ ರಾಜಕೀಯ ಸನ್ನಿವೇಶ, ಕೆಲವು ಪ್ರಕರಣಗಳಲ್ಲಿ ಕೇಂದ್ರ ಇ.ಡಿ. ಮಧ್ಯ ಪ್ರವೇಶ ಮಾಡುತ್ತಿರುವ ಬಗ್ಗೆ ಚರ್ಚೆ ನಡೆದಿದೆ.

ಪರ್ಯಾಯ ನಾಯಕತ್ವದ ಬಗ್ಗೆಯೂ ಮಾತುಗಳು ಕೇಳಿಬರುತ್ತಿರುವ ಕುರಿತು ಹಿರಿಯ ಸಚಿವರೊಬ್ಬರು ಸಭೆಯಲ್ಲಿ ಆಕ್ಷೇಪ ವ್ಯಕ್ತಪಡಿಸಿದಾಗ, ಅಂತಹ ಯಾವುದೇ ಚಟುವಟಿಕೆಗಳು ನಡೆಯುತ್ತಿಲ್ಲ ಎಂದು ಆ ಗುಂಪಿನ ಸಚಿವರೊಬ್ಬರು ತಿಳಿಸಿದ್ದಾರೆ.

ಸಿದ್ದರಾಮಯ್ಯ ಅವರು ಅಧಿಕಾರದಲ್ಲಿ ಇರುವವರೆಗೂ ಅವರಿಗೆ ನಮ್ಮ ಸಂಪೂರ್ಣ ಬೆಂಬಲವಿದೆ ಎಂದಾಗ, ಇಡೀ ಸಂಪುಟ ಸಭೆ ಬೆಂಬಲ ವ್ಯಕ್ತಪಡಿಸಿತಲ್ಲದೆ, 'ನಿಮ್ಮ ಜೊತೆ ನಾವಿದ್ದೇವೆ' ಎಂದು ಸಚಿವರು ಒಕ್ಕೊರಲಿನ ಬೆಂಬಲ ವ್ಯಕ್ತಪಡಿಸಿದ್ದಾರೆ.





ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ

ಮೈಸೂರು ನಗರ ವಿಭಾಗ, ಮೈಸೂರು

ಸಂಖ್ಯೆ:ಕರಾಸ/ಮೈನವಿ/ಸಂ/ವಾ/2010/2024-25 ದಿನಾಂಕ: 09-10-2024

ಇ-ಟೆಂಡರ್ ಪ್ರಕಟಣೆ ಸಂಖ್ಯೆ : 05/2024
(ಇ-ಪ್ರೊಕ್ಯೂರ್‌ಮೆಂಟ್ ಮತ್ತು ನೇರವಾಗಿ)

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ ಮೈಸೂರು ನಗರ ವಿಭಾಗದ ವ್ಯಾಪ್ತಿಯ **ಮೈಸೂರು ನಗರ ಬಸ್ ನಿಲ್ದಾಣ, ಆರ್.ಎಸ್.ನಾಯ್ಡುನಗರ, ಇಲವಾಲ, ನಂಜನಗೂಡು, ಟಿ.ನರಸೀಪುರ, ಸುತ್ತೂರು ಮತ್ತು ಹುಲ್ಲಹಳ್ಳಿ ಬಸ್ ನಿಲ್ದಾಣದಲ್ಲಿ ಖಾಲಿ ಇರುವ/ಖಾಲಿಯಾಗಲಿರುವ ವಾಣಿಜ್ಯ ಸ್ಥಳಗಳಾದ ಶಾಶ್ವತ ಮಳಿಗೆ, ಕೊಠಡಿ ಮತ್ತು ತೆರೆದ ಸ್ಥಳಗಳಲ್ಲಿ "ಉಪಹಾರ ಗೃಹ, ಚಾಟ್ಸ್ ಸೆಂಟರ್, ಮಿಲ್ಕ್ ಪಾರ್ಲರ್ ಫಂಕ್ಷನ್ ಹಾಲ್ ಜನರಲ್ ಸ್ಟಾಲ್ (ವ್ಯಾಪಾರ/ಕಛೇರಿ) ದ್ವಿಚಕ್ರ ವಾಹನ ನಿಲ್ದಾಣ ನಡೆಸಲು** ಪರವಾನಗಿದಾರರನ್ನು ಆಯ್ಕೆ ಮಾಡುವ ಸಲುವಾಗಿ ಇ-ಟೆಂಡರ್ ಪ್ರಕಟಣೆಯನ್ನು ಹೊರಡಿಸಲಾಗಿದೆ. ಶಾಶ್ವತ ಮಳಿಗೆ, ಕೊಠಡಿಗಳನ್ನು **ಐದು (05)** ವರ್ಷಗಳ ಅವಧಿಗೆ ಮತ್ತು ತೆರೆದ ಸ್ಥಳಗಳನ್ನು **ಮೂರು (03)** ವರ್ಷಗಳ ಅವಧಿಗೆ ಎಲ್ಲಿದೆಯೋ ಹಾಗೂ ಯಾವ ಸ್ಥಿತಿಯಲ್ಲಿವೆಯೋ ಹಾಗೆಯೇ ಆಧಾರದ ಮೇಲೆ ಪರವಾನಗಿಯನ್ನು ಇ-ಟೆಂಡರ್, ಮ್ಯಾನ್ಯುಲ್ ಹಾಗೂ ಸಂಧಾನದ ಮುಖಾಂತರ ನೀಡಲಾಗುವುದು.

ಇ-ಟೆಂಡರ್ ಪ್ರಕಟಣೆ ವಿವರ: 1) ಇ-ಟೆಂಡರ್ ಕುರಿತು ವಿಚಾರಣೆಗೆ ಕಡೆಯ ದಿನಾಂಕ: **29/10/2024 ಸಮಯ: 17.00 ಗಂಟೆ.** 2) ಇ-ಟೆಂಡರ್/ಅರ್ಜಿ ಸಲ್ಲಿಸಲು ಕಡೆಯ ದಿನಾಂಕ: **30/10/2024 ಸಮಯ: 15.00 ಗಂಟೆ.** 3) ಇ-ಟೆಂಡರ್ ಟೆಕ್ನಿಕಲ್ ಬಿಡ್ ತೆರೆಯುವ ದಿನಾಂಕ: **04/11/2024 ಸಮಯ: 15.00 ಗಂಟೆ.** 4) ಇ-ಟೆಂಡರ್ ತೆರೆಯುವ ದಿನಾಂಕ: **06/11/2024 ಸಮಯ: 16.00 ಗಂಟೆ.** 5) ದಾಖಲಾತಿಗಳನ್ನು ಕಛೇರಿಗೆ ಸಲ್ಲಿಸಲು ಕಡೆಯ ದಿನಾಂಕ: **30/10/2024 ಸಮಯ: 17.00 ಗಂಟೆ.**

ಮ್ಯಾನ್ಯುಲ್ ಪ್ರಕಟಣೆ ವಿವರ: 1) ಮ್ಯಾನ್ಯುಲ್ ಟೆಂಡರ್ ಕುರಿತು ವಿಚಾರಣೆಗೆ ಕಡೆಯ ದಿನಾಂಕ: **29/10/2024 ಸಮಯ: 17.00 ಗಂಟೆ.** 2) ಮ್ಯಾನ್ಯುಲ್ ಟೆಂಡರ್/ಅರ್ಜಿ ಸಲ್ಲಿಸಲು ಕಡೆಯ ದಿನಾಂಕ: **04/11/2024 ಸಮಯ: 12.00 ಗಂಟೆ.** 3) ಮ್ಯಾನ್ಯುಲ್ ಟೆಂಡರ್ ಅರ್ಜಿ & ದಾಖಲಾತಿಗಳೊಂದಿಗೆ ಮ್ಯಾನ್ಯುಯಲ್ ಟೆಂಡರ್ ಪೆಟ್ಟಿಗೆಗೆ ಹಾಕುವ ದಿನಾಂಕ: **05/11/2024 ಸಮಯ: 12.00 ಗಂಟೆ.** 4) ಮ್ಯಾನ್ಯುಲ್ ಟೆಂಡರ್ ತೆರೆಯುವ ದಿನಾಂಕ: **05/11/2024 ಸಮಯ: 15.00 ಗಂಟೆ.**

ಸಂಧಾನ ಟೆಂಡರ್ ಪ್ರಕಟಣೆ ವಿವರ: 1) ಸಂಧಾನ ಟೆಂಡರ್ ಕುರಿತು ವಿಚಾರಣೆಗೆ ಕಡೆಯ ದಿನಾಂಕ: **29/10/2024 ಸಮಯ: 17.00 ಗಂಟೆ.** 2) ಸಂಧಾನ ಟೆಂಡರ್/ಅರ್ಜಿ ಸಲ್ಲಿಸಲು ಕಡೆಯ ದಿನಾಂಕ: **30/10/2024 ಸಮಯ: 13.00 ಗಂಟೆ.** 3) ದಾಖಲಾತಿಗಳನ್ನು ಕಛೇರಿಗೆ ಸಲ್ಲಿಸಲು ಕಡೆಯ ದಿನಾಂಕ: **30/10/2024 ಸಮಯ: 17.00 ಗಂಟೆ.** 4) ಸಂಧಾನ ಸಭೆಗೆ ಹಾಜರಾಗಲು ಕಡೆಯ ದಿನಾಂಕ: **04/11/2024 ಸಮಯ: 12.00 ಗಂಟೆ.**

ಹೆಚ್ಚಿನ ವಿವರಗಳಿಗಾಗಿ ವಿಭಾಗೀಯ ಕಛೇರಿ, ಕ.ರಾ.ರ.ಸಾ.ನಿಗಮ, ಮೈಸೂರು ನಗರ ವಿಭಾಗ(ಸಂಚಾರ ಶಾಖೆ), ನೆಲ್ಸನ್‌ಮಂಡೇಲಾ ರಸ್ತೆ, ಬನ್ನಿಮಂಟಪ, ಮೈಸೂರು ರವರನ್ನು ಸಂಪರ್ಕಿಸಲು ಕೋರಲಾಗಿದೆ. **(ದೂ:- 9480665919, 7019026615, 9606978102)**

ಸಹಿ/-
ವಿಭಾಗೀಯ ನಿಯಂತ್ರಣಾಧಿಕಾರಿಗಳು
ಮೈಸೂರು ನಗರ ವಿಭಾಗ

ವಾಸಾಸಂಇ/ವಾ.ಪ್ರ/2508/ಎಂಎಎ/2024-25

ಸಾರ್ವಜನಿಕ ಪ್ರಕಟಣೆ

ಈ ಮೂಲಕ ಸಾರ್ವಜನಿಕರಲ್ಲಿ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ಷೆಡ್ಯೂಲ್‌ನಲ್ಲಿ ನಮೂದಿಸಿ ರುವ ಸ್ವತ್ತು ನಮ್ಮ ಕಕ್ಷಿದಾರರಾದ ಮೈಸೂರು ನಗರ, ಉದಯಗಿರಿ, 2ನೇ ಹಂತ, 2ನೇ ಅಡ್ಡ ರಸ್ತೆ, ಮನೆ ನಂ. 203 ರಲ್ಲಿ ವಾಸವಾಗಿರುವ ಲೇಟ್ ಸಮಿ ಉರ್ ರೆಹಮಾನ್ ಖಾನ್ ರವರ ಖಾಸ ಮಗಳು ಶ್ರೀಮತಿ ರಿಜ್ವಾನ ಸಲೀಂ ರವರ ಮಾಲೀಕತ್ವಕ್ಕೆ ಸೇರಿದ ಸ್ವತ್ತಾಗಿದ್ದು, ಸದರಿ ಸ್ವತ್ತಿಗೆ ಸಂಬಂಧಪಟ್ಟಂತೆ ಶ್ರೀಮತಿ ರಿಜ್ವಾನ ಸಲೀಂ ರವರು ಮೈಸೂರು ಕಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯದಲ್ಲಿ ಅಸಲು ದಾವೆ ಸಂಖ್ಯೆ 84/2024 ರಲ್ಲಿ ಶ್ರೀಮತಿ ರಿಜ್ವಾನ ಸಲೀಂ, ಶ್ರೀ. ಮಿರಾತ್ ನೈನ್, **(imposters)** ಮತ್ತು ಶ್ರೀ ಲೋಕೇಶ ಹಾಗೂ ಶ್ರೀ ರತ್ನಾಕರ್ ಎನ್.ಕೆ. ರವರ ವಿರುದ್ಧ ಮಧ್ಯಂತರ ತಡೆಯಾಜ್ಞೆಯನ್ನು ಪಡೆದಿರುತ್ತಾರೆ.

ಆದ್ದರಿಂದ ಈ ಬಗ್ಗೆ ಸಾರ್ವಜನಿಕರಲ್ಲಿ ತಿಳಿಸುವುದೇನೆಂದರೆ ಸದರಿ ಸ್ವತ್ತಿಗೆ ಸಂಬಂಧಿಸಿದಂತೆ ಮೇಲೆ ತಿಳಿಸಿದ ವ್ಯಕ್ತಿಗಳೊಂದಿಗೆ ಯಾವುದೇ ವ್ಯವಹಾರವನ್ನು ಮಾಡಬಾರದಾಗಿಯೂ ಹಾಗೂ ಸದರಿ ಸ್ವತ್ತಿಗೆ ಯಾರೂ ಕೂಡ ಅತಿಕ್ರಮ ಪ್ರವೇಶ ಮಾಡಬಾರದಾಗಿಯೂ ಈ ಮೂಲಕ ತಿಳಿಯಪಡಿಸಲಾಗಿದೆ. ಒಂದು ವೇಳೆ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಯಾವುದೇ ವ್ಯವಹಾರವನ್ನು ಮಾಡಿದ್ದಲ್ಲಿ ಅದು ನಮ್ಮ ಕಕ್ಷಿದಾರರ ಹಕ್ಕಿಗೆ ಬದ್ಧಪಡಿಸುವುದಿಲ್ಲವೆಂದು ಈ ಮೂಲಕ ತಿಳಿಯಪಡಿಸಲಾಗಿದೆ.

ಷೆಡ್ಯೂಲ್ ಸ್ವತ್ತಿನ ವಿವರ

ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ಆಲನಹಳ್ಳಿ ಗ್ರಾಮದಲ್ಲಿರುವ ಸರ್ವೆ ನಂ. 32/2 ರ ವಿಸ್ತೀರ್ಣ 2 ಎಕರೆ 20 ಗುಂಟೆ ಜಮೀನು ಇದಕ್ಕೆ ಚಕ್ಕುಬಂಧಿ :–

ಪೂರ್ವಕ್ಕೆ: ಮುಯೀಜ್ ಉರ್ ರೆಹಮಾನ್‌ರವರಿಗೆ ಸೇರಿದ ಜಮೀನು ಹಾಗೂ ಲಲಿತಾದ್ರಿಪುರ ರಸ್ತೆ ; ಪಶ್ಚಿಮಕ್ಕೆ : ಸರ್ಕಾರಿ ನಾಲೆ

ಉತ್ತರಕ್ಕೆ : ಸರ್ವೆ ನಂ. 32/1 ರ ಜಮೀನು ; ದಕ್ಷಿಣಕ್ಕೆ : ಸರ್ಕಾರಿ ಜಮೀನು.

Sd/- J.M. Aiyanna, B.Sc., LL.B., Advocate,
KAR No. 1635/1995, Office: #1143/1E, 1st Floor,
Chanakya Circle, Geetha Road, Chamarajapuram,
Mysuru-570 005. Mob: 98451 13628

ದಿನಾಂಕ: 10-10-2024
ಸ್ಥಳ: ಮೈಸೂರು





ನಕ್ಕರೆ ಅದೇ ಸ್ವರ್ಗ

ಭಿಕ್ಷುಕ : ಅವ್ಮಾ, ಒಂದು ರೊಟ್ಟಿ ಕೊಡಿ ತಾಯಿ
ಅಮ್ಮ : ಇನ್ನೂ ರೊಟ್ಟಿ ಮಾಡಿಲ್ಲ. ಆಮೇಲೆ ಬಾ
ಭಿಕ್ಷುಕ : ಮೊಬೈಲ್ ನಂಬರ್ ತಗೊಳ್ಳಿ.
ರೆಡಿ ಆದ ಮೇಲೆ ಮಿಸ್ ಕಾಲ್ ಕೊಡಿ

ಮೈಸೂರು ಮಿತ್ರ

ಶುಕ್ರವಾರ, 11 ಅಕ್ಟೋಬರ್ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ..........

ಸಮಯ ಓಡುತ್ತಿದೆ. ನೀನು ನಡೆಯುತ್ತಿದ್ದೀಯಾ
ಅನ್ನೋದನ್ನ ಅರ್ಥ ಮಾಡಿಕೊಂಡ ಕ್ಷಣ ನಿನ್ನಲ್ಲಿ
ಸಾಧಿಸುವ ಛಲ ಬರುತ್ತೆ. – ನುಡಿಮುತ್ತು

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ತತ್ವದಲ್ಲಿ ಸತ್ವ ಹುಡುಕು, ವ್ಯಥೆಯಲ್ಲಿ ಕಥೆ ಹುಡುಕು.

ನಿಮ್ಮ ಪತ್ರಗಳು

ಭಾರತದ ರತ್ನ ರತನ್ ಟಾಟಾ ನಿಧನ ಉದ್ಯಮ ಕ್ಷೇತ್ರಕ್ಕೆ ತುಂಬಲಾರದ ನಷ್ಟ

ಮಾನ್ಯರೆ,



'ಪುರದ ಪುಣ್ಯಂ ಪುರುಷ ರೂಪಿಂದೆ ಪೋಗುತಿದೆ' ವಿಶ್ವಾಮಿತ್ರ ಋಷಿಯ ಮಾತಿನಂತೆ ತನ್ನ ಸಾಮ್ರಾಜ್ಯವನ್ನು ತ್ಯಜಿಸಿ ಹೊರನಡೆಯುತ್ತಿರುವ ಹರಿಶ್ಚಂದ್ರನನ್ನು ಕಂಡು ಅಯೋಧ್ಯೆಯ ಪ್ರಜೆಗಳು ಉದ್ಗರಿಸುತ್ತಾರೆ. ಮೇಲಿನ ಈ ಸಾಲು ಈಗ ನಮ್ಮನ್ನು ಅಗಲಿದ ಖ್ಯಾತ ಉದ್ಯಮಿ, ಅಪ್ಪಟ ದೇಶಪ್ರೇಮಿ, ಅಜಾತಶತ್ರು, ನಿರಹಂಕಾರಿ, ಕೊಡುಗೈ ದಾನಿ ಹೀಗೆ ಎಲ್ಲಾ ಉಪಮೇಯಗಳಿಗೂ ನಿಲುಕದ 'ರತನ್ ನೇವಲ್ ಟಾಟಾ' ನಿಧನವಾಗಿರುವುದು ಭಾರತದ ಉದ್ಯಮ ಕ್ಷೇತ್ರಕ್ಕೆ ತುಂಬಲಾರದ ನಷ್ಟವೆಂದರೆ ತಪ್ಪಾಗಲಾರದು.

ರತನ್ ಟಾಟಾ ಪಾರ್ಸಿ ಜೊರಾಸ್ಟ್ರಿಯನ್ ಕುಟುಂಬದಲ್ಲಿ, 28 ಡಿಸೆಂಬರ್ 1937 ರಂದು ಜನಿಸಿದರು. ಇವರ ತಂದೆ ನೇವಲ್ ಟಾಟಾ ಅವರನ್ನು ಜಮ್ಸೆಟ್ಜಿ ಟಾಟಾ ಅವರ ಮಗ ರತನ್‌ಜೀ ಟಾಟಾ ಅವರು ದತ್ತು ಪಡೆದರು. ಅವರು ಟಾಟಾ ಗ್ರೂಪ್‌ನ ಸಂಸ್ಥಾಪಕರಾಗಿದ್ದರು. ಅವರು ಕಾರ್ನೆಲ್ ಯೂನಿವರ್ಸಿಟಿ ಕಾಲೇಜ್ ಆಫ್ ಆರ್ಕಿಟೆಕ್ಚರ್‌ನಿಂದ ಆರ್ಕಿಟೆಕ್ಚರ್‌ನಲ್ಲಿ ಸ್ನಾತಕೋತ್ತರ ಪದವಿ ಪಡೆದರು. ಟಾಟಾ ಅವರು 1961ರಲ್ಲಿ ಟಾಟಾ ಗ್ರೂಪ್ ಸೇರಿದರು. ಅಲ್ಲಿ ಅವರು ಟಾಟಾ ಸ್ಟೀಲ್ ಅಂಗಡಿ ಮಹಡಿಯಲ್ಲಿ ಕೆಲಸ ಮಾಡಿದರು. 1991 ರಲ್ಲಿ ಟಾಟಾ ಸನ್ಸ್ ನಿವೃತ್ತಿಯ ನಂತರ ಅವರು ಜೆಆರ್‌ಡಿ ಟಾಟಾ ಅವರ ಉತ್ತರಾಧಿಕಾರಿಯಾದರು. ಇವರ ಅಧಿಕಾರಾವಧಿಯಲ್ಲಿ ಟಾಟಾ ಗ್ರೂಪ್ ಟೆಟ್ಲಿ, ಜಾಗ್ವಾರ್, ಲ್ಯಾಂಡ್ ರೋವರ್ ಮತ್ತು ಕೋರಸ್ ಅನ್ನು ಸ್ವಾಧೀನಪಡಿಸಿಕೊಂಡಿತು. ಟಾಟಾವನ್ನು ಹೆಚ್ಚಾಗಿ ಭಾರತ–ಕೇಂದ್ರಿತ ಗುಂಪಿನಿಂದ ಜಾಗತಿಕ ವ್ಯಾಪಾರವಾಗಿ ಪರಿವರ್ತಿಸಿದರು.

ಟಾಟಾ ಸಮೃದ್ಧ ಹೂಡಿಕೆದಾರರಾಗಿದ್ದರು ಮತ್ತು 30ಕ್ಕೂ ಹೆಚ್ಚು ಸ್ಟಾರ್ಟ್ ಅಪ್‌ಗಳಲ್ಲಿ ಹೂಡಿಕೆ ಮಾಡಿದರು. ಹೆಚ್ಚಿನವು ವೈಯಕ್ತಿಕ ಸಾಮರ್ಥ್ಯದಲ್ಲಿ ಮತ್ತು ಕೆಲವು ಅವರ ಹೂಡಿಕೆ ಕಂಪನಿಯ ಮೂಲಕ. ರತನ್ ಟಾಟಾ ಭಾರತದ ಮೇಲೆ ಅಪಾರ ದೇಶಪ್ರೇಮ ಹೊಂದಿದ್ದರು. ಯಾವುದೇ ಸಂದರ್ಭದಲ್ಲಿಯೂ ದೇಶಕ್ಕೆ ಆರ್ಥಿಕವಾಗಿ ಬೆಂಬಲ ನೀಡುತ್ತಿದ್ದರು.

ರತನ್ ಟಾಟಾ ಅವರ ಸೇವೆಯನ್ನು ಪರಿಗಣಿಸಿ ಭಾರತ ಸರ್ಕಾರ 2000 ರಲ್ಲಿ ಪದ್ಮಭೂಷಣ ಮತ್ತು 2008 ರಲ್ಲಿ ಪದ್ಮವಿಭೂಷಣ ಪುರಸ್ಕಾರ ನೀಡಿತ್ತು.

ಟಾಟಾ ಅವರು 2006ರಲ್ಲಿ ಮಹಾರಾಷ್ಟ್ರದ ಸಾರ್ವಜನಿಕ ಕ್ಷೇತ್ರದಲ್ಲಿ ಅಪಾರ ಸೇವೆ ಸಲ್ಲಿಸಿದ್ದಕ್ಕಾಗಿ 'ಮಹಾರಾಷ್ಟ್ರ ಭೂಷಣ' ಮತ್ತು 2021 ರಲ್ಲಿ ಅಸ್ಸಾಂನಲ್ಲಿ ಕ್ಯಾನ್ಸರ್ ಆರೈಕೆಯನ್ನು ಮತ್ತಷ್ಟು ಹೆಚ್ಚಿಸುವಲ್ಲಿ ಅವರ ಕೊಡುಗೆಗಾಗಿ 'ಅಸ್ಸಾಂ ಬೈಭವ್' ನಂತಹ ವಿವಿಧ ರಾಜ್ಯಗಳ ನಾಗರಿಕ ಗೌರವಗಳನ್ನು ಕಲ್ಪಿಸಲಾಗಿದೆ. ರತನ್ ಟಾಟಾರ ನಿಧನ ದೇಶದ ಉದ್ಯಮ ಕ್ಷೇತ್ರವೆಂಬ ಆಕಾಶದಲ್ಲಿ ನಕ್ಷತ್ರವನ್ನು ಕಳೆದುಕೊಂಡಂತಾಗಿದ್ದು, ರತನ್ ಟಾಟಾರ ಆತ್ಮಕ್ಕೆ ಶಾಂತಿ ಸಿಗಲೆಂದು ದೇಶದ ಎಲ್ಲಾ ಜನರ ಪರವಾಗಿ ದೇವರಲ್ಲಿ ಪ್ರಾರ್ಥಿಸೋಣ.

–ರಾಸುಮ ಭಟ್, ಸಂಶೋಧನಾ ವಿದ್ಯಾರ್ಥಿ, ಚಿಕ್ಕಮಗಳೂರು.

ರಾಜಕಾರಣಿ ?

ಮಾನ್ಯರೆ,

"ನಾಡಹಬ್ಬ ದಸರಾ ಉದ್ಘಾಟನೆಯಲ್ಲಿ ರಾಜಕೀಯ" 'ಮೈಸೂರು ಮಿತ್ರ' ಅ. 4) ಡಾ. ಹಂಪನಾ ಔಪಚಾರಿಕವಾಗಿ ಒಬ್ಬ ಹಿರಿಯ ಸಾಹಿತಿ, ವಿದ್ವಾಂಸ ನಿಜ. ಆದರೆ ವಾಸ್ತವವಾಗಿ ಒಬ್ಬ ರಾಜಕಾರಣಿ! ಅವರು ನಡೆದು ಬಂದ ದಾರಿ ಬಲ್ಲವರಿಗೆಲ್ಲ ಇದು ಗೊತ್ತು! (ಗಂಡ, ಹೆಂಡತಿ ಇಬ್ಬರು 'ನಾಡೋಜ'ರಾದ ಪರಿಗೆ ಏನು ಹೇಳೋಣ?)

'ಮಿತ್ರ'ನ ಈ ವರದಿ ಅತೀವ ಗಮನಾರ್ಹ : "ದಸರಾ ಉದ್ಘಾಟಕರಾದ ಡಾ. ಹಂಪ ನಾಗರಾಜಯ್ಯನವರ ಭಾಷಣದಲ್ಲಿ ದಸರಾ ವಿಚಾರಗಳ ಬಗ್ಗೆ ಉಲ್ಲೇಖವಿದ್ದರೂ ಚುನಾವಣೆ, ಸರ್ಕಾರದ ಅಸ್ತಿತ್ವ ಹೀಗೆ ಹಲವು ವಿಷಯಗಳನ್ನು ಹೆಚ್ಚಾಗಿಯೇ ಪ್ರಸ್ತಾಪಿಸಿದರು. ಒಟ್ಟಾರೆ, ಇಡೀ ದಸರಾ ಉದ್ಘಾಟನಾ ವೇದಿಕೆ ರಾಜಕೀಯ ವೇದಿಕೆಯಾಗಿಯೂ ಪರಿಣಮಿಸಿತು".

ತಮ್ಮನ್ನು ಹಾಡಿ ಹೊಗಳಿದ ಹಂಪನಾ ಅವರ ಭಾಷಣವನ್ನು ಮುಖ್ಯಮಂತ್ರಿಗಳು 'ಮೌಲಿಕ' ಎಂದು ಮೆಚ್ಚಿಕೊಂಡದ್ದರಲ್ಲಿ ಅಚ್ಚರಿಯೇನು?

–ಸಿಪಿಕೆ, ಹಿರಿಯ ಸಾಹಿತಿಗಳು, ಮೈಸೂರು.

ಕೇಂದ್ರದಿಂದ ಉಚಿತ ಅಕ್ಕಿ ಮುಂದುವರಿಕೆ ಕ್ರಮ ಸ್ವಾಗತಾರ್ಹ

ಮಾನ್ಯರೆ,

ಅಗತ್ಯ ವಸ್ತುಗಳ ಬೆಲೆ ಏರಿಕೆಯಿಂದ ಬಳಲುತ್ತಿರುವ ಕಡು ಬಡವರು ಹಾಗೂ ಜನಸಾಮಾನ್ಯರಿಗೆ ತುಸು ನಿರಾಳ. ದೇಶದಲ್ಲಿ ಜನರು ಎದುರಿಸುತ್ತಿರುವ ರಕ್ತ ಹೀನತೆ ಹಾಗೂ ಪೋಷಕಾಂಶ ಕೊರತೆಯನ್ನು ನೀಗಿಸಲು ಪ್ರಧಾನಮಂತ್ರಿ ಗರೀಬ್ ಕಲ್ಯಾಣ ಅನ್ನ ಯೋಜನೆ ಹಾಗೂ ಇತರೆ ಕಲ್ಯಾಣ ಯೋಜನೆಗಳ ಅಡಿಯಲ್ಲಿ 2028ರ ಡಿಸೆಂಬರ್‌ವರೆಗೂ ಪ್ರತಿ ತಿಂಗಳು 5 ಕೆಜಿ ಉಚಿತ ಸಾರಯುಕ್ತ ಅಕ್ಕಿ ವಿತರಣೆಯನ್ನು ಮುಂದುವರಿಸಲು ಕೇಂದ್ರ ಸರ್ಕಾರ ನಿರ್ಧರಿಸಿರುವುದು ಸ್ವಾಗತಾರ್ಹ.

ಈಗಾಗಲೇ ದೇಶಾದ್ಯಂತ ಮಕ್ಕಳು, ಮಹಿಳೆಯರು ಮತ್ತು ಪುರುಷರು ಸೇರಿದಂತೆ ಬಹುತೇಕರು ರಕ್ತಹೀನತೆಯಿಂದ ಬಳಲುತ್ತಿದ್ದು, ಅದಲ್ಲದೆ ವಿಟಮಿನ್ ಬಿ12, ಕಬ್ಬಿಣಾಂಶ ಕೊರತೆಯು ಜನರ ಆರೋಗ್ಯದ ಮೇಲೆ ಗಂಭೀರ ಪರಿಣಾಮ ಉಂಟುಮಾಡುತ್ತಿದೆ. ಈ ನಿಟ್ಟಿನಲ್ಲಿ ಕೇಂದ್ರ ಸರ್ಕಾರ ಮುಂದಿನ ನಾಲ್ಕು ವರ್ಷಗಳ ವರೆಗೆ ಉಚಿತ ಸಾರಯುಕ್ತ ಅಕ್ಕಿ ವಿತರಣೆಯನ್ನು ಮುಂದುವರೆಸಿರುವುದು ಅತ್ಯಂತ ಸೂಕ್ತ ನಿರ್ಧಾರ. ಈ ಯೋಜನೆಯು ದೇಶದ ಬಡ ಕುಟುಂಬಗಳಿಗೆ ನೆರವು ನೀಡುವ ನಿಟ್ಟಿನಲ್ಲಿ ಒಳ್ಳೆಯ ಬೆಳವಣಿಗೆಯಾಗಿದೆ. ಸರ್ಕಾರದ ಈ ನೆರವು ಯಾವುದೇ ಕಾರಣಕ್ಕೂ ಲೋಪವಾಗದಂತೆ ಸರಿಯಾದ ರೀತಿಯಲ್ಲಿ ಸದ್ಬಳಕೆಯಾಗಲಿ. ಸೂಕ್ತ ಹಾಗೂ ಅರ್ಹ ಫಲಾನುಭವಿಗಳಿಗೆ ಸರ್ಕಾರದ ನೆರವು ದೊರೆತಾಗ ಕೇಂದ್ರ ಸರ್ಕಾರದ ಈ ಯೋಜನೆ ಯಶಸ್ವಿಯಾಗಲು ಸಾಧ್ಯವಾಗುತ್ತದೆ.

–ಹರಳಹಳ್ಳಿ ಪುಟ್ಟರಾಜು, ಪಾಂಡವಪುರ.

ಆಳರಸರ ಆಚರಣೆಯ ನಂತರದ ಜನತಾ ದಸರಾ





ಜೆ.ಬಿ.ರಂಗಸ್ವಾಮಿ
ನಿವೃತ್ತ ಪೊಲೀಸ್ ಅಧಿಕಾರಿ
ಮೊ : 94490–10009

ಮಹಾರಾಜರ ನಂತರ ನಡೆದ ದಸರಾದ ಉತ್ಸವ ಮೂರ್ತಿ ಯಾರು? ಎಂಬುದು ಬಹು ಚರ್ಚೆಯಲ್ಲಿದ್ದ ವಿಚಾರ. ಮೊದಲಿಗೆ ಭಾರತಮಾತೆ. ನಂತರ ಶ್ರೀ ಕನ್ನಡ ಭುವನೇಶ್ವರಿ. ಕೊನೆಗೆ ನಾಡಿನ ಅಧಿದೇವತೆ ಶ್ರೀ ಚಾಮುಂಡೇಶ್ವರಿಯ ಜಂಬೂಸವಾರಿ ಉತ್ಸವ ನಡೆಯು ತ್ತಿದೆ. ಅರಸರ ಆಳ್ವಿಕೆ ನಂತರ ದಸರಾ ಆಚರಣೆ ಕುರಿತು ಸಾಕಷ್ಟು ಜಿಜ್ಞಾಸೆ ಏರ್ಪಟ್ಟಿತ್ತು. ಈ ಸಂಬಂಧ ನಿವೃತ ಪೊಲೀಸ್ ಅಧಿಕಾರಿ ಜೆ.ಬಿ.ರಂಗಸ್ವಾಮಿ ಅವರು ವಿಶ್ಲೇಷಣೆ ಮಾಡಿದ್ದಾರೆ. ಇವರು, 1978ರಲ್ಲಿ ದಸರಾ ಪುನರಾರಂಭವಾದಾಗಿನಿಂದ ಜಂಬೂಸವಾರಿ ಮೆರವಣಿಗೆಯ ವೀಕ್ಷಕ ವಿವರಣೆಯನ್ನು ನಿರಂತರವಾಗಿ ಮಾಡುತ್ತಾ ಬಂದಿದ್ದಾರೆ. ಅಲ್ಲಿಂದ ನಡೆದಂತಹ ವಿದ್ಯಮಾನಗಳಿಗೆ ಪ್ರತ್ಯಕ್ಷ ಸಾಕ್ಷಿಯಾಗಿದ್ದಾರೆ. ಅವರ ವಿಶೇಷ ಲೇಖನ ಇದು.

ಸ್ವಾತಂತ್ರ್ಯನಂತರವೂ 1969ರವರೆಗೆ ಶ್ರೀ ಜಯಚಾಮರಾಜ ಒಡೆಯರ್ (ರಾಜೇಂದ್ರ ಅಲ್ಲ) ಅವರ ನೇತೃತ್ವದಲ್ಲಿ ಅರಮನೆಯ ಸಕಲ ಗೌರವಗಳೊಂದಿಗೆ ದಸರಾ ಮಹೋತ್ಸವ ನಡೆದಿತ್ತು. 1970ರಲ್ಲಿ ಇಂದಿರಾ ಗಾಂಧಿ ಅವರ ಶಿಫಾರಸ್ಸಿನಂತೆ ರಾಷ್ಟ್ರಾಧ್ಯಕ್ಷರು ರಾಜಧನ ರದ್ದುಪಡಿಸಿ ಆದೇಶ ಹೊರಡಿಸಿದರು. ಭಾರತದಲ್ಲಿ ರಾಜರ ಸ್ವಂತ ಖರ್ಚಿಗಾಗಿ ನೀಡುತ್ತಿದ್ದ ರಾಜಧನ (ಪ್ರಿವಿ ಪರ್ಸ್) ಮುಂತಾದ ಸವಲತ್ತು ಸೌಲಭ್ಯಗಳು ಕೊನೆಗೊಂಡವು. ಇದರಿಂದಾಗಿ 1970ರಿಂದ ಮಹಾರಾಜರ ದಸರಾ ಮೆರವಣಿಗೆಗೆ ತೆರೆಬಿದ್ದಿತು.

ಮಹಾರಾಜ ಶ್ರೀ ಜಯಚಾಮರಾಜ ಒಡೆಯರ್ ಅವರು ತಾವೀಗ ಸಾಮಾನ್ಯ ಪ್ರಜೆಯಾಗಿರುವುದರಿಂದ ಜಂಬೂಸವಾರಿ ಮೆರವಣಿಗೆಯಲ್ಲಿ ತೆರಳುವುದು ಸರಿಯಲ್ಲವೆಂದು ತಾವೇ ಹಿಂದೆ ಸರಿದರು. ಸಿಂಹಾಸನದ ಮೇಲೆಯೂ ಕೂರಲಿಲ್ಲ. ಆದರೆ ಸಿಂಹಾಸನಕ್ಕೆ ಸಲ್ಲಬೇಕಿದ್ದ ಪೂಜೆ ನಿಲ್ಲಿಸುವಂತಿರಲಿಲ್ಲ. ನಾಡಿನ ಸುಭಿಕ್ಷೆಯನ್ನು ಕೋರುವ ಪೂಜೆಗಳು ನಡೆಯಲೇಬೇಕಿತ್ತು. ಅರಮನೆಯೊಳಗೆ ಸಿಂಹಾಸನದ ಮೇಲೆ ಪಟ್ಟದ ಕತ್ತಿಯನ್ನಿಟ್ಟು ನವರಾತ್ರಿಯ ಪೂಜಾಕ್ರಮಗಳನ್ನು ನೆರವೇರಿಸಿದರು. 1970ರ ದಸರಾದಲ್ಲಿ ಅರಮನೆಗೆ ದೀಪಾಲಂಕಾರ ಮಾಡಿರಲಿಲ್ಲ ಮತ್ತು ಮಹಾರಾಜರ ಜಂಬೂಸವಾರಿಯೂ ನಡೆಯಲಿಲ್ಲ. ಆದರೆ ಸಾರ್ವಜನಿಕ ಕಟ್ಟಡಗಳು ಮತ್ತು ಉದ್ಯಾನವನಗಳಿಗೆ ದೀಪಾಲಂಕಾರ ಮಾಡಲಾಗಿತ್ತು.

ಮಹಾರಾಜರೇ ಇಲ್ಲದಿದ್ದ ಮೇಲೆ ದಸರಾ ಮೆರವಣಿಗೆ ಹೇಗೆ ನಡೆಯಲು ಸಾಧ್ಯ ? ಅವರಿಲ್ಲದೆ ದರ್ಬಾರ್ ನಡೆಸುವವರು ಯಾರು? ರಾಜರಿಲ್ಲದೆ ರಾಜ ದರ್ಬಾರ್ ನಡೆಸುವವರು ಯಾರು? ಮುಂದೆ ಮೆರವಣಿಗೆ ನಡೆಸುವುದಾದರೂ ಹೇಗೆ? ಮೆರವಣಿಗೆ ನಡೆಸಿದರೂ ಮಹಾರಾಜರೇ ಇಲ್ಲದೆ ಚಿನ್ನದ ಅಂಬಾರಿ ಹೋಗುವುದಾದರೂ ಎಂತು? ಮುಕ್ತಾಯದ ಬನ್ನಿ ಪೂಜೆ ನೆರವೇರಿಸುವವರು ಯಾರು? ಇದರ ಖರ್ಚು ವೆಚ್ಚ ಹೇಗೆ? ಮುಂದಾಳಾಗಿ ನಿಂತು ಮಾಡುವವರು ಯಾರು? ಹೀಗೆ ನೂರಾರು ಪ್ರಶ್ನೆಗಳೆದ್ದವು. ಅನೇಕರಿಗೆ ಇನ್ನು ಮುಂದೆ ದಸರಾ ನಡೆಯುವುದೇ ಇಲ್ಲವೆಂದು ಖಾತ್ರಿಯಾಗಿತ್ತು ನೂರಾರು ವರ್ಷಗಳ ಆಚರಣೆ ನಿಂತದ್ದರಿಂದ ನಾಡಿಗೆ ಏನೋ ಕೇಡು ಕಾದಿದೆ ಎಂಬ ಭೀತಿಯೂ ಮೂಡಿತು. ಆದರೆ ಜನಸಾಮಾನ್ಯರ ಸುಪ್ತ ಮನಸ್ಸಿಗೆ ದಸರಾ ನಿಲ್ಲುವುದು ಖಂಡಿತವಾಗಿಯೂ ಬೇಕಿರಲಿಲ್ಲ. ಅದಿಲ್ಲವೆಂದರೆ ಮೈಸೂರಿನ ಅಸ್ತಿತ್ವವೇ ನಾಶವಾದಂತೆ. ಹೇಗಾದರೂ ಮಾಡಿ ಈ ಉತ್ಸವವನ್ನು ನಡೆಯುವಂತೆ ಮಾಡಲೇಬೇಕೆಂಬ ಅಭಿಲಾಷೆ ಎಲ್ಲರಲ್ಲೂ ಇತ್ತು. ಆದರೆ ಮುಂದಾಳತ್ವ ತೆಗೆದುಕೊಂಡು ಮಾಡುವವರಾದರೂ ಯಾರು?

ವಿಪರ್ಯಾಸವೆಂದರೆ ಆ ಸಮಯದಲ್ಲಿ ಈ ಕುರಿತಂತೆ ಸರ್ಕಾರವೂ ಯಾವ ನಿರ್ಧಾರವನ್ನೂ ಕೈಗೊಂಡಿರಲಿಲ್ಲ. ಈ ಎಲ್ಲ ಗೊಂದಲಗಳ ನಡುವೆ ರಾಜಧನ ರದ್ದಾದ 1970ರ ಆ ವರ್ಷ ದಸರಾ ನಡೆಯಲಿಲ್ಲ.

ಜನಸಾಮಾನ್ಯರಿಗೆ ಮಹಾರಾಜರಿಲ್ಲದ ದಸರಾವನ್ನು ಕಲ್ಪಿಸಿಕೊಳ್ಳಲೂ ಕಷ್ಟವಾಗಿತ್ತು. ಶ್ರೀ ಜಯಚಾಮರಾಜ ಒಡೆಯರ್ ಬದುಕಿದ್ದಂತೆಯೇ ದಸರಾ ಉತ್ಸವ ನಿಲ್ಲುತ್ತದೆ ಎಂದರೆ, ಏನೋ ಅಪಶಕುನ. ಮೈಸೂರು ಇನ್ನು ತನ್ನ ವೈಭವದ ಅಸ್ತಿತ್ವ ಕಳೆದುಕೊಂಡುಬಿಡುತ್ತದೆ ಎಂಬ ವ್ಯಾಕುಲ, ದುಗುಡಗಳು ಜನರಲ್ಲಿ ಆವರಿಸಿದ್ದವು. ಹೇಗಾದರೂ ಈ ಸಾಂಸ್ಕೃತಿಕ ಉತ್ಸವ ಸರ್ಕಾರದ ವತಿಯಿಂದಲಾದರೂ ನಡೆಸಲೇಬೇಕೆಂಬ ಅಭಿಲಾಷೆ ಜನಗಳಲ್ಲಿ ಮೂಡಿತು. ಆದರೆ ಸರ್ಕಾರ ಸ್ಪಂದಿಸಲಿಲ್ಲ.

ಅನೇಕ ಉತ್ಸಾಹಿಗಳು ಮತ್ತು ಕನ್ನಡ ಚಳುವಳಿಗಾರರು ಹೇಗಾದರೂ ಅಥವಾ ಯಾವುದಾದರೂ ರೀತಿಯಲ್ಲಿ ದಸರಾ ನಡೆಸಲೇಬೇಕು ಎಂದು ನಿರ್ಧರಿಸಿದ್ದರು. ಜನರ ಅಭಿಲಾಷೆಯಂತೆ ಮಹಾರಾಜರ ಬದಲಾಗಿ ಭಾರತಮಾತೆಯನ್ನು ಮೆರವಣಿಗೆಯಲ್ಲಿ ಕೊಂಡೊಯ್ಯುವುದು ಎಂದು ತೀರ್ಮಾನಿಸಲಾಯಿತು. ದಸರಾ ಮೈಸೂರಿನ ನಾಡಹಬ್ಬವಾದ್ದರಿಂದ ಕನ್ನಡ ರಾಜರಾಜೇಶ್ವರಿ ಅಥವಾ ಮೈಸೂರಿನ ಅಧಿದೇವತೆ ಶ್ರೀ ಚಾಮುಂಡೇಶ್ವರಿಯೇ ಇರಲಿ ಎಂದು ಕನ್ನಡ ಚಳುವಳಿಗಾರರು ಹಠ ಹಿಡಿದರು.

ಪುರ ಪ್ರಮುಖರ ನೇತೃತ್ವದಲ್ಲಿ ನಾಡಹಬ್ಬ ದಸರಾ ಸಮಿತಿ ರಚನೆಯಾಯಿತು. ಮಹಾರಾಜರೇ ಇಲ್ಲದಿರುವ ದಸರಾ ಮೆರವಣಿಗೆಯನ್ನು ನಡೆಸುವುದಾದರೂ ಹೇಗೆ? ಮೈಸೂರಿನ ಅಧಿದೇವತೆ ಶ್ರೀ ಚಾಮುಂಡೇಶ್ವರಿಯ ವಿಗ್ರಹವನ್ನೇ ಮೆರವಣಿಗೆಯಲ್ಲಿ ಕೊಂಡೊಯ್ಯಲು ಮೊದಲಿಗೆ ತೀರ್ಮಾನವಾಯಿತು.

ಆದರೆ ಅದಕ್ಕೂ ವಿರೋಧ ಬಂತು. ಪ್ರಜಾಪ್ರಭುತ್ವದಲ್ಲಿ ಭಾರತಮಾತೆಯ ವಿಗ್ರಹವನ್ನೇ ಇಡಬೇಕೆಂಬ ವಾದ ಮುನ್ನೆಲೆಗೆ ಬಂದು ನಿಂತಿತು. ತೇಗದ ಮರದಲ್ಲಿ ಮಾಡಿದ ನಾಲ್ಕು ಅಡಿ ಎತ್ತರದ ಭಾರತ ಮಾತೆಯ ವಿಗ್ರಹ ನಿರ್ಮಾಣವಾಯಿತು. ಪ್ರಸಿದ್ಧ ಚಿತ್ರ ಕಲಾವಿದ ಪದ್ಮಶ್ರೀ ಎಸ್.ಎನ್.ಸ್ವಾಮಿ (ಬಾಬು ರಾಜೇಂದ್ರ ಪ್ರಸಾದ್, ಡಾ.ರಾಧಾಕೃಷ್ಣನ್, ನೆಹರೂ ಮುಂತಾದ ರಾಷ್ಟ್ರ ನಾಯಕರ ವರ್ಣಚಿತ್ರ ರಚಿಸಿದವರು) ಅವರು ರೂಪಿಸಿದರು. ಶ್ರೀ ನರಸಿಂಹಾಚಾರ್ ಮರದ ಕೆತ್ತನೆ ಮಾಡಿದರು. ಶುಭ್ರ ಶ್ವೇತ ವಸ್ತ್ರಧಾರಿಯಾಗಿ ಭಾರತ ಧ್ವಜವನ್ನು ಕೈಯ್ಯಲ್ಲಿ ಹಿಡಿದಿರುವಂತೆ ವಿಗ್ರಹವನ್ನು ವಿನ್ಯಾಸಗೊಳಿಸಲಾಗಿತ್ತು. ಈ ಪ್ರತಿಮೆಯ ಹಿಂಭಾಗದಲ್ಲಿ ಭಾರತದ ಭೂಪಟವಿತ್ತು.

ಭಾರತಮಾತೆಯ ವಿಗ್ರಹವೇನೋ ಸರಿ. ಮೆರವಣಿಗೆಯನ್ನು ಎಲ್ಲಿಂದ ಪ್ರಾರಂಭಿಸುವುದು? ಸ್ವತಃ ಮಹಾರಾಜರೇ ಅರಮನೆಯಲ್ಲಿರುವುದರಿಂದ ಅಲ್ಲಿಂದಲೇ ಹೊರಡಿಸುವುದು ಅಷ್ಟು ಸೂಕ್ತವಾಗಲಾರದು. ಅಲ್ಲಿವರೆಗೆ ಆಳ್ವಿಕೆ ನಡೆಸಿದ್ದ ಮಹಾರಾಜರನ್ನು ಪ್ರಜಾಪ್ರಭುತ್ವದ ಹೆಸರಿನಲ್ಲಿ ವೃಥಾ ಅವಮಾನಿಸಿದಂತೆ ಆಗುತ್ತದೆ. ಅವರು ಸೌಜನ್ಯಕ್ಕೆ ಒಪ್ಪಿದರೂ ಅದೊಂದು ಬಗೆಯ ಅಪಚಾರವೇ. ಯಾವ ಕಾರಣಕ್ಕೂ ಮಹಾರಾಜರನ್ನು ಮುಜಗರಕ್ಕೆ ಸಿಕ್ಕಿಸಕೂಡದೆಂದು ತೀರ್ಮಾನಿಸಲಾ ಯಿತು. ಇದು ಅರಸೊತ್ತಿಗೆ ಬಗ್ಗೆ ಜನರಿಗಿದ್ದ ಭಕ್ತಿ ಭಾವ. ನಿರ್ದಿಷ್ಟ ಧರ್ಮದ ಪೂಜಾ ಆಚರಣೆ ನಾಡಹಬ್ಬದಲ್ಲಿ ಸಲ್ಲದು. ನಾಡಹಬ್ಬ ಎಂದಾಗ ಸರ್ವಧರ್ಮದ ಜನರೂ ಪಾಲ್ಗೊಳ್ಳುವಂತಿರಬೇಕು. ಧಾರ್ಮಿಕ ಆಚರಣೆಯ ದಸರಾ ಬೇಡ! ಎಂದು ವಿಚಾರವಾದಿಗಳ ಗುಂಪು ಕೂಡ ತನ್ನ ಪ್ರತಿಭಟನೆ ದಾಖಲಿಸಿತು. ಆದರೆ ವಿಚಾರವಾದಿಗಳು ಮರೆತಿದ್ದ ಮುಖ್ಯ ಅಂಶವೆಂದರೆ, ಮಹಾರಾಜರು ರೂಪಿಸಿದ್ದ ದಸರಾ ಸರ್ವಧರ್ಮ ಸಮನ್ವಯದ ಉತ್ಸವವೇ ಆಗಿತ್ತು. ಗಂಡ ಭೇರುಂಡ ರಾಜ ಲಾಂಛನ ಶೈವ, ವೈಷ್ಣವ, ಜೈನ ಧರ್ಮಗಳ ಸಮನ್ವಯವಾಗಿತ್ತು. ಒಂದೊಂದು ಸೇವಾ ಕಾರ್ಯವನ್ನೂ ಒಂದೊಂದು ನಿರ್ದಿಷ್ಟ ಜಾತಿಯವರೇ ಮಾಡಬೇಕೆಂಬ ಕಟ್ಟಲೆ ವಿಧಿಸಲಾಗಿತ್ತು. ಒಂದೊಂದು ಧರ್ಮದಿಂದ ಪೂಜಾವಸ್ತುಗಳು, ಹೂವು, ಹಣ್ಣು, ಚಿತ್ತಾರ, ದೊಂದಿ, ಬಟ್ಟೆಗಳು ಬಂದು ಮೆರವಣಿಗೆ ಸೇರುವಂತೆ, ಕೆಲವು ಕಾರ್ಯಗಳನ್ನು ಆಯಾ ಜಾತಿಯವರೇ ಮಾಡುವಂತಾಗಿದ್ದುದರಿಂದ ನಾಡಹಬ್ಬ ಸರ್ವರ ಹಬ್ಬವಾಗಿತ್ತು. ಎಲ್ಲ ಜಾತಿಗಳ ಕುಣಿತಗಳನ್ನೂ ಸೇರಿಸಲಾಗಿತ್ತು.

20–09–1971ರಂದು ಶ್ರೀರಾಮ ಎಂಬ ಆನೆಯ ಮೇಲೆ ಭಾರತ ಮಾತೆಯ ಪುತ್ಥಳಿ ಮೆರವಣಿಗೆ ಮಹಾರಾಜ ಕಾಲೇಜಿನ ಪೆವಿಲಿಯನ್ನಿನಿಂದ ಹೊರಟಿತು. ಇದೇ ಮೊತ್ತ ಮೊದಲ ಜನಸಾಮಾನ್ಯರ ಜನತಾ ದಸರಾ. ಅಂದಿನ ಮೆರವಣಿಗೆಯಲ್ಲಿ ವಿವಿಧ ಪೊಲೀಸ್, ಎನ್‌ಸಿಸಿ, ಸ್ಕೌಟ್ಸ್ ದಳಗಳು, ಬ್ಯಾಂಡ್, ಜಾನಪದ ತಂಡಗಳು, ಟ್ಯಾಬ್ಲೋಗಳು ಒಟ್ಟು 77 ತಂಡಗಳು ಪಾಲ್ಗೊಂಡಿದ್ದವು. ಏನೇ ವಿಜೃಂಭಣೆ ಇದ್ದರೂ ಮಹಾರಾಜರಿಲ್ಲದ ಮೆರವಣಿಗೆ ದೇವರಿಲ್ಲದ ಗುಡಿ. ಮೆರವಣಿಗೆ ನೂರಡಿ ರಸ್ತೆ ದಾಟುವುದರೊಳಗೆ ಜನಜಂಗುಳಿ ತೆಳುವಾಯಿತು. ನಗರದ ಮುಖ್ಯ ಬೀದಿಗಳಲ್ಲಿ ಸಾಗಿದ ಮೆರವಣಿಗೆ ಮೈಸೂರು ರೇಸ್ ಕೋರ್ಸ್ ಮೈದಾನವನ್ನು ತಲುಪಿತು. ಅಲ್ಲಿ ರಾಜ್ಯಪಾಲ ಧರ್ಮವೀರ ಅವರು (1969–1972) ಗೌರವ ವಂದನೆ ಸ್ವೀಕರಿಸಿದರು. ಬನ್ನಿಮಂಟಪದ ಟಾರ್ಚ್‌ಲೈಟ್ ಪೆರೇಡಿನಂತೆಯೇ ಕಾರ್ಯಕ್ರಮ ಆಯೋಜಿಸಲಾಗಿತ್ತು. ಅನೇಕ ಕೇಂದ್ರ ಮಂತ್ರಿಗಳು, ವಿದೇಶಿ ಅತಿಥಿ ಗಣ್ಯರು ಭಾಗವಹಿಸಿದ್ದರು.

ಅದೇ ಸಮಯಕ್ಕೆ ವಾಹನವೊಂದು ಮೈದಾನಕ್ಕೆ ಬಂದಿತು. ಜನರ ಆಶ್ಚರ್ಯಕ್ಕೆ ಪಾರವೇ ಇರಲಿಲ್ಲ. "ಮಾರಾಜ್ರು ಬಂದ್ರು ಮಾರಾಜ್ರೇ ಬಂದ್ರು' ಹರ್ಷೋದ್ಗಾರ ಮುಗಿಲು ಮುಟ್ಟಿತು. ಮೈದಾನದ ಸುತ್ತ ನೆರೆದಿದ್ದ ಜನರೆಲ್ಲರೂ ನೆಗೆದೆದ್ದು ಓಡಿ ಬಂದರು. ಆ ಜನ ಜಂಗುಳಿಯನ್ನು ನಿಯಂತ್ರಿಸಲಾಗದೆ ಪೊಲೀಸರು ಹರ ಸಾಹಸಪಟ್ಟರು. ವೇದಿಕೆಯಲ್ಲಿದ್ದ ರಾಜ್ಯಪಾಲ ಶ್ರೀ ಧರ್ಮವೀರರೇ ಸ್ವತಃ ಧಾವಿಸಿ ಬಂದು ಮಹಾರಾಜರನ್ನು ಸ್ವಾಗತಿಸಿ, ವೇದಿಕೆಗೆ ಆಹ್ವಾನಿಸಿದರು.

ಮಹಾರಾಜರು ವೇದಿಕೆ ಹತ್ತಲಿಲ್ಲ. ವೀಕ್ಷಕನಾಗಿ ಮಾತ್ರ ದಸರಾ ನೋಡಲು ಬಂದಿದ್ದೇನೆ ಎಂದು ನೆಲದ ಮೇಲಿನ ಕುರ್ಚಿಯಲ್ಲಿ ಕುಳಿತರು. ಅದು ಪ್ರೋಟೋಕಾಲ್ ಕೂಡ ಆಗಿತ್ತು. ರಾಷ್ಟ್ರಗೀತೆಯ ಗೌರವ ವಂದನೆ ಮುಗಿಯುವವರೆಗೆ ಹೊರಗಡೆ ಕಾದಿದ್ದು ನಂತರ ಸಮಾರಂಭಕ್ಕೆ ಆಗಮಿಸಿದ್ದರು. ಮೊದಲೇ ಬಂದರೆ ಗೌರವ ವಂದನೆ ಯಾರಿಗೆ ? ಎಂಬ ಗೊಂದಲ, ಗದ್ದಲವಾಗುತ್ತದೆ ಎಂಬುದು ಅವರಿಗೆ ಗೊತ್ತಿತ್ತು. ಜನರು ಬಿಡಬೇಕಲ್ಲಾ? ತಮ್ಮನ್ನಾಳಿದ ಮಹಾರಾಜರು ನೆಲದ ಮೇಲೆ ಕೂರುವುದೆಂದರೇನು? ಅದು ತಮಗೇ ಆದ ಅವಮಾನವೆಂದು ಜನ ಭಾವಿಸಿದರು. ಕಿರುಚಾಟ, ಕೂಗಾಟ ಹೆಚ್ಚಾಯಿತು. ಉದ್ವಿಗ್ನರಾಗಿ ಕಣ್ಣೀರು ಹಾಕಿದವರೂ ಇದ್ದರು. ದೊಡ್ಡ ಗದ್ದಲವಾಗಿ ಇಡೀ ಸನ್ನಿವೇಶ ಅಯೋಮಯವಾಯಿತು.

ಕಾರ್ಯಕ್ರಮಕ್ಕೆ ಹರಸಲು ಬಂದಿದ್ದ ಶ್ರೀಮನ್ಮಹಾರಾಜರು ಮೈದಾನದಿಂದ ನಿರ್ಗಮಿಸಿದ್ದಾರೆ. ದಯವಿಟ್ಟು ಶಾಂತರೀತಿಯಿಂದ ಕುಳಿತುಕೊಳ್ಳಿ ಎಂಬ ವಿನಂತಿ ಪದೇ ಪದೆ ಮೈಕಿನಲ್ಲಿ ಮೊಳಗಿತು.

ಜಯಚಾಮರಾಜ ಒಡೆಯರು ನೋಡಿದ ಕೊನೆಯ ದಸರಾ ಕೂಡ ಅದೇ ಆಗಿದ್ದು ವ್ಯಸನಕರ.

• • • • • • • • •

'ಮಾರಾಜ್ರೇ ಇಲ್ಲದ ಮೇಲೆ ನಾವು ನೋಡೋದೇನಿದೆ?' ಎಂದು ಬಹಳಷ್ಟು ಜನ ತಾವೂ ಹೊರಟುಬಿಟ್ಟರು. ಮಾರನೇ ದಿನವೇ ವಿಶ್ವೇಶ್ವರಯ್ಯ ವೃತ್ತದಲ್ಲಿ (ಈಗಿನ ಆಯುರ್ವೇದಿಕ್ ಸರ್ಕಲ್), ಕನ್ನಡ ಚಳುವಳಿಗಾರರ ನೇತೃತ್ವದಲ್ಲಿ ಕಪ್ಪು ಬಾವುಟ ಪ್ರದರ್ಶಿಸಿ ತಮ್ಮ ಅಸಮಾಧಾನ ವ್ಯಕ್ತಪಡಿಸಿದರು.

ಇದಾದ ಕೇವಲ ಹದಿಮೂರು ದಿನಕ್ಕೆ ಅಂದರೆ 01–10–1971ರಂದು ಕನ್ನಡ ಚಳುವಳಿಗಾರರು ನ.ನಾಗಲಿಂಗಸ್ವಾಮಿ ಮುಂತಾದವರ ಮುಖಂಡತ್ವದಲ್ಲಿ ಶ್ರೀ ಚಾಮುಂಡೇಶ್ವರಿ ಮತ್ತು ಮಹಾರಾಜರ ಭಾವಚಿತ್ರಗಳನ್ನಿಟ್ಟು ಮೆರವಣಿಗೆ ಮಾಡಿದರು. ನಗರದ ಪ್ರಮುಖ ರಸ್ತೆಗಳಲ್ಲಿ ಸಾಗಿದ ಮೆರವಣಿಗೆ ಅಗ್ರಹಾರದ ಸರ್ಕಲ್ಲಿನಲ್ಲಿ ಬಂದು ನಿಂತಿತು. ಅದೇ ಜಾಗದಲ್ಲಿ ಸುಮಾರು 10 ದಿನ ಮಹಾರಾಜರ ಮತ್ತು ಚಾಮುಂ ಡೇಶ್ವರಿಯ ಭಾವಚಿತ್ರಗಳನ್ನಿಡಲಾಗಿತ್ತು. ಬಹುಶಃ ಚಾಮುಂಡೇಶ್ವರಿ ಮೆರವಣಿಗೆ ನಡೆದದ್ದು ಅಂದೇ ಮೊತ್ತ ಮೊದಲು. ಅಲ್ಲೀವರೆಗೆ ದಸರಾ ಜಂಬೂಸವಾರಿ ಎಂದರೆ ಸ್ವತಃ ಮಹಾರಾಜರ ಮೆರವಣಿಗೆಯಾಗಿತ್ತು.

ದಸರಾ ಇಡೀ ಕನ್ನಡಿಗರ ನಾಡಹಬ್ಬವಾದ್ದರಿಂದ ಕನ್ನಡ ತಾಯಿ ರಾಜರಾಜೇಶ್ವರಿ, ಭುವನೇಶ್ವರಿ ವಿಗ್ರಹವೇ ಮುಂದಿನ ವರ್ಷದ ಮೆರವಣಿಗೆಯಲ್ಲಿರಬೇಕೆಂಬ ತೀರ್ಮಾನವನ್ನು ಚಳುವಳಿಗಾರರು ತೆಗೆದುಕೊಂಡರು. 1972 ಮತ್ತು 73ರಲ್ಲಿ ತೀವ್ರ ಬರಗಾಲ ಬಂದು ಪುನಃ ದಸರಾ ನಿಂತಿತು. ಆದರೆ ಅರಮನೆಯಲ್ಲಿ ದಸರಾ ಪೂಜಾ ಕಾರ್ಯಗಳು ಯಥಾ ರೀತಿಯಲ್ಲಿ ನಡೆಯಲೇಬೇಕಿತ್ತು. ಯಾಕೆಂದರೆ ಅವು ನಾಡಿನ ಜನರ ಸುಭಿಕ್ಷ ಮತ್ತು ಸಮೃದ್ಧಿಯನ್ನು ಕೋರುವ ಪೂಜಾ ವಿಧಾನಗಳಾಗಿದ್ದವು. ಆದರೆ ಜಂಬೂಸವಾರಿಯ ಮೆರವಣಿಗೆ ಇರಲಿಲ್ಲ.

ದಿ. 23–9–1974ರಂದು ಮಹಾರಾಜ ಶ್ರೀ ಜಯಚಾಮರಾಜ ಒಡೆಯರ್ ಅವರು 55ನೇ ವಯಸ್ಸಿನಲ್ಲಿ ಹಠಾತ್ ನಿಧನ ಹೊಂದಿದರು. ಹೀಗಾಗಿ 1974ರಲ್ಲೂ ದಸರಾದ ಯಾವ ಚಟುವಟಿಕೆಗಳೂ ನಡೆಯಲಿಲ್ಲ. ಆದರೆ ನಾಡಹಬ್ಬ ಸಮಿತಿಯವರು ಸಾಂಪ್ರದಾಯಿಕವಾಗಿ ಮಹಾರಾಜರ ಭಾವಚಿತ್ರವನ್ನು ರಥದಲ್ಲಿಟ್ಟು ಚಿಕ್ಕ ಮೆರವಣಿಗೆ ನಡೆಸಿ, ಅಗ್ರಹಾರದ ವಾಣಿವಿಲಾಸ ಮಾರುಕಟ್ಟೆ ಸರ್ಕಲಿನಲ್ಲಿ ಪಟವನ್ನಿಟ್ಟರು.

ಯಾವ ಕಾರಣಕ್ಕೂ ದಸರಾ ಮೆರವಣಿಗೆ ನಿಲ್ಲಿಸಕೂಡದೆಂಬ ಕೂಗೆದ್ದಿತು. ಸರ್ಕಾರವೇ ದಸರಾ ನಡೆಸಲಿ ಎಂದು ಜನತೆ ಒತ್ತಾಯಿಸತೊಡಗಿತು. ಮುಖ್ಯಮಂತ್ರಿ ದೇವರಾಜ ಅರಸರು ಮೈಸೂರಿಗೆ ಬಂದಾಗಲೆಲ್ಲಾ ಜನಗಳು ಮುತ್ತಿಕೊಂಡು ದಸರೆಗಾಗಿ ಆಗ್ರಹಿಸತೊಡಗಿದರು. 'ಬರಗಾಲದ ಜಿಲ್ಲಾಭಿವೃದ್ಧಿ ಅತ್ತ ಇರಲಿ. ದಸರಾ ನಡೆಯಲಿ' ಕೂಗು ಎಲ್ಲೆಡೆ ಮೊಳಗಿತು ಇವೆಲ್ಲ ಒತ್ತಡದ ಫಲಶೃತಿಯಾಗಿ ಪ್ರಥಮ 'ಜನತಾ ದಸರಾ' ಸರ್ಕಾರದ ವತಿಯಿಂದ 14–10–1975ರಲ್ಲಿ ನಡೆಯಿತು. ಆನೆ ರಾಜೇಂದ್ರನ ಮೇಲಿಟ್ಟ ಚಿನ್ನದ ಅಂಬಾರಿಯಲ್ಲಿ ಶ್ರೀ ಚಾಮುಂಡೇಶ್ವರಿಯ ಮೆರವಣಿಗೆ ಸಕಲ ಪದಾತಿದಳದೊಂದಿಗೆ ಹೊರಟಿತು. ಅರಮನೆಯ ಗೌರವ ನಿಶಾನೆಗಳಾದ ಬೆಳ್ಳಿ ರಥ, ಪಲ್ಲಕ್ಕಿ, ಪಟ್ಟದ ಆನೆ, ಕುದುರೆ, ಹಸುಗಳೂ ಭಾಗವಹಿಸಿದ್ದವು. ಅರವತ್ತು ಪೊಲೀಸ್ ವಾದಕರಿದ್ದ ಆನೆಗಾಡಿ, ಫಿರಂಗಿ ಗಾಡಿಗಳೂ ಬಂದವು. ಅರಮನೆಯ ಗೌರವ ನಿಶಾನೆಗಳು, ಸಾಲಂಕೃತ ಆನೆಗಳು, ಗ್ರಾಮೀಣ ಕಲಾತಂಡಗಳು ಉತ್ಸಾಹದಿಂದ ಹೆಜ್ಜೆ ಹಾಕಿದವು.

1976ರಲ್ಲಿ ಮತ್ತೊಂದು ದಸರಾ ಸಾಂಪ್ರದಾಯಿಕವಾಗಿ ನಡೆಯಿತು. ಆದರೆ 1977ರಲ್ಲಿ ದಸರಾ ಜಂಬೂಸವಾರಿಯೇ ನಡೆಯಲಿಲ್ಲ. ಆ ದಿನಗಳಲ್ಲಿ ವಿದ್ಯಾರ್ಥಿಗಳ ಚಳುವಳಿ ತೀವ್ರವಾಗಿ ನಡೆಯುತ್ತಿತ್ತು. ಉಪಕುಲಪತಿಗಳ ವಿರುದ್ಧ ಇಡೀ ವಿದ್ಯಾರ್ಥಿ ವೃಂದ ಮುರಕೊಂಡು ಬಿದ್ದಿತ್ತು. ಕಾಲೇಜುಗಳು ಬಂದ್ ಆಗಿದ್ದವು. ಅದೇ ವೇಳೆ ವರುಣಾ ನಾಲೆಗೆ ಸಂಬಂಧಿಸಿದಂತೆ ಮಂಡ್ಯದಲ್ಲೂ ಚಡ್ಡಿ ಚಳುವಳಿ ತೀವ್ರವಾಗಿತ್ತು.

1978ರಲ್ಲಿ ಅನೇಕ ಸುಧಾರಣೆಗಳೊಂದಿಗೆ ಮತ್ತೆ ದಸರಾ ಪ್ರಾರಂಭವಾಯಿತು. ನಾಡಿನ ಸಂಸ್ಕೃತಿ ಕಲೆಗಳು ಮೇಳೈಸಿದ ಜಾನಪದ ಕಲಾತಂಡಗಳು ಮತ್ತು ಸ್ತಬ್ಧಚಿತ್ರ ಗಳು ಪಾಲ್ಗೊಂಡವು. ಎಲ್ಲ ಜಿಲ್ಲೆಗಳ ಕಲಾ ಪ್ರದರ್ಶನಕ್ಕೂ ಅವಕಾಶ ಕಲ್ಪಿಸಲಾಯಿತು. ಇದೇ ಮೊತ್ತ ಮೊದಲ ಬಾರಿಗೆ ಆನೆ 'ದ್ರೋಣ' ಅಂಬಾರಿಯ ಸಾರಥ್ಯ ವಹಿಸಿದ್ದ. ಅವನು ಕಾಲಿಟ್ಟದ್ದೇ ಇಟ್ಟದ್ದು, ದಸರಾದ ಸ್ವರೂಪ ವರ್ಷದಿಂದ ವರ್ಷಕ್ಕೆ ಸುಧಾರಣೆಯಾಗುತ್ತಾ ಬಂತು. ನಿಜದರ್ಥದ ದಸರಾ ಅಬಾಧಿತವಾಗಿ ನಡೆಯತೊಡಗಿತು.

ಸರ್ಕಾರವೇ ನಡೆಸುವ ದಸರಾದಲ್ಲಿ ಹಳೆಯ ಸಂಪ್ರದಾಯದ ಅನೇಕ ಉತ್ತಮಾಂಶಗಳನ್ನು ಉಳಿಸಿಕೊಂಡು, ಆಧುನಿಕ ಅಂಶಗಳನ್ನು ಹೊಸದಾಗಿ ಸೇರಿಸಿಕೊಳ್ಳಲಾಯಿತು. ಕಾಲಾಂತರದಲ್ಲಿ ರೈತ ದಸರಾ, ಮಹಿಳಾ ದಸರಾ, ಯೋಗ ದಸರಾ ಹೀಗೆ ನಾನಾ ವಿಭಾಗಗಳನ್ನು ಸೇರಿಸಿಕೊಂಡು ನಿಜದರ್ಥದ ಕರ್ನಾಟಕ ನಾಡಹಬ್ಬವನ್ನಾಗಿ ಹಿಗ್ಗಿಸಿದ್ದಾರೆ.


ಈಗಿನ ದಸರಾ ಎಂದರೆ ಕನ್ನಡಿಗರ ಉಜ್ವಲ ಪರಂಪರೆಯನ್ನು ಪದರ ಪದರವಾಗಿ ತೆರೆಯುವ ನಾಡಹಬ್ಬ ದಸರಾ. ನೈತಿಕ ಮೌಲ್ಯಗಳನ್ನು ಉದ್ದೀಪಿಸುವ, ನಮ್ಮ ಸಾಂಸ್ಕೃತಿಕ ಪರಂಪರೆಯನ್ನು ವೈಭವದಿಂದ ಅನಾವರಣಗೊಳಿಸುವ ವರ್ಣರಂಜಿತ ನಾಡಹಬ್ಬವಾಗಿ ಬೆಳೆದಿದೆ.

ಭಾರತ ಮಾತೆ, ಕನ್ನಡ ರಾಜರಾಜೇಶ್ವರಿ ಹೀಗೆ ನಾನಾ ವಿಗ್ರಹಗಳ ಮೆರವಣಿಗೆ ನಡೆಸಬೇಕೆಂಬ ಚರ್ಚೆಗಳು ನಡೆದರೂ, ಕೊನೆಗೆ ಅಂತಿಮವಾಗಿ ತೀರ್ಮಾನವಾಗಿದ್ದು ಶ್ರೀ ಚಾಮುಂಡೇಶ್ವರಿಯ ಉತ್ಸವ ಮೂರ್ತಿ. ಕನ್ನಡಿಗರೆಲ್ಲರ ಏಕಶಕ್ತಿಯ ಪ್ರತೀಕ, ಶ್ರೀ ಚಾಮುಂಡೇಶ್ವರಿಯೇ ಕರ್ನಾಟಕ ನೆಲದ ಮಹಾಮಾತೆ ಎಂದು ಗುರ್ತಿಸಲಾದ ಕನ್ನಡ ಮಾತೆ ಶ್ರೀ ಭುವನೇಶ್ವರಿ. ಭಾರತಮಾತೆಯೂ ಇವಳೇ ಹೌದು. ಈ ನೆಲವನ್ನು ತಾಯಿ ಎಂದೇ ಪರಿಭಾವಿಸುತ್ತೇವೆ.

ಅಂದರೆ ಈ ತಾಯಿ ಯಾವುದೋ ರಾಜ್ಯಕ್ಕೆ, ಕೋಮಿಗೆ, ಜಾತಿಗೆ ಸೇರಿದವಳಲ್ಲ. ಕನ್ನಡದ ಈ ನೆಲವನ್ನು ಶ್ರೀ ಚಾಮುಂಡೇಶ್ವರಿಯ ರೂಪದಲ್ಲಿ ಗುರ್ತಿಸುತ್ತೇವೆ, ಗೌರವಿಸುತ್ತೇವೆ. ಅಖಂಡ ಕರ್ನಾಟಕವನ್ನು Symbolic ಆಗಿ ಸಾಂಕೇತಿಕವಾಗಿ ಕನ್ನಡ ಮಾತೆ ಎಂದು ಗುರ್ತಿಸುತ್ತಿದ್ದೇವೆ ಎಂಬುದು ಅಂದಿನ ಸಂಘಟಕರ ವಿವರಣೆ.

ಹೀಗಾಗಿ ಕರ್ನಾಟಕ ಸಮಷ್ಟಿ ಜನರ ಪ್ರತೀಕ ಶ್ರೀ ಚಾಮುಂಡೇಶ್ವರಿ.

ರೇಣುಕಾಸ್ವಾಮಿ ಕೊಲೆ ಪ್ರಕರಣ: ಅ.14ಕ್ಕೆ ನಟ ದರ್ಶನ್ ಜಾಮೀನು ಅರ್ಜಿ ತೀರ್ಪು



ಬೆಂಗಳೂರು, ಅ.10– ಚಿತ್ರದುರ್ಗದ ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ಬಂಧನಕ್ಕೊಳಗಾಗಿರುವ ನಟ ದರ್ಶನ್ ಅವರ ಜಾಮೀನು ಅರ್ಜಿ ವಿಚಾರಣೆಯನ್ನು ಕೋರ್ಟ್ ಗುರುವಾರ ಮುಕ್ತಾಯಗೊಳಿಸಿದ್ದು, ಅ.14ಕ್ಕೆ ತೀರ್ಪು ಕಾಯ್ದಿರಿಸಿದೆ.

ಜಾಮೀನು ಕೋರಿ ದರ್ಶನ್ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ 57ನೇ ಸಿಸಿಎಚ್ ನ್ಯಾಯಾಲಯ, ಆರೋಪಿ ಪರ ವಕೀಲ ಸಿವಿ ನಾಗೇಶ್ ಹಾಗೂ ಎಸ್‌ಪಿಪಿ ಪ್ರಸನ್ನ ಕುಮಾರ್ ಸುದೀರ್ಘ ವಾದ–ಪ್ರತಿವಾದಗಳನ್ನು ಆಲಿಸಿ ತೀರ್ಪು ಕಾಯ್ದಿರಿಸಿದೆ. ಅ.14ರಂದು ಎ2 ಆರೋಪಿ ದರ್ಶನ್‌ಗೆ ಜಾಮೀನು ಸಿಗುತ್ತದೆಯೋ ಇಲ್ಲವೋ ಎಂಬುದು ತಿಳಿಯಲಿದೆ. ಅದೇ ದಿನ ಪ್ರಕರಣದ ಎ1 ಆರೋಪಿ ಪವಿತ್ರಾ ಗೌಡ, ಎ8 ರವಿಶಂಕರ್, ಎ11, ಎ12 ಹಾಗೂ ಎ13 ಅವರ ಜಾಮೀನು ಅರ್ಜಿಯ ಆದೇಶವೂ ಹೊರಬೀಳಲಿದೆ.

ಅಕ್ಟೋಬರ್ 14ರಂದು ಎ13 ದೀಪಕ್‌ಗೆ ಜಾಮೀನು ಸಿಗುವುದು ಖಾತ್ರಿಯಾಗಿದೆ. ದೀಪಕ್‌ಗೆ ಜಾಮೀನು ನೀಡಲು ಎಸ್‌ಪಿಪಿ ತಕರಾರು ಎತ್ತಿಲ್ಲ. ಆದರೆ ಇನ್ನುಳಿದ ಯಾವುದೇ ಆರೋಪಿಗಳಿಗೆ ಜಾಮೀನು ನೀಡಬಾರದು ಎಂದು ಪ್ರಸನ್ನ ಕುಮಾರ್ ವಾದಿಸಿದ್ದಾರೆ. ಇಂದು ನಡೆದ ವಾದದಲ್ಲಿ ಸಿವಿ ನಾಗೇಶ್, ಎಸ್‌ಪಿಪಿ ಅವರು ಕಳೆದ ಎರಡು ದಿನಗಳಲ್ಲಿ ಸಲ್ಲಿಸಿದ ವಾದಕ್ಕೆ ಪ್ರತಿವಾದ ಮಂಡಿಸಿದರು. ನಾಗೇಶ್, ಆರೋಪಿಗಳು ಮತ್ತು ಸಾಕ್ಷಿಗಳ ಲೊಕೇಶನ್ ಒಂದೇ ಕಡೆ ಇದ್ದವೆಂದು ಪೊಲೀಸರು ಮಾಡಿರುವ ತನಿಖೆ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿದರು. ಅದಾದ ಬಳಿಕ ಒಬ್ಬ ಸಾಕ್ಷಿಯ ಹೇಳಿಕೆಯನ್ನು 13 ದಿನ ತಡವಾಗಿ ದಾಖಲಿಸಿರುವ ಬಗ್ಗೆಯೂ ಆಕ್ಷೇಪ ವ್ಯಕ್ತಪಡಿಸಿದರು. ಅಲ್ಲದೆ, ಆ ಸಾಕ್ಷಿಯನ್ನು ಪೊಲೀಸರೇ ಸೃಷ್ಟಿಸಿದ್ದಾರೆ. ಬೇಕೆಂದೇ ಮರಣೋತ್ತರ ಪರೀಕ್ಷಾ ವರದಿ ಬಂದ ಬಳಿಕ ಆ ವರದಿಗೆ ಹೋಲಿಕೆ ಆಗುವಂತೆ ಸಾಕ್ಷಿಯಿಂದ ಹೇಳಿಕೆ ಪಡೆಯಲಾಗಿದೆ ಎಂದು ವಾದಿಸಿದರು.

ವಿವಿಧ ಸೌಲಭ್ಯಕ್ಕೆ ಅರ್ಜಿ ಆಹ್ವಾನ

ಮೈಸೂರು: ಡಾ.ಬಾಬು ಜಗಜೀವನರಾಂ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮದ ವತಿಯಿಂದ ಚರ್ಮ ಕುಶಲಕರ್ಮಿಗಳಿಗೆ 2024–25ನೇ ಸಾಲಿನ ವಿವಿಧ ಕ್ರಿಯಾ ಯೋಜನೆಗಳಾದ ಕೌಶಲ ತರಬೇತಿ, ಸ್ವಯಂ ಉದ್ಯೋಗ ಸ್ವಾವಲಂಬಿ ಮಾರಾಟ ಮಳಿಗೆ, ಸಂಚಾರಿ ಮಾರಾಟ ಮಳಿಗೆ, ಕಿರು ನೇರ ಸಾಲ, ಪಾದುಕೆ ಕುಟೀರ, ವಸತಿ ಯೋಜನೆಗಳಿಗೆ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತರು https://sevasindu.karnataka.gov.inನಲ್ಲಿ ಅ.30ರೊಳಗೆ ಅರ್ಜಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಸಂಯೋಜಕರ ಮೊ.ನಂ:7411223926 ಅನ್ನು ಸಂಪರ್ಕಿಸಬಹುದು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581/1980 E-mail address: mysoorumithra@gmail.com For advertisements: mysoorumithra@gmail.com

ಒಂದನೇ ಪುಟದಿಂದ

ಡಾ.ಇಳಯರಾಜ ಗಾನ ತಂಡ

ಇಳಯರಾಜ, ಸದಾಕಾಲವೂ ಮನಕೆ ಮುದ ನೀಡುವ ಸುಪ್ರಸಿದ್ಧ ಕನ್ನಡ, ಹಿಂದಿ ಹಾಗೂ ತಮಿಳು–ತೆಲುಗು ಹಾಡುಗಳನ್ನು ಕಲಾಭಿಮಾನಿಗಳಿಗೆ ಉಣಬಡಿಸಿದರು. ತಮಿಳಿನ 'ತಾಯಿ ಮೂಕಾಂಬಿಕಾಯ್' ಚಿತ್ರ 'ಜನನಿ ಜನನಿ ಜಗತ್ಕಾರಿ ನೀ' ಹಾಡನ್ನು ಹಾಡಿ ಸುಗಮ ಸಂಗೀತ ಕಾರ್ಯಕ್ರಮಕ್ಕೆ ಭಕ್ತಿಯ ಬುನಾದಿ ಇಟ್ಟರು. ಈ ವೇಳೆ, ನಾನು 1979ರಲ್ಲಿ ಮೈಸೂರಿನ ಟೌನ್‌ಹಾಲ್‌ನಲ್ಲಿ ಜಿ.ಕೆ.ವೆಂಕಟೇಶ್ ಅವರ ಸಂಗೀತ ಕಾರ್ಯಕ್ರಮದಲ್ಲಿ ಕೀಬೋರ್ಡ್ ನುಡಿಸಲು ಬಂದಿದ್ದೆ. ಅಲ್ಲಿಂದ ಹೊರಟ ನನ್ನನ್ನು ತಾಯಿ ಕೊಲ್ಲೂರು ಮುಕಾಂಬಿಕೆ ಕರೆಸಿಕೊಂಡಳು ಎನ್ನುತ್ತಲೇ 'ಅಮ್ಮ ಎಂದು ಕೂಗಿದರೆ ಮೈನವಿರೇಳುವುದು' ಎಂದು ಹಾಡುವ ಮೂಲಕ ತಾನು ಮೂಕಾಂಬಿಕೆಯ ವರಪುತ್ರ ಎಂದು ಹೇಳಿ, ಮೈಸೂರಿನಲ್ಲಿ ಕಳೆದ ನೆನಪನ್ನು ಮೆಲುಕು ಹಾಕಿದರು. ನಂತರ 'ಆನಂದ ಕಂಡೆನಲ್ಲಾ ನಾನಿಂದು ನಿನ್ನ ಕಾಣುವ ಆಸೆ ಬಹು ದಿನಗಳ ಬಯಕೆ' ಎಂದು ಪದ ಕಟ್ಟಿ ಹಾಡಿದ ಇಳಯರಾಜ ಅವರು, ನಾಡದೇವಿ ಚಾಮುಂಡೇಶ್ವರಿಗೆ ಭಕ್ತಿಯ ನಮನ ಸಲ್ಲಿಸಿದರು. ಹಾಗೆಯೇ ಅವರ ತಂಡದ ಗಾಯಕಿಯರು ಕರುಣಾಮಯಿ ಚಿತ್ರ 'ಶರಣೆಂಬ ಕರಿಣಾಮಯಿ' ಹಾಡನು ಹಾಡಿದರೆ, ಗಾಯಕ ಹರಿಚರಣ್ 'ಓಂ ಶಿವೋಹಂ ರುದ್ರ ನಾಮಮ್ ಭಜೆ ಹಂ' ಹಾಡನ್ನು ಸುಶ್ರಾವ್ಯವಾಗಿ ಹಾಡುವುದರೊಂದಿಗೆ ಸಂಗೀತ ಸುಧೆಗೆ ಭಕ್ತಿಯ ಮುನ್ನುಡಿ ಬರೆದರು.

ಸುಮಧುರ ಗೀತೆಗಳ ಹೂರಣ: ಖ್ಯಾತ ಗಾಯಕ ಎಸ್.ಪಿ. ಬಾಲಸುಬ್ರಹ್ಮಣ್ಯ ಅವರ ಪುತ್ರ ಚರಣ್, ಮಾತು ತಪ್ಪದ ಮಗ ಚಿತ್ರ 'ಎಂತ ಸೌಂದರ್ಯ ನೋಡು ನಮ್ಮ ಕರುನಾಡ ಬೀಡು' ಹಾಡನ್ನು ಹಾಡಿ ಕನ್ನಡಾಭಿಮಾನ ಮೆರೆದರು. ಗಾಯಕಿ ವಿಭಾವರಿ ಮತ್ತು ಗಾಯಕ ಶರತ್, ಜನ್ಮ ಜನ್ಮದ ಅನುಬಂಧ ಚಿತ್ರದ 'ಆಕಾಶದಿಂದ ಜಾರಿ', ಗಾಯಕ ಎಸ್‌ಪಿಬಿ ಚರಣ್, ಗೀತಾ ಚಿತ್ರ 'ಸಂತೋಷಕೆ ಹಾಡು ಸಂತೋಷಕೆ' ಎಂದು ರಂಜಿಸಿದರು.

ಗಾಯಕಿ ಶ್ವೇತಾ, ನಮ್ಮೂರ ಮಂದಾರ ಹೂವೆ ಚಿತ್ರದ 'ಹೇಳೆ ಕೋಗಿಲೆ ಇಂಪಾಗಲಾ' ಹಾಡನ್ನು ಅತ್ಯಂತ ಮಧುರವಾಗಿ ಹಾಡಿ, ಗಾಯಕ ಹರಿಚರಣ್ ಜೊತೆಗೂಡಿ ನೀ ನನ್ನ ಗೆಲ್ಲಲಾರೆ ಚಿತ್ರದ 'ಐ ಲವ್ ಯೂ... ಜೀವ ಹೂವಾಗಿದೆ ಭಾವ ಜೇನಾಗಿದೆ' ಹಾಡನ್ನು ಹಾಡಿ ಶೃಂಗಾರ ಲೋಕ ಸೃಷ್ಟಿಸಿದರು. ಸಂಗೀತ ದಿಗ್ಗಜ ಇಳಯರಾಜ ಮತ್ತು ಗಾಯಕಿ ವಿಭಾವರಿ ನಮ್ಮೂರ ಮಂದಾರ ಹೂವೆ ಚಿತ್ರದ ಒಂಕಾರದಿ ಕಂಡೆ ಪ್ರೇಮ ನಾದವಾ' ಹಾಡು ಸೇರಿದಂತೆ ಹತ್ತಾರು ಕನ್ನಡ, ಹಿಂದಿ ಹಾಗೂ ತಮಿಳು ತೆಲುಗಿನ ಸುಪ್ರಸಿದ್ಧ ಹಾಡುಗಳನ್ನು ಪ್ರಸ್ತುತ ಪಡಿಸುವ ಮೂಲಕ ಮನೋಲ್ಲಾಸ ನೀಡಿದರು.

ಅಧಿಕಾರಿಗಳು, ರಾಜಕಾರಣಿಗಳಿಗೆ ಆದ್ಯತೆ: ಮೈಸೂರು ದಸರಾ ಮೆಗಾ ಇವೆಂಟ್ ಯುವ ದಸರಾ ವೇದಿಕೆಯ ವ್ಯವಸ್ಥೆಯಲ್ಲಿ ಅವ್ಯವಸ್ಥೆಯೇ ಎದ್ದು ಕಾಣುತ್ತಿತ್ತು. ಸಾವಿರಾರು ರೂ.ಕೊಟ್ಟು ಟಿಕೆಟ್ ಖರೀದಿ ಮಾಡಿದವರನ್ನು ವೇದಿಕೆಯಿಂದ ದೂರವಿರಿಸಲಾಗಿದೆ. ವೇದಿಕೆಯ ಹತ್ತಿರದಲ್ಲಿ ವಿವಿಐಪಿಗಳೆಂದು ಯಾರ್‍ಯಾರೋ ಕುಳಿತಿರುತ್ತಾರೆ. ರಾಜಕಾರಣಿಗಳು, ಅಧಿಕಾರಿಗಳಿಗೆ ಇರುವ ಪ್ರಾಧಾನ್ಯತೆ ಸಾವಿರಾರು ರೂಪಾಯಿ ಕೊಟ್ಟು ಟಿಕೆಟ್ ಖರೀದಿಸಿದವರಿಗೆ ಇಲ್ಲವೇ ಇಲ್ಲ. ವಾಹನಗಳ ಪಾರ್ಕಿಂಗ್ ವ್ಯವಸ್ಥೆಯೇ ಇರಲಿಲ್ಲ. ರಿಂಗ್ ರಸ್ತೆಯಲ್ಲೇ ಪಾರ್ಕಿಂಗ್ ಮಾಡಲಾಗಿತ್ತು. ಅದರಲ್ಲೂ ಎ.ಆರ್.ರೆಹಮಾನ್ ಅವರ ಸಂಗೀತ ಸಂಜೆ ನಡೆದ ಯುವ ದಸರಾ 4ನೇ ದಿನದಂದು ಅವ್ಯವಸ್ಥೆ ತಾಂಡವವಾಡುತ್ತಿತ್ತು ಎಂದು ಯುವ ದಸರಾ ಟಿಕೆಟ್ ಖರೀದಿಸಿದ್ದ ಹಲವರು ತೀವ್ರ ಬೇಸರ ವ್ಯಕ್ತಪಡಿಸಿದ್ದಾರೆ.

ನಾಳೆ ಜಂಬೂಸವಾರಿ

ವಿಜಯ ದಶಮಿ ಮೆರವಣಿಗೆಯು, ಅರಮನೆ ಉತ್ತರ ದ್ವಾರ, ಕೆ.ಆರ್.ಸರ್ಕಲ್, ಸಯ್ಯಾಜಿರಾವ್ ರಸ್ತೆ, ಸರ್ಕಾರಿ ಆಯುರ್ವೇದ ಸರ್ಕಲ್, ಬಂಬೂ ಬಜಾರ್, ಹೈವೇ ಸರ್ಕಲ್ ಮೂಲಕ ಸಾಗಿ ಸಂಜೆ ಬನ್ನಿಮಂಟಪದ ಪಂಜಿನ ಕವಾಯತು ಮೈದಾನ ತಲುಪಲಿದೆ.

ಅಂದು (ಶನಿವಾರ) ಸಂಜೆ 7 ಗಂಟೆಗೆ ಬನ್ನಿಮಂಟಪದ ಮೈದಾನದಲ್ಲಿ ಅತ್ಯಾಕರ್ಷಕ ಪಂಜಿನ ಕವಾಯತು ಪ್ರದರ್ಶನ ನಡೆಯಲಿದ್ದು, ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಅವರು ಕವಾಯತು ವೀಕ್ಷಿಸಿ ಗೌರವ ವಂದನೆ ಸ್ವೀಕರಿಸುವರು. ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಕೇಂದ್ರ ಸಚಿವರಾದ ಹೆಚ್.ಡಿ.ಕುಮಾರಸ್ವಾಮಿ, ನಿರ್ಮಲಾ ಸೀತಾರಾಮನ್, ಪ್ರಹ್ಲಾದ್ ಜೋಷಿ, ವಿ.ಸೋಮಣ್ಣ, ಶೋಭಾ ಕರಂದ್ಲಾಜೆ, ರಾಜ್ಯ ಸಚಿವರು, ಸಂಸದರು, ಶಾಸಕರು ಸೇರಿ ಹಲವು ಗಣ್ಯರು ಪಾಲ್ಗೊಂಡು ಟಾರ್ಚ್‌ಲೈಟ್ ಪರೇಡ್ ಮತ್ತು ಡ್ರೋನ್ ಪ್ರದರ್ಶನ ವೀಕ್ಷಿಸಲಿದ್ದಾರೆ.

ಆ ಮೂಲಕ 2024ರ ಮೈಸೂರು ದಸರಾ ಮಹೋತ್ಸವಕ್ಕೆ ತೆರೆ ಬೀಳಲಿದ್ದು, 9 ದಿನಗಳ ಕಾಲ ನಡೆದ ನವರಾತ್ರಿ ಉತ್ಸವದಲ್ಲಿ ಸಂಗೀತ, ನೃತ್ಯ, ಯುವ ಸಂಭ್ರಮ, ಯುವ ದಸರಾ, ಕ್ರೀಡೆ, ಯೋಗ, ಸಾಂಸ್ಕೃತಿಕ ಕಾರ್ಯಕ್ರಮಗಳು, ಪಾರಂಪರಿಕ ಜಾವಾ ಬೈಕ್, ವಿಂಟೇಜ್ ಕಾರುಗಳ ಪ್ರದರ್ಶನ, ಟಾಂಗಾ ಸವಾರಿ, ದಸರಾ ವಸ್ತುಪ್ರದರ್ಶನ, ವಿದ್ಯುತ್ ದೀಪಾಲಂಕಾರ, ಕುಸ್ತಿ, ಚಲನಚಿತ್ರ ಪ್ರದರ್ಶನ ಹೀಗೆ ಹತ್ತು–ಹಲವು ಕಾರ್ಯಕ್ರಮಗಳನ್ನು ವೀಕ್ಷಿಸಿ ಲಕ್ಷಾಂತರ ಮಂದಿ ಕಣ್ತುಂಬಿಕೊಂಡು ವಿಶ್ವ ಖ್ಯಾತಿಯ ಮೈಸೂರು ದಸರೆಗೆ ಸಾಕ್ಷಿಯಾಗಿದ್ದಾರೆ.

ಎಸ್‌ಐಟಿಯಿಂದ ತನಿಖೆ

ಎಸ್‌ಐಟಿ ರಚನೆ ಮಾಡಿದ್ದಾರೆ, ಅವರು, ಆರೋಪಿಗಳನ್ನು ಪತ್ತೆ ಹಚ್ಚಿ ಪ್ರಕರಣ ದಾಖಲಿಸಿ ನ್ಯಾಯಮೂರ್ತಿಗಳ ವರದಿಯಂತೆ 500 ಕೋಟಿ ರೂ. ವಸೂಲಿಗೆ ತಕ್ಷಣವೇ ಕ್ರಮ ಕೈಗೊಳ್ಳಲಿದ್ದಾರೆ.

ಎಸ್‌ಐಟಿ ಮುಖ್ಯಸ್ಥರು ಯಾರಾಗಬೇಕು ಮತ್ತು ಉಪಸಮಿತಿಯಲ್ಲಿ ಯಾರಿರಬೇಕು ಎಂಬುದನ್ನು ತೀರ್ಮಾನಿಸುವ ಅಧಿಕಾರವನ್ನು ಸಂಪುಟ ಮುಖ್ಯಮಂತ್ರಿ ಅವರಿಗೆ ನೀಡಿದೆ ಎಂದರು. ಒಟ್ಟಾರೆ, 7,000 ಕೋಟಿ ರೂ.ಗೂ ಹೆಚ್ಚು ಮೊತ್ತದ ಅವ್ಯವಹಾರ ನಡೆದಿದೆ, ಇದರಲ್ಲಿ 500 ಕೋಟಿ ರೂ. ವಸೂಲಿ ಮಾಡಬೇಕು, ಪ್ರಕರಣಕ್ಕೆ ಸಂಬಂಧಿಸಿದಂತೆ ಇನ್ನೂ 31 ಜಿಲ್ಲೆಗಳ ಮಾಹಿತಿ ಸಂಗ್ರಹ ಬಾಕಿ ಇದೆ. ಬಿಬಿಎಂಪಿಯ ನಾಲ್ಕು ವಲಯಗಳು ವರದಿ ನೀಡಬೇಕು. ಈಗಾಗಲೇ ಆಯೋಗ 55,000 ಕಡತಗಳನ್ನು ಸಂಬಂಧಪಟ್ಟ ಇಲಾಖೆಗಳಿಂದ ಪರಿಶೀಲಿಸಿ ವರದಿ ನೀಡಿದೆ. ವರದಿ ಆಧಾರದ ಮೇಲೆ ಹಗರಣದಲ್ಲಿ ಭಾಗಿಯಾದ ಕಂಪನಿಗಳು, ಸಂಸ್ಥೆಗಳನ್ನು ಕಪ್ಪುಪಟ್ಟಿಗೆ ಸೇರಿಸಲು ನಿರ್ಧರಿಸಲಾಗಿದೆ ಎಂದರು. ವಿವಿಧ ಪೊಲೀಸ್ ಠಾಣೆಗಳಲ್ಲಿ ಇದ್ದ 43 ಕ್ರಿಮಿನಲ್ ಪ್ರಕರಣಗಳನ್ನು ಹಿಂದಕ್ಕೆ ಪಡೆಯಲು ಸಭೆ ನಿರ್ಧರಿಸಿದೆ. ಗಣಿಗಾರಿಕೆ ಅಕ್ರಮಗಳ ತನಿಖೆಗಾಗಿ ಲೋಕಾಯುಕ್ತ ಕಾರ್ಯಾವಧಿಯನ್ನು ಒಂದು ವರ್ಷಕ್ಕೆ ವಿಸ್ತರಿಸಲಾಗಿದೆ. 113 ಅಕ್ರಮ ಗಣಿಗಾರಿಕೆ ಪ್ರಕರಣಗಳಿವೆ, 8 ಪ್ರಕರಣಗಳಲ್ಲಿ ಸಿಆರ್‌ಪಿಸಿ ಬಾಕಿ ಇದೆ, 6 ಪ್ರಕರಣಗಳು ತನಿಖಾ ಹಂತದಲ್ಲಿವೆ, ಹೀಗಾಗಿ ಲೋಕಾಯುಕ್ತ ತನಿಖಾ ಅವಧಿಯನ್ನು ವಿಸ್ತರಿಸಲಾಗಿದೆ ಎಂದರು.

ಲಾಟರಿ ಬಂಪರ್ 25 ಕೋಟಿ!

ಕೈಸೇರಲಿದೆ ಎಂದು ಅಲ್ತಾಫ್ ತಿಳಿಸಿದ್ದಾರೆ. ಪಾಂಡವಪುರದ ಮಂಡ್ಯ ರಸ್ತೆಯಲ್ಲಿ ಸಣ್ಣ ಪೆಟ್ಟಿಗೆ ಅಂಗಡಿಯಲ್ಲಿ ದ್ವಿಚಕ್ರ ವಾಹನಗಳ ವರ್ಕ್‌ಶಾಪ್ ಇಟ್ಟುಕೊಂಡಿರುವ ಅಲ್ತಾಫ್, ಕಡು ಬಡತನದಲ್ಲಿ ಜೀವನ ನಡೆಸುತ್ತಿದ್ದಾರೆ. ಇವರಿಗೆ ಸ್ವಂತ ಮನೆ ಇಲ್ಲ ಹೆಂಡತಿ ಮಕ್ಕಳೊಂದಿಗೆ ಪಟ್ಟಣದ ಬಸವನಗುಡಿ ಬಡಾವಣೆಯಲ್ಲಿ ಪುಟ್ಟ ಬಾಡಿಗೆ ಮನೆಯಲ್ಲಿ ವಾಸವಿದ್ದಾರೆ. ಮೊನ್ನೆ, ಖರ್ಚಿಗೆ ಹಣವಿಲ್ಲದೆ ತಾವು ಖರೀದಿಸಿದ್ದ ಲಾಟರಿ ಟಿಕೆಟ್‌ನ್ನು ಪಕ್ಕದ ವೆಲ್ಡಿಂಗ್ ಶಾಪ್ ಅಂಗಡಿ ಮಾಲೀಕನಿಗೆ ಕೇವಲ 250 ರೂಗೆ ಮಾರಾಟ ಮಾಡಲು ಮುಂದಾಗಿದ್ದರು. ಆದರೆ, ಅಂಗಡಿ ಮಾಲೀಕ ಲಾಟರಿ ಟಿಕೆಟ್ ಖರೀದಿಸಲು ನಿರಾಕರಿಸಿದರು. ಅದಾದ ಒಂದು ಗಂಟೆಗೆ ಆ ಲಾಟರಿಗೆ 25 ಕೋಟಿ ಬಹುಮಾನ ಬಂದಿದೆ ಎಂದು ಅಲ್ತಾಫ್ ಸ್ನೇಹಿತ ಸಮಿಉಲ್ಲಾ ತಿಳಿಸಿದ್ದಾರೆ. ಅಲ್ತಾಫ್‌ಗೆ ಪತ್ನಿ ಸೀಮಾ ಹಾಗೂ 21 ವರ್ಷದ ಪುತ್ರ ಹಾಗೂ 18 ವರ್ಷದ ಪುತ್ರಿ ಇದ್ದಾರೆ. ಕಷ್ಟದಲ್ಲಿದ್ದ ಅಲ್ತಾಫ್ ತನ್ನ ಮಗನನ್ನು ಶಾಲೆ ಬಿಡಿಸಿ ತನ್ನ ಗ್ಯಾರೇಜ್‌ನಲ್ಲೇ ಇರಿಸಿಕೊಂಡು ಸ್ಕೂಟರ್ ರಿಪೇರಿ ಕೆಲಸ ಕಲಿಸುತ್ತಿದ್ದರು. ಅಂತಹ ಬಡ ಅಲ್ತಾಫ್‌ಗೆ ಅದೃಷ್ಟ ಒಲಿದು ಬಂದಿದ್ದು, ಇದೀಗ ಕೋಟ್ಯಾಧೀಶರಾಗಿದಾರೆ. ಬಹುಮಾನದ ಹಣ ಪಡೆದುಕೊಳ್ಳುವುದಕ್ಕಾಗಿ ಸ್ನೇಹಿತರೊಂದಿಗೆ ಕೇರಳಾಗೆ ತೆರಳಿದ್ದಾರೆ.

ಖುಷಿ ಆಯ್ತು: ಲಾಟರಿಯಲ್ಲಿ ನನಗೆ 25 ಕೋಟಿ ಬಂದಿದೆ ಎಂದ ತಕ್ಷಣ ತುಂಬಾ ಖುಷಿ ಆಯಿತು. ನಾನು ಕುಟುಂಬ ಸಮೇತ ಮೈಸೂರಿನಲ್ಲಿ ನೆಲೆಸಬೇಕೆಂದು ತೀರ್ಮಾನ ಮಾಡಿಕೊಂಡಿದ್ದೆ. ಭಗವಂತ ಬರಿಗೈಯಲ್ಲಿ ಹೋಗಬೇಡ ಎಂದು ಕೈತುಂಬಾ ಹಣ ಕೊಟ್ಟು ಕಳುಹಿಸುತ್ತಿದ್ದಾನೆ ಎಂದು ಅಲ್ತಾಫ್ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಕಲಾಮಂದಿರ ಆವರಣದಲ್ಲಿ ಭರ್ಜರಿ ಬಾಡೂಟ..!

ಮೈಸೂರು, ಅ.10(ಎಸ್‌ಪಿಎನ್)– ಕರ್ನಾಟಕ ಕಲಾಮಂದಿರ ಆವರಣದಲ್ಲಿ ದಸರಾ ಸಾಂಸ್ಕೃತಿಕ ಉಪಸಮಿತಿ (ಅಧಿಕಾರೇತರ ಸದಸ್ಯರು) ಸದಸ್ಯರು ಬಾಡೂಟ ಆಯೋಜಿಸಿರುವುದಕ್ಕೆ ಸಾರ್ವಜನಿಕರು, ಕಲಾವಿದರು, ಸಾಹಿತಿಗಳು, ಜನಪ್ರತಿನಿಧಿಗಳಿಂದ ತೀವ್ರ ಆಕ್ರೋಶ ವ್ಯಕ್ತವಾಗಿದೆ.

ದಸರಾ ಮಹೋತ್ಸವದ ಅಂಗವಾಗಿ ರಚನೆಯಾದ ದಸರಾ ಸಾಂಸ್ಕೃತಿಕ ಉಪ ಸಮಿತಿಯ ಅಧಿಕಾರೇತರ 132 ಸದಸ್ಯರು ಕಳೆದ 9 ದಿನಗಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳ ಯಶಸ್ಸಿಗೆ ದುಡಿದಿರುವ ಹಿನ್ನಲೆಯಲ್ಲಿ ಅಭಿನಂದನಾ ಕಾರ್ಯಕ್ರಮವನ್ನು ಕಲಾಮಂದಿರದಲ್ಲಿ ಆಯೋಜಿಸಿ ಎಲ್ಲರಿಗೂ ಹಾರ–ತುರಾಯಿ ಹಾಕಿ ಗೌರವಿಸಲಾಗಿತ್ತು.

ಈ ಅಭಿನಂದನಾ ಸಮಾರಂಭದಲ್ಲಿ ಜಿಪಂ ಸಿಇಓ ಕೆ.ಎಂ.ಗಾಯತ್ರಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಎಂ.ಡಿ.ಸುದರ್ಶನ್ ಸೇರಿದಂತೆ ಇತರೆ ಅಧಿಕಾರಿಗಳು ಭಾಗವಹಿಸಿ, ಅಧಿಕಾರೇತರ ಸದಸ್ಯರಿಗೆ ಅಭಿನಂದನೆ ಸಲ್ಲಿಸಿ, ಅಲ್ಲಿಂದ ತೆರಳಿದ್ದರು. ನಂತರ ಕಲಾಮಂದಿರ ಆವರಣದ ಕಿರುರಂಗ ಮಂದಿರದ ಎದುರಿನ ಜಾಗದಲ್ಲಿ ದೊಡ್ಡ ಪೆಂಡಾಲ್ ಹಾಕಿ ಬಾಡೂಟ ಆಯೋಜನೆ ಮಾಡಿರುವುದು ಎಷ್ಟು ಸರಿ

ಕಲಾವಿದರು, ಸಾಹಿತಿಗಳು, ಜನಪ್ರತಿನಿಧಿಗಳ ಆಕ್ರೋಶ



ಕಲಾಮಂದಿರ ಆವರಣದಲ್ಲಿ ಬಾಡೂಟ ತಿಂದು, ಎಂಜಲೆಲೆ ಬಿಟ್ಟುಹೋಗಿರುವ ಸಾಂಸ್ಕೃತಿಕ ಸಮಿತಿ ಸದಸ್ಯರು.

> ದಸರಾ ಸಾಂಸ್ಕೃತಿಕ ಉಪ ಸಮಿತಿ ಅಧಿಕಾರೇತರ ಸದಸ್ಯರಿಗೆ ಗುರುವಾರ ಕಲಾಮಂದಿರದಲ್ಲಿ ಅಭಿನಂದನೆ ಕಾರ್ಯಕ್ರಮ ಆಯೋಜಿಸಿದ್ದು, ಈ ಬಾರಿ ದಸರಾ ಸಾಂಸ್ಕೃತಿಕ ಕಾರ್ಯಕ್ರಮಗಳ ಯಶಸ್ಸಿಗೆ ದುಡಿದವರಿಗೆ ಬಾಡೂಟ ಆಯೋಜನೆ ಮಾಡಲಾಗಿತ್ತು ಈ ಪಾರ್ಟಿಗೆ ನನಗೂ ಆಹ್ವಾನವಿತ್ತು ಆದರೆ, ನಾನು ಹೋಗಲಿಲ್ಲ. ದಸರಾ ಸಂದರ್ಭದಲ್ಲಿ ಕಲಾಮಂದಿರ ಆವರಣದಲ್ಲಿ ಬಾಡೂಟ ಆಯೋಜನೆ ಮಾಡಬಾರದಿತ್ತು.
> – **ಪ್ರವೀಣ್,** ಯುವ ಸಾಹಿತಿ

ಎಂದು ಸಾರ್ವಜನಿಕರು ಪ್ರಶ್ನಿಸಿದ್ದಾರೆ.

ದಸರಾ ಸಂದರ್ಭದಲ್ಲಿ ಸಾಂಸ್ಕೃತಿಕ ಉಪ ಸಮಿತಿ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಸದಸ್ಯರಿಗೆ ಅಭಿನಂದನಾ ಸಮಾರಂಭ ಆಯೋಜಿಸಿ ಗೌರವಿಸಿದ್ದು ಸರಿಯಷ್ಟೆ ಆದರೆ, ಈ ನೆಪದಲ್ಲಿ ವೈಯಕ್ತಿಕವಾಗಿ ಬಾಡೂಟ ಆಯೋಜಿಸಿ ಮೋಜು–ಮಸ್ತಿಗೆ ಅವಕಾಶ ನೀಡಿರುವುದರಲ್ಲಿ ಅಧಿಕಾರಿಗಳ ಕಾರ್ಯಲೋಪ ಎದ್ದು ಕಾಣುತ್ತದೆ.

ನಾಡದೇವಿ ಚಾಮುಂಡೇಶ್ವರಿ ಪೂಜಿಸುವ ಹಬ್ಬದಲ್ಲಿ ಸ್ವಯಂ ಸೇವಕರನ್ನು ಅಭಿನಂದಿಸುವುದು ಒಳ್ಳೆಯ ಕಾರ್ಯ. ಆದರೆ, ಈ ನೆಪದಲ್ಲಿ ವೈಯಕ್ತಿಕವಾಗಿ ಬಾಡೂಟ ಆಯೋಜಿಸಿರುವುದಕ್ಕೆ ಬೇಸರವಿದೆ. ಇದಕ್ಕೆ ಸರ್ಕಾರಿ ಅಧಿಕಾರಿಗಳು ಕೈಜೋಡಿಸಿರುವುದು ಮಹಾತಪ್ಪು. ಇಂತಹ ಅಧಿಕಾರಿಗಳ ವಿರುದ್ಧ ಮೊದಲು ಕ್ರಮ ಜರುಗಿಸಬೇಕೆಂದು ಬಳ್ಳಾರಿಯ ಜಾನಪದ ಕಲಾವಿದ ಶರಣಪ್ಪ ಜಿಲ್ಲಾಡಳಿತವನ್ನು ಒತ್ತಾಯಿಸಿದರು.

> ವೈರಲ್ ಫೀವರ್ ಹಿನ್ನಲೆ ಗುರುವಾರ ಕರ್ತವ್ಯಕ್ಕೆ ಹಾಜರಾಗದೇ ಮನೆಯಲ್ಲಿ ವಿಶ್ರಾಂತಿ ಪಡೆಯುತ್ತಿದ್ದೇನೆ. ಈ ಹಿಂದೆ ಕಲಾಮಂದಿರ ಆವರಣದ ಮನೆಯಂಗಳದಲ್ಲಿ ಗೋಮಾಂಸ ಸೇವನೆ ಸಂಬಂಧ ಪ್ರಗತಿಪರ ಸಾಹಿತಿಗಳು ಹಾಗೂ ಬಿಜೆಪಿ ಕಾರ್ಯಕರ್ತರ ನಡುವೆ ಪರ–ವಿರೋಧ ಚರ್ಚೆಯಾಗಿತ್ತು ಅಂದಿನಿಂದ ಕಲಾಮಂದಿರ ಆವರಣದಲ್ಲಿ ನಡೆಯುವ ಯಾವುದೇ ಕಾರ್ಯಕ್ರಮಗಳಲ್ಲಿ ಮಾಂಸಹಾರ ಸೇವನೆಗೆ ಅವಕಾಶವಿರಲಿಲ್ಲ. ಇಂದಿನ ಘಟನೆ ನನಗೆ ತಿಳಿದಿಲ್ಲ.
> –**ವಿ.ಎನ್.ಮಲ್ಲಿಕಾರ್ಜುನ ಸ್ವಾಮಿ,** ಜಂಟಿ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ

> ಕಲಾಮಂದಿರ ಆವರಣದಲ್ಲಿ ಸಾಂಸ್ಕೃತಿಕ ಉಪಸಮಿತಿ ಅಧಿಕಾರೇತರ ಸದಸ್ಯರು ಅಭಿನಂದನಾ ಕಾರ್ಯಕ್ರಮದ ನೆಪದಲ್ಲಿ ಬಾಡೂಟ ಆಯೋಜನೆ ಮಾಡಬಾರದಿತ್ತು. ಅವರು ಬೇಕಿದ್ದರೆ ಬೇರೆ ಕಡೆ ಆಯೋಜನೆ ಮಾಡಿ ಮೋಜು–ಮಸ್ತಿ ಮಾಡಬಹುದಿತ್ತು. ಧಾರ್ಮಿಕ, ವೈಚಾರಿಕ ಹಾಗೂ ನಾಟಕ, ನೃತ್ಯ ಸೇರಿದಂತೆ ಹತ್ತು–ಹಲವು ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗುವ ಜಾಗದಲ್ಲಿ ಈ ಕೆಲಸ ಮಾಡಬಾರದಿತ್ತು. ಇದು ದಸರಾ ಆಚರಣೆಗೆ ಕಪ್ಪುಚುಕ್ಕೆ, ಇದಕ್ಕೆ ಅವಕಾಶ ನೀಡಿರುವ ಅಲ್ಲಿನ ಅಧಿಕಾರಿಗಳನ್ನು ರಾಜ್ಯ ಸರ್ಕಾರ ಕೂಡಲೇ ಅಮಾನತುಗೊಳಿಸಿ, ಕಾನೂನು ಕ್ರಮ ಜರುಗಿಸಬೇಕು.
> – **ಎ.ಎಚ್.ವಿಶ್ವನಾಥ್,** ವಿಧಾನ ಪರಿಷತ್ ಸದಸ್ಯರು

ಕಳೆದ 40 ವರ್ಷಗಳ ಹಿಂದೆ ರೋಟರಿ ಸಂಸ್ಥೆ ಕಾರ್ಯಕ್ರಮ ಆಯೋಜಿಸಿ ತನ್ನ ಸದಸ್ಯರಿಗೆ ಮಾಂಸಹಾರ ಊಟ ಆಯೋಜಿಸಿದ್ದು, ಈ ನಡೆ ಸಾರ್ವಜನಿಕರ ಬಾರೀ ವಿರೋಧಕ್ಕೆ ಕಾರಣವಾಗಿತ್ತು. ಅಂದಿನಿಂದ ಇಂದಿನವರೆಗೆ ಬಾಡೂಟಕ್ಕೆ ಕಲಾಮಂದಿರ ಆವರಣದಲ್ಲಿ ಅವಕಾಶವಿರಲಿಲ್ಲ. ಅದರಲ್ಲೂ ದಸರಾ ಸಂದರ್ಭದಲ್ಲಿ ಬಾಡೂಟ ದೂರದ ಮಾತು. ಗುರುವಾರ ಕಲಾಮಂದಿರ ಆವರಣದಲ್ಲಿ ಸಾಂಸ್ಕೃತಿಕ ಉಪಸಮಿತಿ ಸದಸ್ಯರು ಭರ್ಜರಿ ಬಾಡೂಟ ಆಯೋಜಿಸಿ, ಎಲ್ಲಾ ಸಂಪ್ರದಾಯಗಳನ್ನು ಮುರಿದಿದ್ದಾರೆ ಈ ಕುರಿತು ನಾವೇನು ಮಾಡುವುದು ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಿಬ್ಬಂದಿಯೊಬ್ಬರು 'ಮೈಸೂರು ಮಿತ್ರ'ನಿಗೆ ತಿಳಿಸಿದರು.



ಮೈಸೂರು ದಸರಾ ಮಹೋತ್ಸವ–2024
ಇಂದಿನ ಕಾರ್ಯಕ್ರಮಗಳು

ಸಾಂಸ್ಕೃತಿಕ ಕಾರ್ಯಕ್ರಮಗಳು–ಅರಮನೆ ಆವರಣ

ಸಂಜೆ 5.00	:	ಜಯಲಕ್ಷ್ಮಿ ಮತ್ತು ತಂಡ, ಬೆಂಗಳೂರು ಅವರಿಂದ ಭಕ್ತಿಗೀತೆಗಳು
ಸಂಜೆ 6.00	:	ಜಗದ್ಗುರು ಶ್ರೀ ಇಮ್ಮಡಿ ಸಿದ್ದರಾಮೇಶ್ವರ ಮಹಾಸ್ವಾಮೀಜಿ, ಭೋವಿ ಗುರುಪೀಠ, ಚಿತ್ರದುರ್ಗ ಅವರಿಂದ ಹಿಂದೂಸ್ಥಾನಿ ಗೀತೆಗಳು
ಸಂಜೆ 7.00	:	ಡಾ.ವೈಷ್ಣವಿ ಕುಪ್ಪುಸ್ವಾಮಿ ಮತ್ತು ತಂಡದಿಂದ ಮೋಹಿನಿಯಾಟ್ಟಂ
ರಾತ್ರಿ 8.00	:	ವಿದ್ವಾನ್ ನಾಗಭೂಷಣ ಮತ್ತು ತಂಡ, ಬೆಂಗಳೂರು ಅವರಿಂದ ನೃತ್ಯರೂಪಕ
ರಾತ್ರಿ 9.00	:	ಟಿ.ಎಸ್. ಜೀವನ್ ಮತ್ತು ತಂಡ, ಕುಕ್ಕೆ ಸುಬ್ರಹ್ಮಣ್ಯ ಅವರಿಂದ ನೃತ್ಯ

ಕಲಾಮಂದಿರ

ಸಂಜೆ 4.30	:	ನಿಂಗಮ್ಮ ಮತ್ತು ತಂಡ, ಮೈಸೂರು ಅವರಿಂದ ಸುಗಮ ಸಂಗೀತ
ಸಂಜೆ 5.15	:	ಜಿ.ವಿ. ಸುಬ್ಬಲಕ್ಷ್ಮಿ ಮತ್ತು ತಂಡ, ಮೈಸೂರು ಅವರಿಂದ ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ
ಸಂಜೆ 6.00	:	ಸಾಂಸ್ಕೃತಿಕ ಸಮಾಜ ಟ್ರಸ್ಟ್, ಕೇದಳಸಾರ, ಸಾಗರ ಅವರಿಂದ ತಾಳಮದ್ದಳೆ
ಸಂಜೆ 7.00	:	ಸೃಷ್ಟಿ ಕಲಾ ಸ್ಕೂಲ್ ಆಫ್ ಫೈನ್ ಆರ್ಟ್ಸ್, ಬೆಂಗಳೂರು ಅವರಿಂದ ನೃತ್ಯರೂಪಕ
ರಾತ್ರಿ 8.00	:	ಇ.ಎಂ. ಮಂಜುಳಾ ಮತ್ತು ತಂಡ, ಮೈಸೂರು ಅವರಿಂದ ಸುಗಮ ಸಂಗೀತ

ಗಾನಭಾರತಿ, ಕುವೆಂಪುನಗರ

ಸಂಜೆ 5.00	:	ಸುಶೀಲಾ ಮತ್ತು ತಂಡ, ಮೈಸೂರು ಅವರಿಂದ ಸುಗಮ ಸಂಗೀತ
ಸಂಜೆ 6.00	:	ಲಲಿತ ಕಲಾ ನಾಟ್ಯ ಕಾಲ್ಪ ಶ್ರೀಮಠ ಚಾರಿಟಬಲ್ ಟ್ರಸ್ಟ್, ಬೆಂಗಳೂರು ಅವರಿಂದ ನೃತ್ಯ (ತುಷಾರಾ ಮತ್ತು ತಂಡ)
ರಾತ್ರಿ 7.00	:	ಪೃಥ್ವಿ ಪಾರ್ಥಸಾರಥಿ ಮತ್ತು ವಿಭಾಮೂರ್ತಿ ಅವರಿಂದ ಭರತನಾಟ್ಯ
ರಾತ್ರಿ 8.00	:	ಎಂ.ಸಿ. ಲತಾ ಮತ್ತು ತಂಡ, ಮೈಸೂರು ಅವರಿಂದ ಜಾನಪದ ಗೀತೆಗಳು
ರಾತ್ರಿ 9.00	:	ಕರುನಾಡ ಕಲಾ ಸಾಮ್ರಾಜ್ಯ ಸೇವಾ ಸಂಘ, ಮೈಸೂರು (ಎಸ್. ಅಭಿಲಾಷ) ಅವರಿಂದ ಭಾವಗೀತೆ

ಶ್ರೀ ನಾದಬ್ರಹ್ಮ ಸಂಗೀತ ಸಭಾ, ಜೆಎಲ್‌ಬಿ ರಸ್ತೆ

ಸಂಜೆ 5.00	:	ಕೋಡಿ ನಾರಾಯಣಸ್ವಾಮಿ ಮತ್ತು ತಂಡ, ಮೈಸೂರು ಅವರಿಂದ ವೀರಗಾಸೆ
ಸಂಜೆ 5.30	:	ಪ್ರತಾಪ್ ಮತ್ತು ತಂಡ, ರಾಮನಗರ ಅವರಿಂದ ಸೋಮನ ಕುಣಿತ
ಸಂಜೆ 6.00	:	ರಮೇಶ್ ದೊಡ್ಡಹಳ್ಳಿ ಮತ್ತು ತಂಡ, ಹಾಸನ ಅವರಿಂದ ಕ್ರಾಂತಿಕಾರಿ ಗೀತೆಗಳು
ರಾತ್ರಿ 7.00	:	ನೇತ್ರಾವತಿ ಕಲಾಕೇಂದ್ರ (ವಿದ್ವಾನ್ ಬಿ. ನಾಗೇಶ್ ಮತ್ತು ತಂಡ), ಬೆಂಗಳೂರು ಅವರಿಂದ ನೃತ್ಯ ರೂಪಕ
ರಾತ್ರಿ 8.00	:	ವೈಷ್ಣವಿ ಮತ್ತು ತಂಡ, ಮೈಸೂರು ಅವರಿಂದ ಸುಗಮ ಸಂಗೀತ
ರಾತ್ರಿ 9.30	:	ರೇಣುಕಾ ಮತ್ತು ತಂಡ, ಬೆಂಗಳೂರು ಅವರಿಂದ ಭರತನಾಟ್ಯ

ಚಿಕ್ಕಗಡಿಯಾರ (ಡೆಫರಿನ್ ಟವರ್)

ಸಂಜೆ 5.00	:	ಸಂಕೀರ್ತ ಮತ್ತು ತಂಡ, ಕೋಲಾರ ಅವರಿಂದ ಹುಲಿವೇಷ
ಸಂಜೆ 5.30	:	ಮಲ್ಲೇಶ್ ಮತ್ತು ತಂಡ, ಕೆ.ಆರ್. ನಗರ ಅವರಿಂದ ವೀರಗಾಸೆ
ಸಂಜೆ 6.00	:	ಸುಧಾಕರ್ ಮತ್ತು ತಂಡ, ಮೈಸೂರು ಅವರಿಂದ ಕೀಲು ಕುದುರೆ
ಸಂಜೆ 7.00	:	ಪ್ರಜ್ಞಾ ಪರಿವರ್ತನಾ ತಂಡ, ಮೈಸೂರು ಅವರಿಂದ ಕ್ರಾಂತಿಕಾರಿ ಗೀತೆಗಳು
ರಾತ್ರಿ 8.00	:	ಶ್ರೀಕೋಟೆ ಮಾರಮ್ಮ ಮಹಿಳಾ ಕಲಾತಂಡ, ಚನ್ನರಾಯಪಟ್ಟಣ ಅವರಿಂದ ಜಡೆ ಕೋಲಾಟ
ರಾತ್ರಿ 9.00	:	ಚೆಲುವಸ್ವಾಮಿ ಮತ್ತು ತಂಡ, ಮೈಸೂರು ಅವರಿಂದ ಜಾನಪದ ಗೀತೆಗಳು

ಪುರಭವನ

ಬೆಳಗ್ಗೆ 10.30	:	ವಿಶ್ವಜ್ಯೋತಿ ಕಲಾಸೇವಾ ಟ್ರಸ್ಟ್, ವಿಜಯನಗರ ಅವರಿಂದ 'ರಕ್ತರಾತ್ರಿ' ನಾಟಕ ಪ್ರದರ್ಶನ
ಮಧ್ಯಾಹ್ನ 3.00	:	ಶ್ರೀ ಚಾಮುಂಡೇಶ್ವರಿ ಕೃಪಾಪೋಷಿತ ನಾಟಕ ಮಂಡಳಿ, ಮೈಸೂರು (ಸಿ.ನಾಗರಾಜ್) ಅವರಿಂದ ರಾಜ ವಿಕ್ರಮ ನಾಟಕ ಪ್ರದರ್ಶನ
ಸಂಜೆ 6.00	:	ಶ್ರೀ ಶಂಭುಲಿಂಗೇಶ್ವರ ಕಲಾವೃಂದ, ಹಾಸನ ಅವರಿಂದ 'ಮಹಾತ್ಮ ಕನಕದಾಸ' ನಾಟಕ ಪ್ರದರ್ಶನ

ಕಿರು ರಂಗಮಂದಿರ, ಕಲಾಮಂದಿರ ಆವರಣ

ಮಧ್ಯಾಹ್ನ 1.30	:	ಮೈಸೂರಿನ ಜನಪದರು ಮತ್ತು ತಂಡ (ಪಿ. ಶಶಿಕುಮಾರ್) ಅವರಿಂದ ಕಂಸಾಳೆ
ಮಧ್ಯಾಹ್ನ 2.00	:	ದಿವ್ಯ ಬಸವರಾಜು ಮತ್ತು ತಂಡ, ಬೆಂಗಳೂರು ಅವರಿಂದ ಸುಗಮ ಸಂಗೀತ
ಮಧ್ಯಾಹ್ನ 3.00	:	ಕಲಾಮೈತ್ರಿ ಬೆಂಗಳೂರು (ಡಾ. ರಾಮಕೃಷ್ಣಯ್ಯ) ಅವರಿಂದ 'ಮಂಟೇಸ್ವಾಮಿ ಕಥಾ ಪ್ರಸಂಗ' ನಾಟಕ ಪ್ರದರ್ಶನ
ರಾತ್ರಿ 7.00	:	ರೂಪಾಂತರ, ಬೆಂಗಳೂರು ಅವರಿಂದ ಪರಸಂಗದ ಗೆಂಡೆತಿಮ್ಮ ನಾಟಕ ಪ್ರದರ್ಶನ

ರಮಾಗೋವಿಂದ ರಂಗಮಂದಿರ, ರಾಮಕೃಷ್ಣನಗರ

ಸಂಜೆ 4.30	:	ಓಂಕಾರಮೂರ್ತಿ ಮತ್ತು ತಂಡ, ಅರಸೀಕೆರೆ ಅವರಿಂದ ಚಿಟ್ಟಿಮೇಳ
ಸಂಜೆ 5.00	:	ಪಿಟೀಲು ಪ್ರಭಾಕರ್ ಮತ್ತು ತಂಡ, ಮೈಸೂರು ಅವರಿಂದ ರಂಗ ಗೀತೆಗಳು
ಸಂಜೆ 6.00	:	ಸಿ.ಎನ್. ಮಂಜೇಶ್ ಮತ್ತು ತಂಡ, ನಾಗಮಂಗಲ ಅವರಿಂದ ಜಾನಪದ ಗೀತೆಗಳು
ರಾತ್ರಿ 7.30	:	ದಿ ಮೈಸೂರು ಬಾರ್ ಅಸೋಸಿಯೇಷನ್, ಮೈಸೂರು ಅವರಿಂದ 'ಕೋಮುಶಾಂತಿ' ನಾಟಕ ಪ್ರದರ್ಶನ

ನಟನ ರಂಗಮಂದಿರ, ರಾಮಕೃಷ್ಣನಗರ

ಸಂಜೆ 5.00	:	ಸುರಭಿ ಮತ್ತು ತಂಡ, ಮೈಸೂರು ಅವರಿಂದ ರಂಗ ಗೀತೆಗಳು
ಸಂಜೆ 6.30	:	ಮಾದುರಿಮಾ ಥಿಯೇಟರ್, ಕುಣಿಗಲ್ ಅವರಿಂದ ಒಡಲಾಳ ನಾಟಕ ಪ್ರದರ್ಶನ

ಶ್ರೀಕಂಠೇಶ್ವರ ದೇವಸ್ಥಾನ, ನಂಜನಗೂಡು

ಸಂಜೆ 4.45	:	ಹನುಮಂತಪ್ಪ ಮತ್ತು ತಂಡ, ರಾಯಚೂರು ಅವರಿಂದ ಚಿಲಿಪಿಲಿ ಗೊಂಬೆ
ಸಂಜೆ 5.15	:	ರಾಗರಂಜಿನಿ ಕಲಾವೃಂದ (ಎಂ.ಆರ್. ರಾಧಾಶ್ರೀ ಮತ್ತು ತಂಡ), ಬೆಂಗಳೂರು ಅವರಿಂದ ಸುಗಮ ಸಂಗೀತ
ಸಂಜೆ 6.00	:	ಮಧುರ ಕಾರಂತ್ ಮತ್ತು ತಂಡ, ಮೈಸೂರು ಅವರಿಂದ ಭರತನಾಟ್ಯ
ರಾತ್ರಿ 7.00	:	ಯಲ್ಲನಗೌಡ ಶಂಕರಬಂಡೆ ಮತ್ತು ತಂಡ, ಬಳ್ಳಾರಿ ಅವರಿಂದ ಜಾನಪದ ಗೀತೆಗಳು
ರಾತ್ರಿ 8.00	:	ಎಸ್. ಶಾಂತರಾಜು ಮತ್ತು ತಂಡ, ಮೈಸೂರು ಅವರಿಂದ ಸುಗಮ ಸಂಗೀತ

ನವರಾತ್ರಿ ಜನಪದ ರಂಗ ಉತ್ಸವ, ವನರಂಗ, ರಂಗಾಯಣ

ಸಂಜೆ 6.30	:	ಶ್ರೀ ರಾಮೇಶ್ವರ ಕೃಪಾಪೋಷಿತ ಯಕ್ಷಗಾನ ಸೂತ್ರದ ಬೊಂಬೆ ಮೇಳ, ಹಲ್ಲರೆ ಗ್ರಾಮ, ನಂಜನಗೂಡು ತಾಲೂಕು ಅವರಿಂದ ಸತ್ಯ ಹರಿಶ್ಚಂದ್ರ ನಾಟಕ ಪ್ರದರ್ಶನ, ಸನ್ಮಾನಿತರು : ವೃತ್ತಿರಂಗಭೂಮಿ ಹಿರಿಯ ಕಲಾವಿದರಾದ ಶ್ರೀಮತಿ ಇಂದಿರಮ್ಮ, ಸ್ಥಳ: ರಂಗಾಯಣ ಆವರಣ, ಸಂಜೆ 6.30ಕ್ಕೆ.

ಅಕ್ಟೋಬರ್ 12 (ಶನಿವಾರ) ವಿಜಯದಶಮಿ (ಜಂಬೂಸವಾರಿ)

1.45 ರಿಂದ 2.10 ರವರೆಗೆ : (ಮಕರ ಲಗ್ನ) ನಂದಿ ಧ್ವಜ ಪೂಜೆ, ಸ್ಥಳ: ಅರಮನೆ ಉತ್ತರ ದ್ವಾರ (ಬಲರಾಮ ಗೇಟ್)

ಸಂಜೆ 4.00 ರಿಂದ 4.30 : (ಕುಂಭ ಲಗ್ನ) : ಜಂಬೂಸವಾರಿ ಮೆರವಣಿಗೆ, ಉದ್ಘಾಟನೆ : ಮುಖ್ಯಮಂತ್ರಿ ಸಿದ್ದರಾಮಯ್ಯ, ಗೌರವ ಅತಿಥಿಗಳು : ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ, ಪಶು ಸಂಗೋಪನಾ ಸಚಿವ ಕೆ. ವೆಂಕಟೇಶ್, ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ್ ಸಂಗಪ್ಪ ತಂಗಡಗಿ, ಅಧ್ಯಕ್ಷತೆ : ಶಾಸಕ ಟಿ.ಎಸ್. ಶ್ರೀವತ್ಸ

ಪಂಜಿನ ಕವಾಯಿತು

ಸಂಜೆ 7.00	:	ಪಂಜಿನ ಕವಾಯಿತು, ಗೌರವ ವಂದನೆ ಸ್ವೀಕಾರ : ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್, ಸ್ಥಳ: ಬನ್ನಿಮಂಟಪ ಮೈದಾನ. ಗೌರವ ಅತಿಥಿಗಳು : ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್, ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ, ಪ್ರಹ್ಲಾದ್ ಜೋಷಿ, ವಿ. ಸೋಮಣ್ಣ, ಶೋಭಾ ಕರಂದ್ಲಾಜೆ, ಡಾ. ಹೆಚ್.ಸಿ. ಮಹದೇವಪ್ಪ, ಕೆ. ವೆಂಕಟೇಶ್, ಶಿವರಾಜ್ ಸಂಗಪ್ಪ ತಂಗಡಗಿ, ಅಧ್ಯಕ್ಷತೆ : ಶಾಸಕ ತನ್ವೀರ್ ಸೇಠ್

ಪ್ರತಿದಿನದ ಆಕರ್ಷಣೆ

ದಸರಾ ಫಲಪುಷ್ಪ ಪ್ರದರ್ಶನ, ಸ್ಥಳ: ಕುಪ್ಪಣ್ಣ ಪಾರ್ಕ್	–	ಬೆಳಗ್ಗೆ 9 ರಿಂದ ರಾತ್ರಿ 8.30
ದಸರಾ ಫಲಪುಷ್ಪ ಪ್ರದರ್ಶನ, ಸ್ಥಳ: ಲಿಂಗಾಂಬುಧಿ ಕೆರೆ	–	ಬೆಳಗ್ಗೆ 9 ರಿಂದ ರಾತ್ರಿ 7
ದಸರಾ ಫಲಪುಷ್ಪ ಪ್ರದರ್ಶನ, ಸ್ಥಳ: ಕುಕ್ಕರಹಳ್ಳಿ ಕೆರೆ	–	ಬೆಳಗ್ಗೆ 9 ರಿಂದ ರಾತ್ರಿ 7
ಪುಸ್ತಕ ಮೇಳ, ಸ್ಥಳ: ಭಾರತ್ ಸ್ಕೌಟ್ಸ್ ಅಂಡ್ ಗೈಡ್ಸ್ ಮೈದಾನ	–	ಬೆಳಗ್ಗೆ 10 ರಿಂದ ರಾತ್ರಿ 7
ದಸರಾ ವಸ್ತುಪ್ರದರ್ಶನ, ಸ್ಥಳ: ವಸ್ತುಪ್ರದರ್ಶನ ಮೈದಾನ	–	ಮಧ್ಯಾಹ್ನ 2.30 ರಿಂದ ರಾತ್ರಿ 8.30
ಆಹಾರ ಮೇಳ, ಸ್ಥಳ: ಮಹಾರಾಜ ಕಾಲೇಜು ಮೈದಾನ	–	ಬೆಳಗ್ಗೆ 11 ರಿಂದ ರಾತ್ರಿ 9
ರೈಲ್ ಮ್ಯೂಸಿಯಂ	–	ಬೆಳಗ್ಗೆ 10 ರಿಂದ ರಾತ್ರಿ 8

ಜಂಬೂಸವಾರಿ ಅಂತಿಮ ಹಂತದ ತಾಲೀಮು ಯಶಸ್ವಿ



ಅರಮನೆ ಆವರಣದಲ್ಲಿ ಗುರುವಾರ ನಡೆದ ಜಂಬೂಸವಾರಿ ಅಂತಿಮ ತಾಲೀಮಿನಲ್ಲಿ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್, ಡಿಸಿಎಫ್ ಡಾ.ಐ.ಬಿ.ಪ್ರಭುಗೌಡ, ಡಿಸಿಪಿಗಳಾದ ಎಂ.ಮುತ್ತುರಾಜ್, ಮಾರುತಿ, ಅಂಬಾರಿ ಆನೆ ಅಭಿಮನ್ಯುವಿನ ಮೇಲೆ ಪುಷ್ಪಾರ್ಚನೆ ಮಾಡಿ, ಸೆಲ್ಯೂಟ್ ಹೊಡೆದರು.

ಎರಡು ಪ್ರಕರಣಗಳ ಆರೋಪಿ ಸಿದ್ದರಾಮಯ್ಯ ಸಿಎಂ ಸ್ಥಾನದಲ್ಲಿ ಮುಂದುವರೆಯುವುದು ನೈತಿಕತೆ ಅಲ್ಲ

- ಸಿಎಂ ರಾಜೀನಾಮೆಗೆ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಆಗ್ರಹ
- ಲೋಕಾಯುಕ್ತವನ್ನೇ ಮುಚ್ಚಿದ್ದವರು ಈಗ ಅದರ ಮೇಲೆ ಪ್ರಭಾವ ಬೀರದೇ ಇರುವರೇ...!



ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಗುರುವಾರ ಮೆಟ್ಟಿಲು ಮಾರ್ಗದಲ್ಲಿ ಚಾಮುಂಡಿಬೆಟ್ಟಕ್ಕೆ ತೆರಳಿ, ತಾಯಿ ಚಾಮುಂಡೇಶ್ವರಿ ದರ್ಶನ ಪಡೆದರು. ಶಾಸಕ ಟಿ.ಎಸ್.ಶ್ರೀವತ್ಸ, ಮಾಜಿ ಎಂಎಲ್‌ಸಿ ಸಿದ್ದರಾಜು, ಮಾಜಿ ಮೇಯರ್ ಶಿವಕುಮಾರ್, ಹಿರಿಯ ವಕೀಲ ಎಸ್.ಅರುಣ್ ಕುಮಾರ್ ಮತ್ತಿತರ ಮುಖಂಡರು ಸಾಥ್ ನೀಡಿದರು.

> ಚಾಮುಂಡಿಬೆಟ್ಟದಲ್ಲಿ ಭಕ್ತರಿಗೆ ಅನುಕೂಲವಾಗುವ ಇನ್ನಷ್ಟು ಯೋಜನೆಗಳು ಆಗಬೇಕಿದೆ. ಹೊಸ ಕಟ್ಟಡಗಳಿಂದ ಬೆಟ್ಟಕ್ಕೆ ಹಾನಿಯಾಗುವ ಆತಂಕವಿದೆ. ಬೆಟ್ಟವನ್ನು ಹಾಗೇ ಉಳಿಸಿಕೊಳ್ಳಬೇಕು.
> -ಶೋಭಾ ಕರಂದ್ಲಾಜೆ, ಕೇಂದ್ರ ಸಚಿವೆ

ಮೈಸೂರು, ಅ.10(ಎಸ್‌ಬಿಡಿ)– ಎರಡು ಪ್ರಕರಣಗಳಲ್ಲಿ ಆರೋಪಿಯಾಗಿರುವ ಸಿದ್ದರಾಮಯ್ಯನವರು ಮುಖ್ಯಮಂತ್ರಿ ಸ್ಥಾನದಲ್ಲಿ ಮುಂದುವರೆಯಲು ನೈತಿಕತೆ ಇಲ್ಲ. ಕೂಡಲೇ ಅವರು ರಾಜೀನಾಮೆ ನೀಡಬೇಕು ಎಂದು ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಹೇಳಿದರು.

ಮೈಸೂರಿನಲ್ಲಿ ಗುರುವಾರ ಚಾಮುಂಡಿಬೆಟ್ಟಕ್ಕೆ ಮೆಟ್ಟಿಲು ಮೂಲಕ ತೆರಳಿದ ವೇಳೆ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಮುಖ್ಯಮಂತ್ರಿ ಸಿದ್ದರಾಮಯ್ಯನವರ ಕುಟುಂಬದವರಿಗೆ ಮುಡಾದಿಂದ ಮಂಜೂರು ಮಾಡಿದ್ದ ನಿವೇಶನಗಳನ್ನು ಅವರೇ ವಾಪಸ್ ನೀಡುವ ಮೂಲಕ ಸಿಲುಕಿಕೊಂಡಿದ್ದಾರೆ. ಮಹರ್ಷಿ ವಾಲ್ಮೀಕಿ ನಿಗಮದಲ್ಲಿನ ಹಣಕಾಸು ಅವ್ಯವಹಾರದ ಬಗ್ಗೆ ತಾವೇ ಒಪ್ಪಿಕೊಂಡಿದ್ದಾರೆ. ಈ ಎರಡೂ ಪ್ರಕರಣದಲ್ಲಿ ಆರೋಪಿಯಾಗಿರುವಾಗ ಮುಖ್ಯಮಂತ್ರಿ ಸ್ಥಾನದಲ್ಲಿ ಮುಂದುವರೆಯುವುದು ನೈತಿಕವಲ್ಲ ಎಂದು ವಾಗ್ದಾಳಿ ನಡೆಸಿದರು.

ವಾಲ್ಮೀಕಿ ನಿಗಮದ ಹಣವನ್ನು ಚುನಾವಣೆಗೆ ಬಳಸಿರುವ ಬಗ್ಗೆ ಜಾರಿ ನಿರ್ದೇಶನಾಲಯ(ಇಡಿ)ವೂ ಹೇಳಿದೆ. ಜನರ ಹಣವನ್ನು ಬಳ್ಳಾರಿ, ಆಂಧ್ರದ ಚುನಾವಣೆಗೆ ಉಪಯೋಗಿಸಿಕೊಂಡಿದ್ದಾರೆ. ಈ ಸಂಬಂಧ ನಿಗಮದ ಅಧಿಕಾರಿಯೊಬ್ಬರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಸಂಬಂಧಪಟ್ಟ ಸಚಿವ ರಾಜೀನಾಮೆ ನೀಡಿದ್ದಾರೆ. ಈ ಹಗರಣದ ಹೊಣೆಯನ್ನು ಹಣಕಾಸು ಇಲಾಖೆಯನ್ನೂ ಹೊಂದಿರುವ ಸಿದ್ದರಾಮಯ್ಯನವರೇ ಹೊರಬೇಕು. ಮುಖ್ಯಮಂತ್ರಿ ಸ್ಥಾನದಲ್ಲಿ ಕೂರಲು ಅವರಿಗೆ ನೈತಿಕತೆ ಇಲ್ಲ. ತಕ್ಷಣ ಅವರು ರಾಜೀನಾಮೆ ನೀಡಬೇಕು ಎಂದು ಆಗ್ರಹಿಸಿದರು.

ಹಿಂದೆ ಮುಖ್ಯಮಂತ್ರಿಯಾಗಿದ್ದಾಗ ಲೋಕಾಯುಕ್ತವನ್ನೇ ತೆಗೆದು ಹಾಕಿದ್ದರು. ಈಗ ಮುಡಾ ಪ್ರಕರಣದಲ್ಲೂ ಪ್ರಭಾವ ಬೀರುತ್ತಿರಬಹುದು. ಸಿದ್ದರಾಮಯ್ಯನವರ ಕುಟುಂಬದವರೇ ಪತ್ರ ಬರೆದು ನಿವೇಶನಗಳನ್ನು ಮುಡಾಗೆ ವಾಪಸ್ ನೀಡಿದ್ದಾರೆ. ಹಾಗಾದರೆ ಇದರಲ್ಲಿ ಯಾರ ತಪ್ಪಿದೆ?. ಸಿದ್ದರಾಮಯ್ಯನವರು 1992ರಿಂದ ಒಂದಲ್ಲ ಒಂದು ಸಾಂವಿಧಾನಿಕ ಸ್ಥಾನದಲ್ಲಿದ್ದಾರೆ. ಹೀಗಿರುವಾಗ ಇವರಿಗೆ ಗೊತ್ತಿಲ್ಲದೆ ಇದೆಲ್ಲವೂ ಆಗಿದೆ ಎನ್ನುವುದನ್ನು ಊಹಿಸಲಾಗದು. ಅವರಿಗೆ ತಿಳಿಯದೇ ಇದೆಲ್ಲಾ ನಡೆದಿದೆ ಎಂದರೆ ಅವರು ರಾಜಕೀಯದಲ್ಲಿ ಇರಲು ಲಾಯಕ್ಕಲ್ಲ ಎಂದು ವ್ಯಂಗ್ಯವಾಡಿದರು.

ಜನರ ದಸರಾ ಆಗಬೇಕು...

ಮೈಸೂರು: ಪಾರಂಪರಿಕ ಮೈಸೂರು ದಸರಾ, ಜನರ ದಸರಾ ಆಗಬೇಕೇ ಹೊರತು ಸರ್ಕಾರದ ದಸರಾ ಆಗಬಾರದು ಎಂದು ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಹೇಳಿದರು.


ಪ್ರತಿ ವರ್ಷದಂತೆ ತಾಯಿ ಚಾಮುಂಡೇಶ್ವರಿ ದರ್ಶನ ಪಡೆಯಲು ಮೆಟ್ಟಿಲುಗಳ ಮೂಲಕ ತೆರಳುತ್ತಿದ್ದೇನೆ. ರಾಜ್ಯ, ದೇಶಕ್ಕೆ ಒಳ್ಳೆಯದಾಗಬೇಕು. ಪ್ರಧಾನಿ ಮೋದಿಯವರ ನೇತೃತ್ವದಲ್ಲಿ ದೇಶದ ಅಭಿವೃದ್ಧಿ ಸಾಗುತ್ತಿದೆ. ಅವರ ತಂಡದಲ್ಲಿ ಕೆಲಸ ಮಾಡಲು ನನಗೂ ಮತ್ತೊಂದು ಅವಕಾಶ ಸಿಕ್ಕಿದೆ. ಮೋದಿಯವರು ಉಪವಾಸ ಇದ್ದಾರೆ. ಅವರಂತೆ ಇಲ್ಲೂ ತುಂಬಾ ಜನ ಉಪವಾಸವಿದ್ದು, ಚಾಮುಂಡೇಶ್ವರಿ ದರ್ಶನ ಮಾಡುತ್ತಾರೆ. ನಾನು ಎಲ್ಲ ಭಕ್ತರಂತೆ ಬಂದಿದ್ದೇನೆ. ಶುಕ್ರವಾರ ಗಜಪಡೆಯೊಂದಿಗೆ ಆಗಮಿಸಿರುವ ಮಾವುತರು ಹಾಗೂ ಕಾವಾಡಿಗಳ ಕುಟುಂಬದವರಿಗೆ ಉಪಾಹಾರ ವ್ಯವಸ್ಥೆ ಮಾಡಲಿದ್ದೇವೆ ಎಂದು ತಿಳಿಸಿದರು.

ನಾನು ಮೈಸೂರು ಜಿಲ್ಲಾ ಉಸ್ತುವಾರಿ ಸಚಿವೆಯಾಗಿದ್ದಾಗ ವೈಭವದ ದಸರಾ ಜರುಗಿತ್ತು. ಕಾರ್ಯಕ್ರಮಗಳಿಗೆ ಹೊಸತನ ನೀಡಲಾಗಿತ್ತು. ರೈತ ದಸರಾ, ಮಹಿಳಾ ದಸರಾ ಆರಂಭಿಸಿದೆವು. ಗ್ರಾಮೀಣ ಜನ ದಸರಾ ವೀಕ್ಷಿಸಲು ಸಹಕಾರ ನೀಡಿದ್ದೆವು. ಅಂತಹ ಕಾರ್ಯಕ್ರಮಗಳನ್ನು ಎಲ್ಲಾ ಸರ್ಕಾರಗಳೂ ಮುಂದುವರೆಸಬೇಕು. ಜನರ ದಸರಾ ಆಗಬೇಕೇ ಹೊರತು ಸರ್ಕಾರದ ದಸರಾ ಆಗಬಾರದು. ಪಾರಂಪರಿಕ ಹಾಗೂ ಸಾಂಸ್ಕೃತಿಕ ಹಿನ್ನೆಲೆಯನ್ನು ಉಳಿಸಿಕೊಳ್ಳಬೇಕು ಎಂದರು. ಈ ವೇಳೆ ಶಾಸಕ ಟಿ.ಎಸ್.ಶ್ರೀವತ್ಸ ಹಾಗೂ ಬಿಜೆಪಿ ಮುಖಂಡರಿದ್ದರು.

ಮೊಬೈಲ್‌ನಲ್ಲಿ ಮಗ್ನರಾಗಿದ್ದ ರೈಲ್ವೆ ಕ್ರಾಸಿಂಗ್ ಗೇಟ್ ಸಿಬ್ಬಂದಿ; ಆಟೋಗೆ ರೈಲು ಡಿಕ್ಕಿ; ಮೂವರಿಗೆ ಗಾಯ

ಮೈಸೂರು, ಅ.10– ರೈಲು ಬರುವ ಸಂದರ್ಭದಲ್ಲಿ ರಸ್ತೆ ಮಾರ್ಗದ ಗೇಟ್ ಹಾಕದೆ ನಿರ್ಲಕ್ಷ ವಹಿಸಿದ್ದರಿಂದ ರೈಲು ಆಟೋಗೆ ಡಿಕ್ಕಿ ಹೊಡೆದು, ಚಾಲಕ ಹಾಗೂ ಇಬ್ಬರು ಮಕ್ಕಳು ಗಾಯಗೊಂಡಿರುವ ಆಘಾತಕಾರಿ ಘಟನೆ ಇಲವಾಲ ಹೋಬಳಿ ಮಲ್ಲೇಗೌನಕೊಪ್ಪಲು ಗ್ರಾಮದಲ್ಲಿ ಗುರುವಾರ ಸಂಜೆ ನಡೆದಿದೆ.

ಮೈಸೂರು–ಅರಸೀಕೆರೆ ಮಾರ್ಗದ ರೈಲು ಬರುವಾಗ ಮಲ್ಲೇಗೌಡನಕೊಪ್ಪಲು ಗ್ರಾಮದ ಕ್ರಾಸಿಂಗ್ ಗೇಟ್ ಹಾಕಿರಲಿಲ್ಲ. ಈ ವೇಳೆ ರೈಲು ಬರುವಷ್ಟರಲ್ಲಿ ಗೇಟ್ ದಾಟಬಹುದೆಂದು ಆಟೋ ಚಾಲಕ ಮುಂದೆ ಸಾಗಿದ್ದಾರೆ. ಅಷ್ಟರಲ್ಲಿ ರೈಲು ಧಾವಿಸಿ, ಆಟೋಗೆ ಡಿಕ್ಕಿ ಹೊಡೆದಿದೆ. ಘಟನೆಯಲ್ಲಿ ಚಾಲಕ, 5 ವರ್ಷ ಮತ್ತು 9 ವರ್ಷದ ಇಬ್ಬರು ಮಕ್ಕಳು ಗಾಯಗೊಂಡಿದ್ದು, ಅದೃಷ್ಟವಶಾತ್ ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಘಟನೆಯಲ್ಲಿ ಆಟೋ ಜಖಂ ಆಗಿದೆ. ಹೆಚ್ಚು ವಾಹನಗಳು ಕ್ರಾಸಿಂಗ್ ಮಾಡುತ್ತಿದ್ದರೆ ಭಾರೀ ಅವಘಡವೇ ಸಂಭವಿಸುತ್ತಿತ್ತು.



ರೈಲ್ವೆ ಸಿಬ್ಬಂದಿ ಕ್ರಾಸಿಂಗ್ ಗೇಟ್ ಬಂದ್ ಮಾಡದೆ ನಿರ್ಲಕ್ಷ ವಹಿಸಿದ್ದಾರೆ. ರೈಲು ಬರುವಾಗ ದೂರದಿಂದಲೇ ಹಾರನ್ ಮಾಡಿದರೂ ಎಚ್ಚೆತ್ತುಕೊಂಡಿಲ್ಲ. ಸಿಬ್ಬಂದಿ ಮೈಮರೆತು ಮೊಬೈಲ್ ನೋಡುತ್ತಿದ್ದರು. ಜನ ಕೂಗಿಕೊಂಡರೂ ನೋಡಿಲ್ಲ. ಘಟನೆ ಬಳಿಕ ರೈಲು ನಿಂತಿದ್ದರೂ ಆತ ಪತ್ತೆಯೇ ಇರಲಿಲ್ಲ ಎಂದು ಸಾರ್ವಜನಿಕರು ಆರೋಪಿಸಿ, ರೈಲು ತಡೆದು ಪ್ರತಿಭಟಿಸಿದ್ದಾರೆ. ಘಟನೆ ಬಗ್ಗೆ ಹೆಚ್ಚಿನ ಮಾಹಿತಿ ಸದ್ಯ ಲಭ್ಯವಾಗಿಲ್ಲ.

ನಾರಾಯಣ ಎಮರ್ಜೆನ್ಸಿ ಆಂಬುಲೆನ್ಸ್ ರೆಸ್ಪಾನ್ಸ್ ಪ್ರಾರಂಭ

ಮೈಸೂರು, ಅ.10(ಎಂಕೆ)– ಮೈಸೂರಿನ ನಾರಾಯಣ ಆಸ್ಪತ್ರೆಯಲ್ಲಿ ವಿಶ್ವ ಹೃದಯ ದಿನಾಚರಣೆ ಅಂಗವಾಗಿ ದಿನದ 24 ಗಂಟೆಯೂ ಕಾರ್ಯ ನಿರ್ವಹಿಸುವ 'ನಾರಾಯಣ ಎಮರ್ಜೆನ್ಸಿ ಆಂಬುಲೆನ್ಸ್ ರೆಸ್ಪಾನ್ಸ್ (ಎನ್‌ಇಎಆರ್–ನಿಯರ್) ಪ್ರಾರಂಭಿಸಿದೆ.

ಮೈಸೂರು ನಗರದಾದ್ಯಂತ ಈ ಸೇವೆ ಲಭ್ಯವಿರಲಿದ್ದು, ಪ್ರಮುಖ ಆಯಕಟ್ಟಿನ ಸ್ಥಳಗಳಲ್ಲಿ ಆಂಬುಲೆನ್ಸ್‌ಗಳನ್ನು ನಿಲ್ಲಿಸಲಾಗಿರುತ್ತದೆ. ಉಚಿತ ಸಾರಿಗೆ ಜೊತೆಗೆ ತುರ್ತು ಸಂದರ್ಭದಲ್ಲಿ ರೋಗಿಗಳನ್ನು ತಕ್ಷಣವೇ ಆಸ್ಪತ್ರೆ ರವಾನಿಸಿ, ಸೂಕ್ತ ಸಮಯದಲ್ಲಿ ಚಿಕಿತ್ಸೆ ನೀಡಲು ಅನುವು ಮಾಡಿಕೊಡಲಾಗುವುದು. ಆಂಬುಲೆನ್ಸ್ ವಿವರಗಳಿಗೆ ಮೊ.ನಂ.9853998539/9513999072 ನಂಬರ್‌ಗಳಿಗೆ ಸಂಪರ್ಕಿಸಬಹುದಾಗಿದೆ.

ನಿಯರ್ ಸಮೀಪದ ಆಂಬುಲೆನ್ಸ್ ಸೇವೆ ಚಾಲನೆ ನೀಡಿ ಪ್ರತಿಕ್ರಿಯಿಸಿರುವ ನಾರಾಯಣ ಆಸ್ಪತ್ರೆಯ ಕ್ಲಿನಿಕಲ್ ನಿರ್ದೇಶಕ ಡಾ.ಎಂ.ಎನ್.ರವಿ, ನಿಯರ್ ಆಂಬುಲೆನ್ಸ್ ಸೇವೆಯು ರೋಗಿಗಳನ್ನು ತುರ್ತು ಸಂದರ್ಭಗಳಲ್ಲಿ ನಮ್ಮ ಆಸ್ಪತ್ರೆಗೆ ಯಾವುದೇ ವಿಳಂಬವಿಲ್ಲದೆ ಕರೆತರುವುದ ಮಾತ್ರವಲ್ಲದೆ ಮಾರ್ಗ ಮಧ್ಯದಲ್ಲೇ



ವೈದ್ಯರ ಸಂಪರ್ಕ ಸಾಧಿಸಿ ಅಗತ್ಯವಿರುವ ಪ್ರಾಥಮಿಕ ಚಿಕಿತ್ಸೆ ಒದಗಿಸುವ ಸೌಲಭ್ಯವನ್ನು ಒಳಗೊಂಡಿದೆ. ಈ ಮೂಲಕ ರೋಗಿಗಳಿಗೆ ಪ್ರಾಥಮಿಕ ಹಂತದಿಂದಲೇ ಉತ್ತಮ ಚಿಕಿತ್ಸೆ ನೀಡಲಾಗುವುದು ಎಂದು ತಿಳಿಸಿದರು.

ಆಸ್ಪತ್ರೆಯ ಹೃದ್ರೋಗ ವಿಭಾಗದ ನಿರ್ದೇಶಕ ಡಾ.ವಿ.ಕೇಶವಮೂರ್ತಿ, ಆಸ್ಪತ್ರೆ ಸೌಲಭ್ಯ ನಿರ್ದೇಶಕ ಪವನ್ ಕುಮಾರ್ ನಿಯರ್ ಆಂಬುಲೆನ್ಸ್ ಸೇವೆಯೂ ಮೈಸೂರಿನಾದ್ಯಂತ ಕಾರ್ಯ ನಿರ್ವಹಿಸಲಿದೆ. ನಗರದ ಪ್ರಮುಖ ಆಯಕಟ್ಟಿನ ಪ್ರದೇಶಗಳಲ್ಲಿ ಆಂಬುಲೆನ್ಸ್‌ಗಳನ್ನು ನಿಲ್ಲಿಸಲಾಗುವುದು. ನಗರದ ಜನತೆಯ ಜೀವ ಉಳಿಸುವ ನಿಟ್ಟಿನಲ್ಲಿ ಈ ಉಚಿತ ಸೇವೆಯನ್ನು ಆರಂಭಿಸಲಾಗಿದೆ ಎಂದು ತಿಳಿಸಿದರು.

ರತನ್ ಟಾಟಾ ಅಗಲುವಿಕೆಯಿಂದ ನಿರ್ವಾತ ಸ್ಥಿತಿ



ಮೈಸೂರು,ಅ.10–ಪ್ರಖ್ಯಾತ ಉದ್ಯಮಿ, ಟಾಟಾ ಸಮೂಹಸಂಸ್ಥೆಗಳ ಮಾಜಿ ಅಧ್ಯಕ್ಷ ಆಗಿದ್ದ ರತನ್ ಟಾಟಾರವರ ಅಗಲುವಿಕೆ ರಾಷ್ಟ್ರಕ್ಕೆ ತುಂಬಲಾರದ ನಷ್ಟವಾಗಿದೆ ಎಂದು ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಹೇಳಿದರು.

ರತನ್ ಟಾಟಾರವರ ಉದ್ದಿಮೆಗಳೆಂದರೆ ಶ್ರೇಷ್ಠತೆಯ ಹೆಗ್ಗುರುತು. ಅವರು ಮಧ್ಯಮ ವರ್ಗದ ಹೂಡಿಕೆದಾರರ ಆಶಾಕಿರಣವಾಗಿದ್ದರು. ಉದ್ದಿಮೆಯಷ್ಟೇ ಅವರ ಹೆಸರು ಔದಾರ್ಯದಲ್ಲೂ ಮುಂಚೂಣಿಯಲ್ಲಿತ್ತು. ಉದ್ಯಮ, ರಾಜಕೀಯ, ಸಾರ್ವಜನಿಕ ಜೀವನ–ಹೀಗೆ ಎಲ್ಲ ರಂಗಗಳಲ್ಲಿಯೂ ಒಂದು ಸುಂದರ ಮೇಲ್ಪಂಕ್ತಿಯಾಗಿ, ಮಾದರಿಯಾಗಿ ಅವರು ಬದುಕಿದ್ದವರು. ಶ್ರದ್ಧೆ, ಪರಿಶ್ರಮ, ಬದ್ಧತೆ, ವಿಶ್ವಾಸಾರ್ಹತೆಗಳ ಸಂಗಮವುದಂತಿದ್ದವರು. ಅಜಾತಶತ್ರುಗಳಾಗಿದ್ದರು. ರಾಷ್ಟ್ರದ ಅತ್ಯಂತ ದೊಡ್ಡ ನಾಗರಿಕ ಗೌರವ ಪದ್ಮವಿಭೂಷಣ ಮೊದಲಾದ ಪ್ರತಿಷ್ಠಿತ ರಾಷ್ಟ್ರೀಯ–ಅಂತಾರಾಷ್ಟ್ರೀಯ ಪುರಸ್ಕಾರಗಳು ಅವರಿಗೆ ಸಂದಿದ್ದವು. ಇಂಥ ಸಜ್ಜನರು, ಸಂಭಾವಿತರು, ಭಾರತದ ಹೆಮ್ಮೆಯ ಪುತ್ರರು ಆದ ರತನ್ ಟಾಟಾರವರ ಅಗಲುವಿಕೆಯಿಂದ ಸಾರ್ವಜನಿಕ ವಲಯದಲ್ಲಿ ಒಂದು ನಿರ್ವಾತ ಸ್ಥಿತಿ ನಿರ್ಮಾಣವಾಗಿದೆ ಎನ್ನಬಹುದು.

ದಿವಂಗತರ ಆತ್ಮಕ್ಕೆ ಶಾಂತಿ, ಅವರ ಬಂಧುವರ್ಗ, ಅಭಿಮಾನಿಗಳಿಗೆ ಈ ದುಃಖವನ್ನು ಸಹಿಸುವ ಶಕ್ತಿಯನ್ನು ಭಗವಂತನು ನೀಡಲೆಂದು ಪ್ರಾರ್ಥಿಸುತ್ತೇವೆ.

ಎಂಎಲ್ಸಿ ವಿವೇಕಾನಂದ ಕಚೇರಿ ಉದ್ಘಾಟನೆ



ಮೈಸೂರಿನ ಜಲದರ್ಶಿನಿ ಅತಿಥಿಗೃಹದಲ್ಲಿ ದಕ್ಷಿಣ ಶಿಕ್ಷಕರ ಕ್ಷೇತ್ರದ ವಿಧಾನಪರಿಷತ್ ಸದಸ್ಯ ಕೆ.ವಿವೇಕಾನಂದ ಅವರ ನೂತನ ಕಾರ್ಯಾಲಯದ ಉದ್ಘಾಟನೆ ವೇಳೆ ಶಾಸಕರಾದ ಹೆಚ್.ಡಿ.ರೇವಣ್ಣ ಹಾಗೂ ಜಿ.ಟಿ.ದೇವೇಗೌಡ ಅವರು ವಿವೇಕಾನಂದ ಅವರಿಗೆ ಶುಭ ಕೋರಿದರು. ಮಾಜಿ ಮೇಯರ್ ಸಂದೇಶ್ ಸ್ವಾಮಿ ಚಿತ್ರದಲ್ಲಿದ್ದಾರೆ.

ಸುಗಮ ಸಂಗೀತ ಕಾರ್ಯಕ್ರಮ



ಮೈಸೂರು ದಸರಾ ಮಹೋತ್ಸವದ ಸಾಂಸ್ಕೃತಿಕ ಕಾರ್ಯಕ್ರಮವನ್ನು ಕುವೆಂಪುನಗರದ ಗಾನಭಾರತಿಯಲ್ಲಿ ಖ್ಯಾತ ಗಾಯಕರಾದ ಮೈಸೂರು ಮಹಾಲಿಂಗು, ಪ್ರಿಯಾ ಹಾಗೂ ಕುಮಾರಿ ಚಿನ್ಮಯಿ ಮತ್ತು ಪಕ್ಕವಾದ್ಯದಲ್ಲಿ ರಿದಮ್ ಪ್ಯಾಡ್ ದತ್ತ, ತಬಲ ಕಿರಣ್ ಹಾಗೂ ಕೀಬೋರ್ಡ್ ರಾಜೇಶ್ ಸುಗಮ ಸಂಗೀತ ಕಾರ್ಯಕ್ರಮ ನಡೆಸಿಕೊಟ್ಟರು.

ವಿದ್ಯಾರ್ಥಿನಿಯರಿಗೆ ಲೈಂಗಿಕ ದೌರ್ಜನ್ಯ; ವ್ಯಕ್ತಿ ಬಂಧನ

ಇಟಾನಗರ, ಅ.10– ಹಲವು ಶಾಲಾ ಮತ್ತು ಕಾಲೇಜು ವಿದ್ಯಾರ್ಥಿನಿಯರಿಗೆ ಲೈಂಗಿಕ ಕಿರುಕುಳ ನೀಡಿದ 37 ವರ್ಷದ ವ್ಯಕ್ತಿಯನ್ನು ಅರುಣಾಚಲ ಪ್ರದೇಶದ ಇಟಾ ನಗರದಲ್ಲಿ ಗುರುವಾರ ಬಂಧಿಸಲಾಗಿದೆ. ಈ ಸಂಬಂಧ ಇಟಾನಗರ ಮಹಿಳಾ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ. ಎಂದು ಎಸ್ಪಿ ರೋಹಿತ್ ರಾಜ್‌ಬೀರ್ ಸಿಂಗ್ ತಿಳಿಸಿದ್ದಾರೆ.

ಖ್ಯಾತ ಉದ್ಯಮಿ ರತನ್ ಟಾಟಾರಿಗೆ ಭಾವಪೂರ್ಣ ಶ್ರದ್ಧಾಂಜಲಿ



ದೇಶದ ಪ್ರಸಿದ್ಧ ಉದ್ಯಮಿ, ದಾನಿ ರತನ್ ಟಾಟಾ ಅವರ ನಿಧನಕ್ಕೆ ಮೈಸೂರು ಕೆ.ಜಿ.ಕೊಪ್ಪಲು–ಜಯನಗರ ಮುಖಂಡರು ಶ್ರದ್ಧಾಂಜಲಿ ಸಲ್ಲಿಸಿದರು. ಈ ವೇಳೆ ಗ್ರಾಮದ ಮುಖಂಡರಾದ ವಿಕ್ರಾಂತ್ ಪಿ.ದೇವೇಗೌಡ, ಮಾಜಿ ಕಾರ್ಪೊರೇಟರ್ ಶಿವಕುಮಾರ್, ಯುವ ಮೋರ್ಚಾ ಅಧ್ಯಕ್ಷ ರಾಕೇಶ್‌ಗೌಡ, ಗಿರೀಶ್ ಗೌಡ, ಬಿಸಿಲು ಮಾರಮ್ಮನ ಜಿ.ನಿಂಗಪ್ಪ, ಎಲ್.ಚಂದ್ರು, ಚಿನ್ನಪ್ಪ ಕಾಂಪ್ಲೆಕ್ಸ್ ರಾಮಚಂದ್ರ, ಬೋರಪ್ಪ, ಸಂಬಣ್ಣ, ನಾಗಣ್ಣ, ಶ್ರೀನಿವಾಸ್, ರವಿ, ರಾಜಕುಮಾರ್, ದತ್ತು, ಡಿ.ದೇವೇಗೌಡ, ಮಾದಪ್ಪ, ರಂಗಪ್ಪ, ಮೋಹನ್, ಅಡ್ಡ ಸಿದ್ದಯ್ಯನ ಬೋರಪ್ಪ, ಕೃಷ್ಣಪ್ಪ, ಆನಂದ್ ಇನ್ನಿತರರು ಉಪಸ್ಥಿತರಿದ್ದರು.

ಸಕಲ ಸರ್ಕಾರಿ ಗೌರವದೊಂದಿಗೆ ರತನ್ ಟಾಟಾ ಅಂತ್ಯಕ್ರಿಯೆ

ಪ್ರಧಾನಿ ಸೇರಿದಂತೆ ಗಣ್ಯಾತಿ ಗಣ್ಯರ ಸಂತಾಪ



ಮುಂಬೈ, ಅ.10– ಧೀಮಂತ ಉದ್ಯಮಿ, ಪರೋಪಕಾರಿ ರತನ್ ಟಾಟಾ ಅವರ ಅಂತ್ಯಕ್ರಿಯೆಯನ್ನು ಮುಂಬೈನ ವರ್ಲಿ ಚಿತಾಗಾರದಲ್ಲಿ ಸಕಲ ಸರ್ಕಾರಿ ಗೌರವಗಳೊಂದಿಗೆ ಗುರುವಾರ ನೆರವೇರಿಸಲಾಯಿತು.

86 ವರ್ಷದ ರತನ್ ಟಾಟಾ ಅವರು ಬುಧವಾರ ರಾತ್ರಿ ಮುಂಬೈನ ಬ್ರೀಚ್ ಕ್ಯಾಂಡಿ ಆಸ್ಪತ್ರೆಯಲ್ಲಿ ನಿಧರಾಗಿದ್ದರು. ಅಂತ್ಯಕ್ರಿಯೆ ವೇಳೆ ಮುಂಬೈ ಪೊಲೀಸರು ಟಾಟಾ ಅವರಿಗೆ ಗನ್ ಸೆಲ್ಯೂಟ್ ಮೂಲಕ ಗೌರವ ಸಲ್ಲಿಸಿದರು.

ಪಾರ್ಸಿ ಸಂಪ್ರದಾಯದಂತೆ ಅಂತಿಮ ವಿಧಿವಿಧಾನಗಳನ್ನು ನೆರವೇರಿಸಲಾಯಿತು ಎಂದು ಸ್ಮಶಾನದಲ್ಲಿದ್ದ ಅರ್ಚಕರೊಬ್ಬರು ತಿಳಿಸಿದ್ದಾರೆ. ದಕ್ಷಿಣ ಮುಂಬೈನ ಕೊಲಾಬಾದಲ್ಲಿರುವ ದಿವಂಗತ ಕೈಗಾರಿಕೋದ್ಯಮಿಯ ಬಂಗಲೆಯಲ್ಲಿ ಇನ್ನೂ ಮೂರು ದಿನಗಳ ಕಾಲ ಧಾರ್ಮಿಕ ವಿಧಿವಿಧಾನಗಳನ್ನು ನಡೆಸಲಾಗುವುದು ಎಂದು ಅವರು ಹೇಳಿದ್ದಾರೆ. ಮಲಸಹೋದರ ನೋಯೆಲ್ ಟಾಟಾ ಸೇರಿದಂತೆ ಉದ್ಯಮ ದಿಗ್ಗಜರ ಕುಟುಂಬದ ಸದಸ್ಯರು ಮತ್ತು ಟಾಟಾ ಗ್ರೂಪ್‌ನ ಅಧ್ಯಕ್ಷ ಎನ್.ಚಂದ್ರಶೇಖರನ್ ಅವರಂತಹ ಉನ್ನತ ಅಧಿಕಾರಿಗಳು ನಡೆದ ಅಂತ್ಯಕ್ರಿಯೆಯಲ್ಲಿ ಭಾಗವಹಿಸಿದ್ದರು.

ಕೇಂದ್ರ ಗೃಹ ಸಚಿವ ಅಮಿತ್ ಶಾ, ಅವರ ಸಂಪುಟ ಸಹೋದ್ಯೋಗಿ ಪಿಯೂಷ್ ಗೋಯಲ್, ಮಹಾರಾಷ್ಟ್ರ ಮುಖ್ಯಮಂತ್ರಿ ಏಕನಾಥ್ ಶಿಂಧೆ, ಉಪ ಮುಖ್ಯಮಂತ್ರಿ ದೇವೇಂದ್ರ ಫಡ್ನವಿಸ್, ಕಾಂಗ್ರೆಸ್ ನಾಯಕ ಮತ್ತು ಮಾಜಿ ಸಿಎಂ ಸುಶೀಲ್ ಕುಮಾರ್ ಶಿಂಧೆ ಸೇರಿದಂತೆ ಹಲವು ಗಣ್ಯರು ರತನ್ ಟಾಟಾಗೆ ಅಂತಿಮ ನಮನ ಸಲ್ಲಿಸಿದರು.

ಇದಕ್ಕೂ ಮುನ್ನ ರತನ್ ಟಾಟಾ ಅವರ ಪಾರ್ಥಿವ ಶರೀರವನ್ನು ಗುರುವಾರ ಬೆಳಗ್ಗೆ ಅವರ ಮನೆಯಿಂದ ಬಿಳಿ ಹೂವುಗಳಿಂದ ಅಲಂಕರಿಸಲ್ಪಟ್ಟ ಆಂಬುಲೆನ್ಸ್‌ನಲ್ಲಿ ದಕ್ಷಿಣ ಮುಂಬೈನ ಎನ್‌ಸಿಪಿಎಗೆ ಕೊಂಡೊಯ್ಯಲಾಯಿತು, ಅಲ್ಲಿ ಪಾರ್ಥಿವ ಶರೀರವನ್ನು ಸಾರ್ವಜನಿಕ ದರ್ಶನಕ್ಕೆ ಇಡಲಾಗಿತ್ತು. ನ್ಯಾಷನಲ್ ಸೆಂಟರ್ ಫಾರ್ ಪರ್ಫಾರ್ಮಿಂಗ್ ಆರ್ಟ್ಸ್‌ದಿಂದ ಒಂದೆರಡು ಕಿಲೋಮೀಟರ್ ದೂರದಲ್ಲಿರುವ ಟಾಟಾ ಅವರ ಮನೆಯಿಂದ ವಾಹನವು ಬರುವ ಮೊದಲು, ಮುಂಬೈ ಪೊಲೀಸ್ ಬ್ಯಾಂಡ್ ಅವರಿಗೆ ಗೌರವಾರ್ಥವಾಗಿ ಸಂಗೀತ ನುಡಿಸಿತು. ರತನ್ ಟಾಟಾ ಅವರಿಗೆ ಅಂತಿಮ ನಮನ ಸಲ್ಲಿಸಲು ದಕ್ಷಿಣ ಮುಂಬೈನ ಎನ್‌ಸಿಪಿಎಯಲ್ಲಿ ಟಾಟಾ ಗ್ರೂಪ್‌ನ ಉದ್ಯೋಗಿಗಳಿಗೆ ಪ್ರತ್ಯೇಕ ವ್ಯವಸ್ಥೆ ಮಾಡಲಾಗಿತ್ತು.

ಪ್ರಧಾನಿ ಸೇರಿ ಗಣ್ಯರ ಸಂತಾಪ: ರತನ್ ಟಾಟಾ ಅವರ ನಿಧನಕ್ಕೆ ಪ್ರಧಾನಿ ಮೋದಿ ಸೇರಿದಂತೆ ಅನೇಕ ಗಣ್ಯರು ಸಂತಾಪ ಸೂಚಿಸಿದ್ದಾರೆ. ಎಕ್ಸ್‌ನಲ್ಲಿ ಹೇಳಿಕೆ ಬಿಡುಗಡೆ ಮಾಡಿರುವ ಪ್ರಧಾನಿ ಮೋದಿ, ರತನ್ ಟಾಟಾ ಒಬ್ಬ ದಾರ್ಶನಿಕ ವ್ಯಾಪಾರ ನಾಯಕ. ಸಹಾನುಭೂತಿಯ ಆತ್ಮ ಮತ್ತು ಅಸಾಧಾರಣ ಮನುಷ್ಯ. ಅವರು ಭಾರತದ ಅತ್ಯಂತ ಹಳೆಯ ಮತ್ತು ಪ್ರತಿಷ್ಠಿತ ವ್ಯಾಪಾರ ಸಂಸ್ಥೆಗಳಲ್ಲಿ ಒಂದಕ್ಕೆ ಸ್ಥಿರ ನಾಯಕತ್ವವನ್ನು ಒದಗಿಸಿದರು. ಅದೇ ಸಮಯದಲ್ಲಿ, ಅವರ ಕೊಡುಗೆಯು ಬೋರ್ಡ್ ರೂಮ್ ಅನ್ನು ಮೀರಿದೆ. ಅವರ ನಮ್ರತೆ, ದಯೆ ಮತ್ತು ನಮ್ಮ ಸಮಾಜವನ್ನು ಉತ್ತಮಗೊಳಿಸುವ ಅಚಲವಾದ ಬದ್ಧತೆಗೆ ಧನ್ಯವಾದಗಳು ಎಂದು ಪ್ರಧಾನಿ ಮೋದಿ ಟ್ವೀಟ್ ಮಾಡಿದ್ದಾರೆ.

ಸಿಎಂ ಸಿದ್ದರಾಮಯ್ಯ: ದೂರದೃಷ್ಟಿಯ ವ್ಯಕ್ತಿ ಎಂದು ಕರ್ನಾಟಕದ ಮುಖ್ಯಮಂತ್ರಿ ಸಿದ್ದರಾಮಯ್ಯ ಸಂತಾಪ ಸೂಚಿಸಿದ್ದಾರೆ. ಈ ಕುರಿತು ಟ್ವೀಟ್ ಮಾಡಿರುವ ಸಿಎಂ ಸಿದ್ದರಾಮಯ್ಯ, ದೇಶದ ಹೆಮ್ಮೆಯ ಉದ್ಯಮಿ, ಟಾಟಾ ಸಮೂಹದ ಮುಖ್ಯಸ್ಥರಾದ ರತನ್ ಟಾಟಾ ಅವರ ನಿಧನದ ಸುದ್ದಿ ದುಃಖವುಂಟು ಮಾಡಿದೆ. ಟಾಟಾ ಸಂಸ್ಥೆಯ ಮೂಲಕ ಲಕ್ಷಾಂತರ ಜನರಿಗೆ ಉದ್ಯೋಗ ನೀಡಿದ್ದು ಮಾತ್ರವಲ್ಲ, ಭಾರತದ ಉದ್ಯಮ ವಲಯವನ್ನು ಅಂತಾರಾಷ್ಟ್ರೀಯ ಮಟ್ಟದಲ್ಲಿ ಹೊಸ ಎತ್ತರಕ್ಕೆ ಕೊಂಡೊಯ್ದ ದೂರದೃಷ್ಟಿಯ ವ್ಯಕ್ತಿ. ರತನ್ ಟಾಟಾ ಅವರು ತಮ್ಮ ಬದುಕು ಮತ್ತು ಸಾಧನೆಗಳ ಮೂಲಕ ಅಜರಾಮರ. ಮೃತರ ಆತ್ಮಕ್ಕೆ ಚಿರಶಾಂತಿ ಸಿಗಲಿ ಎಂದು ಪ್ರಾರ್ಥಿಸುತ್ತೇನೆ ಎಂದು ಟ್ವೀಟ್ ಮಾಡಿದ್ದಾರೆ.

ರಾಷ್ಟ್ರಪತಿ ದ್ರೌಪದಿ ಮುರ್ಮು: ರತನ್ ಟಾಟಾ ಅವರ ನಿಧನ ಅತೀವ ದುಃಖದ ತಂದಿದ್ದು, ಭಾರತವು ಸಾಂಸ್ಥಿಕ ಬೆಳವಣಿಗೆಯನ್ನು ರಾಷ್ಟ್ರ ನಿರ್ಮಾಣದೊಂದಿಗೆ ಮತ್ತು ಶ್ರೇಷ್ಠತೆಯನ್ನು ನೀತಿಯೊಂದಿಗೆ ಸಂಯೋಜಿಸಿದ ಐಕಾನ್ ವ್ಯಕ್ತಿಯನ್ನು ಅನ್ನು ಕಳೆದುಕೊಂಡಿದೆ. ಪದ್ಮವಿಭೂಷಣ ಮತ್ತು ಪದ್ಮಭೂಷಣ ಪುರಸ್ಕೃತರಾದ ಅವರು ಶ್ರೇಷ್ಠ ಟಾಟಾ ಪರಂಪರೆಯನ್ನು ಮುಂದಕ್ಕೆ ಕೊಂಡೊಯ್ದರು ಮತ್ತು ಹೆಚ್ಚು ಪ್ರಭಾವಶಾಲಿ ಜಾಗತಿಕ ಉಪಸ್ಥಿತಿಯನ್ನು ನೀಡಿದರು ಎಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಟ್ವೀಟ್ ಮಾಡಿದ್ದಾರೆ.

ಉತ್ಸಾಹ ಮತ್ತು ಬದ್ಧತೆಯ ವ್ಯಕ್ತಿ: ರತನ್ ಟಾಟಾ ನಿಧನಕ್ಕೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಸಂತಾಪ ಸೂಚಿಸಿದ್ದು, 'ಹಿರಿಯ ಕೈಗಾರಿಕೋದ್ಯಮಿ ಮತ್ತು ನಿಜವಾದ ರಾಷ್ಟ್ರೀಯವಾದಿ ರತನ್ ಟಾಟಾ ಅವರ ನಿಧನದಿಂದ ತೀವ್ರ ದುಃಖವಾಗಿದೆ. ಅವರು ನಿಸ್ವಾರ್ಥವಾಗಿ ನಮ್ಮ ದೇಶದ ಅಭಿವೃದ್ಧಿಗೆ ತಮ್ಮ ಜೀವನವನ್ನು ಮುಡಿಪಾಗಿಟ್ಟಿದ್ದರು. ನಾನು ಅವರನ್ನು ಭೇಟಿಯಾದಾಗಲೆಲ್ಲಾ, ಭಾರತ ಮತ್ತು ಅದರ ಜನರ ಸುಧಾರಣೆಗೆ ಅವರು ತೋರುತ್ತಿದ್ದ ಉತ್ಸಾಹ ಮತ್ತು ಬದ್ಧತೆ ನನ್ನನ್ನು ಬೆರಗುಗೊಳಿಸಿತು. ನಮ್ಮ ದೇಶ ಮತ್ತು ಅದರ ಜನರ ಕಲ್ಯಾಣಕ್ಕಾಗಿ ಅವರ ಬದ್ಧತೆ ಲಕ್ಷಾಂತರ ಕನಸುಗಳನ್ನು ಅರಳಿಸಲು ಕಾರಣವಾಯಿತು. ರತನ್ ಟಾಟಾ ಅವರನ್ನು ಅವರ ಪ್ರೀತಿಯ ರಾಷ್ಟ್ರದಿಂದ ದೂರ ಮಾಡಲು ಸಮಯದಿಂದ ಸಾಧ್ಯವಿಲ್ಲ. ಅವರು ನಮ್ಮ ಹೃದಯದಲ್ಲಿ ವಾಸಿಸುತ್ತಾರೆ. ಟಾಟಾ ಗ್ರೂಪ್ ಮತ್ತು ಅವರ ಅಸಂಖ್ಯಾತ ಅಭಿಮಾನಿಗಳಿಗೆ ನನ್ನ ಸಂತಾಪಗಳು ಎಂದು ಅಮಿತ್ ಶಾ ಟ್ವೀಟ್ ಮಾಡಿದ್ದಾರೆ.

ರಾಹುಲ್ ಗಾಂಧಿ: ರತನ್ ಟಾಟಾ ದೂರದೃಷ್ಟಿ ಹೊಂದಿದ ವ್ಯಕ್ತಿ. ಅವರು ವ್ಯಾಪಾರ ಮತ್ತು ಲೋಕೋಪಕಾರ ಎರಡರಲ್ಲೂ ಶಾಶ್ವತವಾದ ಗುರುತು ಬಿಟ್ಟಿದ್ದಾರೆ. ಅವರ ಕುಟುಂಬ ಮತ್ತು ಟಾಟಾ ಸಮುದಾಯಕ್ಕೆ ನನ್ನ ಸಂತಾಪಗಳು ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಟ್ವೀಟ್ ಮಾಡಿದ್ದಾರೆ.

ಮಲ್ಲಿಕಾರ್ಜುನ ಖರ್ಗೆ: ರತನ್ ಟಾಟಾ ಅವರ ನಿಧನದಿಂದ ನಾವು ಭಾರತದ ಅಮೂಲ್ಯ ಪುತ್ರನನ್ನು ಕಳೆದುಕೊಂಡಿದ್ದೇವೆ. ಭಾರತದ ಅಂತರ್ಗತ ಬೆಳವಣಿಗೆ ಮತ್ತು ಅಭಿವೃದ್ಧಿಗೆ ಅವರ ಬದ್ಧತೆಯು ಅತ್ಯುನ್ನತವಾಗಿ ಉಳಿದಿರುವ ಪರೋಪಕಾರಿ ಸರ್ವೋತ್ಕೃಷ್ಟತೆ, ಟಾಟಾ ಅವರು ನಿಸ್ಸಂದಿಗ್ಧವಾದ ಸಮಗ್ರತೆ ಮತ್ತು ನೈತಿಕ ನಾಯಕತ್ವಕ್ಕೆ ಸಮಾನಾರ್ಥಕರಾಗಿದ್ದರು. ಅವರು ಲಕ್ಷಾಂತರ ಜನರಿಗೆ ಸ್ಫೂರ್ತಿ ಮತ್ತು ಐಕಾನ್ ಆಗಿದ್ದರು ಮತ್ತು ರಾಷ್ಟ್ರ ನಿರ್ಮಾಣಕ್ಕೆ ಸಮೃದ್ಧವಾಗಿ ಕೊಡುಗೆ ನೀಡಿದ್ದರು ಎಂದು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಟ್ವೀಟ್ ಮಾಡಿದ್ದಾರೆ.

ಎಚ್.ಡಿ.ಕುಮಾರಸ್ವಾಮಿ: ರತನ್ ಟಾಟಾ ಅವರ ನಿಧನದ ಸುದ್ದಿ ಕೇಳಿ ನನಗೆ ಅತೀವ ದುಃಖವಾಗಿದೆ. ಲೋಕೋಪಕಾರಿ ಮತ್ತು ಕೈಗಾರಿಕೋದ್ಯಮಿಯಾಗಿ ಅವರ ಪರಂಪರೆಯು ಅಸಂಖ್ಯಾತ ಜೀವನ ಮತ್ತು ಸಮುದಾಯಗಳನ್ನು ಆಳವಾಗಿ ಪ್ರಭಾವಿಸಿದೆ. ಅವರ ದೂರದೃಷ್ಟಿ, ಸಹಾನುಭೂತಿ ಮತ್ತು ಸಾಮಾಜಿಕ ಕಾರಣಗಳಿಗಾಗಿ ಅಚಲವಾದ ಸಮರ್ಪಣೆ ಯಾವಾಗಲೂ ನೆನಪಿನಲ್ಲಿ ಉಳಿಯುತ್ತದೆ ಎಂದು ಎಚ್.ಡಿ.ಕುಮಾರಸ್ವಾಮಿ ಟ್ವೀಟ್ ಮಾಡಿದ್ದಾರೆ.

ಸೈಕಲ್ ಪ್ಯೂರ್ ಅಗರಬತ್ತಿ ಸಂಸ್ಥೆಯಿಂದ ಮಾವುತ, ಕಾವಾಡಿಗಳಿಗೆ ಕುಕ್ಕರ್ ವಿತರಣೆ



ದಸರಾ ಗಜಪಡೆ ಮಾವುತ, ಕಾವಾಡಿಗಳಿಗೆ ಸೈಕಲ್ ಪ್ಯೂರ್ ಅಗರ್‌ಬತ್ತಿ ಸಂಸ್ಥೆಯ ವತಿಯಿಂದ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಅರ್ಜುನ್ ರಂಗ ಪ್ರೆಷರ್ ಕುಕ್ಕರ್ ವಿತರಿಸಿದರು.

ಮೈಸೂರು, ಅ.10(ಎಂಟಿವೈ)– ದಸರಾ ಗಜಪಡೆ ಮಾವುತ, ಕಾವಾಡಿ ಹಾಗೂ ಸಹಾಯಕರಿಗೆ ಸೈಕಲ್ ಪ್ಯೂರ್ ಅಗರಬತ್ತಿ ಸಂಸ್ಥೆ ವತಿಯಿಂದ ಪ್ರೆಷರ್ ಕುಕ್ಕರ್ ವಿತರಿಸಲಾಯಿತು.

ಅರಮನೆ ಆವರಣದಲ್ಲಿರುವ ದಸರಾ ಗಜಪಡೆಯ ಬೀಡಾರದ ಬಳಿ ಗುರುವಾರ ಮಧ್ಯಾಹ್ನ ಗಜಪಡೆಯ ಮಾವುತ, ಕಾವಾಡಿ, ಸಹಾಯಕರು ಸೇರಿದಂತೆ ಒಟ್ಟು 65 ಮಂದಿಗೆ ಪ್ರೆಷರ್ ಕುಕ್ಕರ್ ಗಳನ್ನು ಉಡುಗೊರೆಯಾಗಿ ನೀಡಲಾಯಿತು.

ಸೈಕಲ್ ಪ್ಯೂರ್ ಅಗರಬತ್ತಿ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಅರ್ಜುನ್ ರಂಗ ಮಾವುತರಿಗೆ ಕುಕ್ಕರ್ ವಿತರಿಸಿದ ಬಳಿಕ ಮಾತನಾಡಿ, ದಸರಾ ಮಹೋತ್ಸವದ ಯಶಸ್ಸಿನ ರೂವಾರಿಗಳಾದ ಗಜಪಡೆಯ ಮಾವುತ, ಕಾವಾಡಿಗಳನ್ನು ಗೌರವಿಸುವ ನಿಟ್ಟಿನಲ್ಲಿ ಸಂಸ್ಥೆ ವತಿಯಿಂದ ಪ್ರೆಷರ್ ಕುಕ್ಕರ್ ವಿತರಿಸಲಾಗಿದೆ. ದಸರಾ ಮಹೋತ್ಸವ ನಮ್ಮ ಸಂಸ್ಕೃತಿಯ ಪ್ರತೀಕವಾಗಿದ್ದು, ಅದರ ಯಶಸ್ಸಿನ ರೂವಾರಿಗಳಾದ ಮಾವುತ, ಕಾವಾಡಿಗಳು ತೆರೆಮರೆಯ ಹೀರೋಗಳಾಗಿದ್ದಾರೆ. ಈ ಹಿನ್ನೆಲೆಯಲ್ಲಿ ನಮ್ಮ ಸಂಸ್ಥೆ ವತಿಯಿಂದ ಕಿರು ಉಡುಗೊರೆ ನೀಡಲಾಗಿದೆ ಎಂದರು.

ಆರ್‌ಎಫ್‌ಓ ಸಂತೋಷ್ ಹೂಗಾರ್ ಮಾತನಾಡಿ, ದಸರಾ ಮಹೋತ್ಸವದಲ್ಲಿ ಗಜಪಡೆ ಪ್ರಮುಖ ಪಾತ್ರವಹಿಸಿದ್ದು, ಅವುಗಳ ಮಾವುತ, ಕಾವಾಡಿಗಳನ್ನು ಗೌರವಿಸುವ ನಿಟ್ಟಿನಲ್ಲಿ ಸೈಕಲ್ ಪ್ಯೂರ್ ಅಗರ್‌ಬತ್ತಿ ಸಂಸ್ಥೆ ಪ್ರೆಷರ್ ಕುಕ್ಕರ್ ನೀಡಿರುವುದು ಶ್ಲಾಘನೀಯ ಎಂದು ಅಭಿಪ್ರಾಯಪಟ್ಟರು. ಈ ಸಂದರ್ಭದಲ್ಲಿ ಮೋತಿಲಾಲ್ ಓಸ್ವಾಲ್ ಅಸೆಟ್ ಮ್ಯಾನೇಜ್‌ಮೆಂಟ್ ಕಂಪನಿ ಲಿಮಿಟೆಡ್ ವ್ಯವಸ್ಥಾಪಕ ನಿರ್ದೇಶಕ ನವೀನ್ ಅಗರ್ವಾಲ್ ಇನ್ನಿತರರು ಉಪಸ್ಥಿತರಿದ್ದರು.

ಲಾರಿ, ಕಾರು ನಡುವೆ ಭೀಕರ ಅಪಘಾತ

ಇಬ್ಬರು ಯುವಕರ ಸಾವು, ಬಾಲಕನ ಕಾಲು ಮುರಿತ



ಚಾಮರಾಜನಗರ, ಅ.10–ಲಾರಿ ಹಾಗೂ ಕಾರು ನಡುವೆ ಸಂಭವಿಸಿದ ಭೀಕರ ಅಪಘಾತದಲ್ಲಿ ಇಬ್ಬರು ಯುವಕರು ಸ್ಥಳದಲ್ಲೇ ಮೃತಪಟ್ಟಿದ್ದು, ಬಾಲಕನ ಕಾಲು ಮುರಿದಿರುವ ಘಟನೆ ಸೋಮವಾರ ಪೇಟೆ–ದೊಡ್ಡರಾಯ ಪೇಟೆ ಕ್ರಾಸ್‌ನ ಬೈಪಾಸ್‌ನಲ್ಲಿ ಗುರುವಾರ ರಾತ್ರಿ ನಡೆದಿದೆ. ನಗರದ ಜಯಪ್ರಕಾಶ್ ಅವರ ಮಗ ರೋಹನ್ ರಾಜ್ (22) ಹಾಗೂ ಮಹೇಶ್ ಅವರ ಮಗ ಪ್ರಶಾಂತ್ (22) ಮೃತಪಟ್ಟಿದ್ದು, ರಮೇಶ್ ಅವರ ಪುತ್ರ ಗೌತಮ್ ರಾಜ್ (13) ಬಾಲಕನ ಕಾಲು ಮುರಿದಿದೆ. ಆಯುಧ ಪೂಜೆ ಹಬ್ಬದ ಹಿನ್ನೆಲೆಯಲ್ಲಿ ಮೂವರು ಕಾರು ವಾಶ್ ಮಾಡಿಸಲು ಹೋಗುತ್ತಿದ್ದರು. ಈ ವೇಳೆ ದೊಡ್ಡರಾಯಪೇಟೆ ಬೈಪಾಸ್‌ನಲ್ಲಿ ಎದುರಿಗೆ ಬಂದ ಲಾರಿ ಹಾಗೂ ಕಾರು ನಡುವೆ ಮುಖಾಮುಖಿ ಡಿಕ್ಕಿ ಸಂಭವಿಸಿದೆ. ಪರಿಣಾಮ ಕಾರು ಸಂಪೂರ್ಣವಾಗಿ ಜಖಂಗೊಂಡು, ರೋಹನ್ ರಾಜ್ ಮತ್ತು ಪ್ರಶಾಂತ್ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಕಾಲು ಮುರಿದ ಬಾಲಕ ಗೌತಮ್ ರಾಜ್‌ನನ್ನು ನಗರದ ಸಿಮ್ಸ್ ಆಸ್ಪತ್ರೆಗೆ ದಾಖಲಾಗಿದೆ. ಚಾಲಕ ಸ್ಥಳದಲ್ಲೇ ಲಾರಿ ಬಿಟ್ಟು ಪರಾರಿಯಾಗಿದ್ದಾನೆ. ಸ್ಥಳಕ್ಕೆ ಸಂಚಾರ ಠಾಣೆ ಪೊಲೀಸರು ಭೇಟಿ ನೀಡಿ ಪರಿಶೀಲಿಸಿ, ಈ ಸಂಬಂಧ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ದಸರಾ ಭದ್ರತೆ: ಹೆಚ್ಚುವರಿ ಪೊಲೀಸರಿಗೆ ಕೆಪಿಎ ಮೈದಾನದಲ್ಲಿ ತರಬೇತಿ



ಮೈಸೂರು ನಗರ ಕಾನೂನು–ಸುವ್ಯವಸ್ಥೆ ವಿಭಾಗದ ಡಿಸಿಪಿ ಎಂ.ಮುತ್ತುರಾಜ್ ಗುರುವಾರ ಹೊರ ಜಿಲ್ಲೆಯ ಪೊಲೀಸ್ ಸಿಬ್ಬಂದಿಗೆ ತರಬೇತಿ ನೀಡಿದರು.

ಮೈಸೂರು, ಅ.10(ಆರ್‌ಕೆ)–ದಸರಾ ವಿಶೇಷ ಭದ್ರತೆಗಾಗಿ ಹೊರ ಜಿಲ್ಲೆಗಳಿಂದ ಆಗಮಿಸಿರುವ ಹೆಚ್ಚುವರಿ ಪೊಲೀಸ್ ಸಿಬ್ಬಂದಿಗೆ ಮೈಸೂರಿನ ಕೆಪಿಎ ಕವಾಯತು ಮೈದಾನದಲ್ಲಿ ಗುರುವಾರ ಸಂಜೆ ಬಂದೋಬಸ್ತ್ ಕರ್ತವ್ಯ ನಿರ್ವಹಿಸುವ ಕುರಿತು ತರಬೇತಿ ನೀಡಲಾಯಿತು.


ಎರಡು ಹಂತದಲ್ಲಿ ಮೈಸೂರು ತಲುಪಿರುವ ಪೊಲೀಸ್ ಸಿಬ್ಬಂದಿ ಅಕ್ಟೋಬರ್ 12ರಂದು ನಡೆಯಲಿರುವ ವಿಜಯ ದಶಮಿ ಮೆರವಣಿಗೆ ಮತ್ತು ಪಂಜಿನ ಕವಾಯತು, ಡ್ರೋನ್ ಪ್ರದರ್ಶನದಲ್ಲಿ ಭದ್ರತಾ ಕರ್ತವ್ಯ ನಿರ್ವಹಿಸುವ ಸಂದರ್ಭ ಅನುಸರಿಸ ಬೇಕಾದ ಕ್ರಮಗಳು, ಗಮನಿಸಬೇಕಾದ ಅಂಶಗಳು, ತುರ್ತು ಸಂದರ್ಭಗಳಲ್ಲಿ ಯಾವ ರೀತಿ ನಿಯಮ ಅನುಸರಿಸಬೇಕೆಂಬುದರ ಬಗ್ಗೆ ಮೈಸೂರು ನಗರ ಕಾನೂನು–ಸುವ್ಯವಸ್ಥೆ ವಿಭಾಗದ ಡಿಸಿಪಿ ಎಂ.ಮುತ್ತುರಾಜ್ ಅವರು ಹೊರ ಜಿಲ್ಲೆಯ ಪೊಲೀಸ್ ಸಿಬ್ಬಂದಿಗೆ ವಿವರಿಸಿದರು.

ಅರಮನೆ ಆವರಣ, ಹೊರ ಭಾಗದ ರಸ್ತೆಗಳು, ದ್ವಾರಗಳು, ರಾಜ ಮಾರ್ಗ, ಪಂಜಿನ ಕವಾಯತು ಮೈದಾನ, ಹೊರ ಆವರಣ, ಸಂಚಾರ ಮಾರ್ಗ ಮತ್ತು ಪಾರ್ಕಿಂಗ್ ಸ್ಥಳಗಳಿಗೆ ನಿಯೋಜಿತರಾದ ಸಿಬ್ಬಂದಿಗಳು, ವಾಹನ ಸಂಚಾರ, ಅಪರಾಧ ಕೃತ್ಯಗಳು, ಅಹಿತಕರ ಘಟನೆಗಳು ಸಂಭವಿಸದಂತೆ ಎಚ್ಚರ ವಹಿಸಬೇಕು. ತಮ್ಮ ಹಂತದಲ್ಲಿ ಪರಿಸ್ಥಿತಿ ನಿಭಾಯಿಸದಂತಹ ಸಂದರ್ಭ ಎದುರಾದಲ್ಲಿ ಸಮೀಪದಲ್ಲಿ ಲಭ್ಯವಿರುವ ಪೊಲೀಸ್ ಅಧಿಕಾರಿಗಳ ಗಮನಕ್ಕೆ ತರಬೇಕು ಎಂಬುದರ ಬಗ್ಗೆ ಅಪರಾಧ ಮತ್ತು ಸಂಚಾರ ವಿಭಾಗದ ಡಿಸಿಪಿ ಎಸ್.ಜಾಹ್ನವಿ ಅವರು ತಿಳುವಳಿಕೆ ನೀಡಿದರು.

ಜಂಬೂಸವಾರಿ ವೀಕ್ಷಿಸಲು ಬರುವ ಜನರು, ಪ್ರವಾಸಿಗರೊಂದಿಗೆ ಶಾಂತ ರೀತಿ ವರ್ತಿಸಿ, ಜನಸ್ನೇಹಿಯಗಿ ಕೆಲಸ ನಿರ್ವಹಿಸಿ. ಯಾವುದೇ ಅಹಿತಕರ ಘಟನೆಗಳು ಸಂಭವಿಸದಂತೆ ವಿಜಯ ದಶಮಿ ಮೆರವಣಿಗೆ ಯಶಸ್ವಿಯಾಗಿ ನಡೆಯಲು ಸಹಕಾರಿಯಾಗಿ ಎಂದು ಮುತ್ತುರಾಜ್ ಸಲಹೆ ನೀಡಿದ್ದಾರೆ.

ದೇಶ – ವಿದೇಶ


ಅಮೆರಿಕದ ಫ್ಲೋರಿಡಾ ಕರಾವಳಿ ಮಿಲ್ಟನ್ ಚಂಡಮಾರುತದಿಂದ ತತ್ತರ



ಫ್ಲೋರಿಡಾ: ಮಿಲ್ಟನ್ ಚಂಡಮಾರುತ ಅಮೆರಿಕದ ಫ್ಲೋರಿಡಾ ರಾಜ್ಯದ ಕರಾವಳಿ ಪ್ರದೇಶಕ್ಕೆ ಅಪ್ಪಳಿಸಿದೆ. ಕೆಟಗರಿ 3ರ ಚಂಡಮಾರುತ ಇದಾಗಿದ್ದು, ಮಾರಣಾಂತಿಕವಾಗಿ ಪರಿಣಮಿಸಿದೆ. ಭಾರೀ ಬಿರುಗಾಳಿ ಬೀಸುತ್ತಿದ್ದು, ವಿಪರೀತ ಮಳೆ ಕೂಡಾ ಆಗುತ್ತಿದೆ. ಜೊತೆಯಲ್ಲೇ ಕರಾವಳಿ ಭಾಗದಲ್ಲಿ ಸಮುದ್ರದ ಅಲೆಗಳ ಅರ್ಭಟ ಹೆಚ್ಚಾಗಿದ್ದು, ಕರಾವಳಿಯ ಎಲ್ಲರನ್ನೂ ಸುರಕ್ಷಿತ ಸ್ಥಳಗಳಿಗೆ ಈಗಾಗಲೇ ರವಾನೆ ಮಾಡಲಾಗಿದೆ.


ಅಮೆರಿಕದ ಹವಾಮಾನ ಇಲಾಖೆ ಅಂದಾಜಿನ ಪ್ರಕಾರ ಈ ಭಾಗದಲ್ಲಿ ಗಂಟೆಗೆ 100 ಮೈಲು ಅಂದರೆ 160 ಕಿ.ಮೀ. ವೇಗದಲ್ಲಿ ಗಾಳಿ ಬೀಸುತ್ತಿದೆ. ಸಾಕಷ್ಟು ಮರಗಳು ಉರುಳಿವೆ. ಕರಾವಳಿಯಲ್ಲಿ ಇರುವ ತಂಪಾ ನಗರವಂತೂ ಅಸ್ತವ್ಯಸ್ತವಾಗಿದೆ. ಚಂಡಮಾರುತವು ಫ್ಲೋರಿಡಾ ಕರಾವಳಿಗೆ ಅಪ್ಪಳಿಸುವ ಮುನ್ನವೇ ಸುಮಾರು 125 ಮನೆಗಳು ಬಿರುಗಾಳಿಯಿಂದ ಧ್ವಂಸಗೊಂಡವು. ಈ ಪೈಕಿ ಬಹುತೇಕ ಮನೆಗಳು ಹಿರಿಯ ನಾಗರಿಕರ ಸಮುದಾಯ ಕೇಂದ್ರಕ್ಕೆ ಸೇರಿದ್ದವು ಎಂದು ಸ್ಥಳೀಯಾಡಳಿತ ತಿಳಿಸಿದೆ.

ಎನ್‌ಸಿ ಶಾಸಕಾಂಗ ಪಕ್ಷದ ನಾಯಕರಾಗಿ ಒಮರ್ ಅಬ್ದುಲ್ಲಾ ಅವಿರೋಧ ಆಯ್ಕೆ



ನವದೆಹಲಿ: ನ್ಯಾಷನಲ್ ಕಾನ್ಫರೆನ್ಸ್ (ಎನ್‌ಸಿ) ಶಾಸಕಾಂಗ ಪಕ್ಷದ ನಾಯಕರಾಗಿ ಒಮರ್ ಅಬ್ದುಲ್ಲಾ ಅವರನ್ನು ಅವಿರೋಧವಾಗಿ ಆಯ್ಕೆ ಮಾಡಲಾಗಿದೆ ಎಂದು ಪಕ್ಷದ ಅಧ್ಯಕ್ಷ ಫಾರೂಕ್ ಅಬ್ದುಲ್ಲಾ ತಿಳಿಸಿದ್ದಾರೆ. ಗುರುವಾರ ಶಾಸಕಾಂಗ ಪಕ್ಷದ ಸಭೆ ನಡೆಯಿತು. ಬಳಿಕ ಅವರನ್ನು ಶಾಸಕಾಂಗ ಪಕ್ಷದ ನಾಯಕರನ್ನಾಗಿ ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು ಎಂದು ಅವರು ಹೇಳಿದ್ದಾರೆ. ಇದಕ್ಕೂ ಮೊದಲು, ನ್ಯಾಷನಲ್ ಕಾನ್ಫರೆನ್ಸ್‌ನ ಎಲ್ಲಾ ಚುನಾಯಿತ ಶಾಸಕರು ಪಕ್ಷದ ಪ್ರಧಾನ ಕಚೇರಿ ನವಾ–ಎ–ಸುಬಾದಲ್ಲಿ ಮಾತುಕತೆ ನಡೆಸಿದ್ದರು. ಸರ್ಕಾರ ರಚನೆ ಪ್ರಕ್ರಿಯೆಯನ್ನು ಮುಂದಕ್ಕೆ ಕೊಂಡೊಯ್ಯಲು ಚುನಾವಣಾ ಪೂರ್ವ ಮೈತ್ರಿ ಪಾಲುದಾರರು (ನ್ಯಾಷನಲ್ ಕಾನ್ಫರೆನ್ಸ್, ಕಾಂಗ್ರೆಸ್, ಸಿಪಿಐ–ಎಂ, ಪ್ಯಾಂಥರ್ಸ್ ಪಾರ್ಟಿ) ಶುಕ್ರವಾರ ಸಭೆ ಸೇರಲಿದ್ದಾರೆ ಎಂದು ಹಿರಿಯ ರಾಜಕಾರಣಿ ಹೇಳಿದ್ದಾರೆ. ಇದೇ ವೇಳೆ ಒಮರ್ ಅಬ್ದುಲ್ಲಾ ಮುಖ್ಯಮಂತ್ರಿಯಾಗುವ ಸಾಧ್ಯತೆ ಇದ್ದು, ಶಾಸಕರಿಗೆ ಕೃತಜ್ಞತೆ ಸಲ್ಲಿಸಿದರು. ಕಾಂಗ್ರೆಸ್‌ನಿಂದ ಬೆಂಬಲ ಪತ್ರ ಪಡೆಯಲು ಮಾತುಕತೆ ನಡೆಸಲಾಗುತ್ತಿದೆ. ಅಲ್ಲದೆ, ನಾಲ್ವರು ಸ್ವತಂತ್ರರು ನ್ಯಾಷನಲ್ ಕಾನ್ಫರೆನ್ಸ್‌ಗೆ ಬೆಂಬಲ ವ್ಯಕ್ತಪಡಿಸಿದ್ದಾರೆ. ಈಗ ನಾಲ್ವರು ಸ್ವತಂತ್ರ ಶಾಸಕರು ಸೇರಿ ನಮ್ಮ ಸಂಖ್ಯೆ 42 ಆಗಿದೆ.

ಪಾಕಿಸ್ತಾನದಲ್ಲಿ 4 ಹೊಸ ಪೋಲಿಯೊ ಪ್ರಕರಣ ಪತ್ತೆ, 32ಕ್ಕೇರಿದ ಸಂಖ್ಯೆ



ಇಸ್ಲಾಮಾಬಾದ್: ಪಾಕಿಸ್ತಾನದಲ್ಲಿ ಕನಿಷ್ಠ ನಾಲ್ಕು ಹೊಸ ಪೋಲಿಯೊ ಪ್ರಕರಣಗಳು ವರದಿಯಾಗಿದ್ದು, ಈ ವರ್ಷ ಕಾಣಿಸಿಕೊಂಡ ಪೋಲಿಯೊ ಪ್ರಕರಣಗಳ ಒಟ್ಟು ಸಂಖ್ಯೆ 32ಕ್ಕೆ ತಲುಪಿದೆ ಎಂದು ಅಧಿಕೃತ ಹೇಳಿಕೆ ತಿಳಿಸಿದೆ. ಈ ವರ್ಷದ ಸೆಪ್ಟೆಂಬರ್‌ನಲ್ಲಿ ರಾಷ್ಟ್ರವ್ಯಾಪಿ ನಡೆಸಲಾದ ಪೋಲಿಯೊ ಲಸಿಕಾ ಅಭಿಯಾನದಲ್ಲಿ ಪಾಕಿಸ್ತಾನ ಪೋಲಿಯೊ ನಿರ್ಮೂಲನಾ ಸಂಸ್ಥೆಯು 5 ವರ್ಷಕ್ಕಿಂತ ಕಡಿಮೆ ವಯಸ್ಸಿನ ಸುಮಾರು 33 ಮಿಲಿಯನ್ ಮಕ್ಕಳಿಗೆ ಲಸಿಕೆ ಹಾಕಿದೆ ಎಂದು ಆರೋಗ್ಯ ಸಚಿವಾಲಯದ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಪೋಲಿಯೊದ ಅಪಾಯಕಾರಿ ಪರಿಣಾಮಗಳಿಂದ ಮಕ್ಕಳನ್ನು ರಕ್ಷಿಸುವ ಸಲುವಾಗಿ ಲಸಿಕಾ ಅಭಿಯಾನ ನಡೆಸಲಾಗಿದೆ.

ವಿಶ್ವ ಆರೋಗ್ಯ ಸಂಸ್ಥೆ ಪ್ರಕಾರ, ಪೋಲಿಯೊ ವೈರಸ್‌ನಿಂದ ಉಂಟಾಗುತ್ತದೆ. ಇದು ನರಮಂಡಲದ ಮೇಲೆ ಆಕ್ರಮಣ ಮಾಡುವ ಅತ್ಯಂತ ಸಾಂಕ್ರಾಮಿಕವಾಗಿ ಹರಡುವ ವೈರಸ್ ಆಗಿದೆ. ಇದು ವ್ಯಕ್ತಿಯಿಂದ ವ್ಯಕ್ತಿಗೆ ಸಂಪರ್ಕ, ಕಲುಷಿತ ಆಹಾರ, ಕಲುಷಿತ ನೀರನ್ನು ಸೇವಿಸಿದರೆ ಹರಡುತ್ತದೆ. ವೈರಸ್ ಮಲ–ಬಾಯಿಯ ಮಾರ್ಗದ ಮೂಲಕ ಅಥವಾ ಸೋಂಕಿತ ವ್ಯಕ್ತಿಯ ಗಂಟಲಿನಿಂದ ಹನಿಗಳ ಮೂಲಕ ಹರಡಬಹುದು.

ಬಾಂಬ್ ಭೀತಿ: 3 ಗಂಟೆಗೂ ಹೆಚ್ಚು ಕಾಲ ಪುರಿ–ನವದೆಹಲಿ ಪುರುಷೋತ್ತಮ್ ಎಕ್ಸ್‌ಪ್ರೆಸ್ ಸ್ಥಗಿತ

ನವದೆಹಲಿ: ಕೆಲವು ಶಂಕಿತ ಉಗ್ರರು ಸ್ಫೋಟಕ ವಸ್ತುಗಳೊಂದಿಗೆ ಪ್ರಯಾಣಿಸುತ್ತಿದ್ದಾರೆ ಎಂಬ ಮಾಹಿತಿ ಹಿನ್ನೆಲೆಯಲ್ಲಿ ಪುರಿ–ನವದೆಹಲಿ ಪುರುಷೋತ್ತಮ ಎಕ್ಸ್‌ಪ್ರೆಸ್ ರೈಲನ್ನು ಉತ್ತರಪ್ರದೇಶದ ತುಂಡ್ಲಾ ರೈಲು ನಿಲ್ದಾಣದಲ್ಲಿ 3 ಗಂಟೆಗೂ ಹೆಚ್ಚು ಕಾಲ ತಾತ್ಕಾಲಿಕವಾಗಿ ನಿಲ್ಲಿಸಲಾಯಿತು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಇಂದು ಮುಂಜಾನೆ ಸುಮಾರು 2.30ರಿಂದ 6 ರವರೆಗೂ ರೈಲಿನಲ್ಲಿ ಶೋಧ ಕಾರ್ಯ ನಡೆಸಲಾಯಿತು. ಆದರೆ ಅಂತಹ ಯಾವುದೇ ಅನುಮಾನಾಸ್ಪದ ವಸ್ತುಗಳು ಕಂಡು ಬಂದಿಲ್ಲದ ಕಾರಣ ಸಾಮಾಜಿಕ ಜಾಲತಾಣ ಎಕ್ಸ್ ಬಳಕೆದಾರರಿಂದ ಪಡೆದ ಮಾಹಿತಿ ಹುಸಿಯಾಗಿತ್ತು ಎಂದು ಹೇಳಿದ್ದಾರೆ. ಎಲ್ಲಾ ಕೋಚ್‌ಗಳಲ್ಲಿನ ಪ್ರತಿಯೊಬ್ಬ ಪ್ರಯಾಣಿಕರನ್ನು ಎಚ್ಚರಗೊಳಿಸಲಾಯಿತು ಮತ್ತು ಅವರ ಲಗೇಜ್‌ಗಳನ್ನು ಮೆಟಲ್ ಡಿಟೆಕ್ಟರ್ ಮತ್ತು ಶ್ವಾನ ದಳಗಳೊಂದಿಗೆ ಸಂಪೂರ್ಣವಾಗಿ ಪರಿಶೀಲಿಸಲಾಯಿತು. ಕೆಲವು ಶಂಕಿತ ಉಗ್ರರು ರೈಲಿನಲ್ಲಿ ಸ್ಫೋಟಕಗಳೊಂದಿಗೆ ಪ್ರಯಾಣಿಸುತ್ತಿದ್ದು, ಏರ್ ಇಂಡಿಯಾದ ದೆಹಲಿ– ಲೇಹ್ ವಿಮಾನದಲ್ಲಿ ಬಾಂಬ್ ಸ್ಫೋಟಿಸಲು ಸಂಚು ರೂಪಿಸಿದ್ದಾರೆ. ಆದರೆ, ಪರಿಶೀಲನೆ ನಡೆಸಿದಾಗ ಅದು ಹುಸಿಯಾಗಿತ್ತು ಎಂದು ಅವರು ಮಾಹಿತಿ ನೀಡಿದರು.

ಲೆಬನಾನ್‌ನ 125 ಸ್ಥಳಗಳ ಮೇಲೆ ದಾಳಿ; 50 ಹಿಜ್ಬುಲ್ಲಾ ಉಗ್ರರ ಹತ್ಯೆ



ಜೆರುಸಲೇಂ: ಲೆಬನಾನ್‌ನಲ್ಲಿನ ಭೂಗತ ಹಿಜ್ಬುಲ್ಲಾ ಕಮಾಂಡ್ ಕೇಂದ್ರಗಳ ಮೇಲೆ ನಡೆಸಲಾದ ವ್ಯಾಪಕ ವೈಮಾನಿಕ ಬಾಂಬ್ ದಾಳಿಯಲ್ಲಿ 50ಕ್ಕೂ ಹೆಚ್ಚು ಉಗ್ರರು ಸಾವನ್ನಪ್ಪಿದ್ದಾರೆ ಎಂದು ಇಸ್ರೇಲ್ ಸೇನೆ ತಿಳಿಸಿದೆ.

ಇಸ್ರೇಲ್ ರಕ್ಷಣಾ ಪಡೆಗಳ (ಐಡಿಎಫ್) ವಕ್ತಾರ ಡೇನಿಯಲ್ ಹಗರಿ ಟಿವಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಇಸ್ರೇಲ್ ವಿರುದ್ಧದ ಹೋರಾಟದ ನೇತೃತ್ವ ವಹಿಸಿರುವ ಕಮಾಂಡರ್‌ಗಳು ಅವಿತಿದ್ದ ಹಿಜ್ಬುಲ್ಲಾದ ದಕ್ಷಿಣ ಮುಂಚೂಣಿಯ ಡಜನ್‌ಗಟ್ಟಲೆ ಭೂಗತ ಕಮಾಂಡ್ ಕೇಂದ್ರಗಳ ಮೇಲೆ ವೈಮಾನಿಕ ದಾಳಿ ನಡೆಸಿ ಅವುಗಳನ್ನು ನಾಶಪಡಿಸಲಾಗಿದೆ ಎಂದರು. ಹಿಜ್ಬುಲ್ಲಾದ ದಕ್ಷಿಣ ಮುಂಚೂಣಿ ಮತ್ತು ರಾಡ್ವಾನ್ ಪಡೆಗಳ ಆರು ಹಿರಿಯ ಕಮಾಂಡರ್‌ಗಳು ದಾಳಿಯಲ್ಲಿ ಸಾವನ್ನಪ್ಪಿದ್ದಾರೆ. ಇದರಲ್ಲಿ ಬಿಂಟ್ ಜೆಬೀಲ್ ಪ್ರದೇಶದ ಫಿರಂಗಿ ಕಮಾಂಡರ್ ಎಂದು ಗುರುತಿಸಲ್ಪಟ್ಟ ಅಲಿ ಅಹ್ಮದ್ ಇಸ್ಮಾಯಿಲ್ ಮತ್ತು ಹಿಜ್ಬುಲ್ಲಾದ ಗಣ್ಯ ಕಮಾಂಡೋ ಘಟಕವಾದ ರಾಡ್ವಾನ್ ಫೋರ್ಸ್‌ನ ಬಿಂಟ್ ಜೆಬೀಲ್ ದಾಳಿ ವಲಯದ ಮುಖ್ಯಸ್ಥ ಅಹ್ಮದ್ ಹಸನ್ ನಜಲ್ ಸೇರಿದ್ದಾರೆ ಎಂದು ಹಗರಿ ಹೇಳಿರುವುದಾಗಿ ಕ್ಸಿನ್ಹುವಾ ಸುದ್ದಿ ಸಂಸ್ಥೆ ವರದಿ ಮಾಡಿದೆ.

ಜಾನಪದದಲ್ಲಿ ನಾಡಿನ ಸುಂದರ ಸಂಸ್ಕೃತಿ

• ಡಿಸಿ ವೆಂಕಟ್ ರಾಜಾ ಅಭಿಮತ • ಮಡಿಕೇರಿ ದಸರಾದಲ್ಲಿ ಜಾನಪದ ಉತ್ಸವ

ಜಾನಪದ ಪರಿಕರ ಪ್ರದರ್ಶನ

ಪೊನ್ನಚ್ಚನ ಮಧು ಅವರ ಸಂಗ್ರಹದಲ್ಲಿರುವ ವಿವಿಧ ಜಾನಪದ ಪರಿಕರಗಳ ಪ್ರದರ್ಶನ ಗಮನ ಸೆಳೆಯಿತು. ಈ ಪ್ರದರ್ಶನವನ್ನು ಅರೆಭಾಷಾ ಸಾಹಿತ್ಯ ಸಂಸ್ಕೃತಿ ಅಕಾಡೆಮಿ ಅಧ್ಯಕ್ಷ ಸದಾನಂದ ಮಾವಾಜಿ ಉದ್ಘಾಟಿಸಿದರು. ಸಭಾ ಕಾರ್ಯಕ್ರಮಕ್ಕೂ ಮುನ್ನ ಡೊಳ್ಳು ಕುಣಿತ, ಪಟ ಕುಣಿತ, ವೀರಗಾಸೆ ಸೇರಿದಂತೆ ವಿವಿಧ ಕಲಾ ತಂಡಗಳೊಂದಿಗೆ ಜಾನಪದ ಪರಿಷತ್ ಮತ್ತು ದಸರಾ ಸಮಿತಿ ಪದಾಧಿಕಾರಿಗಳು ಜ.ತಿಮ್ಮಯ್ಯ ವೃತ್ತದ ಬಳಿಯಿಂದ ವೇದಿಕೆವರೆಗೆ ಮೆರವಣಿಯಲ್ಲಿ ಸಾಗಿದರು. ಕಲಾ ಸಂಭ್ರಮ ವೇದಿಕೆಯಲ್ಲಿ ವಿವಿಧ ಕಲಾ ತಂಡಗಳಿಂದ ನಡೆದ ಸಾಂಸ್ಕೃತಿಕ ವೈಭವದ ನೃತ್ಯ ಪ್ರದರ್ಶನ ನೋಡುಗರ ಗಮನ ಸೆಳೆಯಿತು.



ದಸರಾ ಜಾನಪದ ಉತ್ಸವವನ್ನು ಜಿಲ್ಲಾಧಿಕಾರಿ ವೆಂಕಟ್ ರಾಜಾ ಕೃಷಿ ಸಲಕರಣೆಯಿಂದ ಭತ್ತ ಅಳೆಯುವ ಮೂಲಕ ಉದ್ಘಾಟಿಸಿದರು.

ಮಡಿಕೇರಿ, ಅ.10–ನಾಡಿನ ಸುಂದರ ಸಂಸ್ಕೃತಿ, ಆಚಾರ, ವಿಚಾರಗಳೆಲ್ಲವು 'ಜಾನಪದ'ದಲ್ಲಿ ಮಿಳಿತವಾಗಿದ್ದು, ನಾಡಿನ ಪ್ರತಿಯೊಂದು ವಿಭಾಗಗಳಲ್ಲಿ ವಿಭಿನ್ನ ವಿಶಿಷ್ಟ ಸಂಸ್ಕೃತಿಯನ್ನು ನಾವು ಕಾಣುತ್ತೇವೆ. ಇವುಗಳೆಲ್ಲದರ ಮೂಲ ತತ್ತ್ವ ಒಂದೇ ಆಗಿದೆ ಎಂದು ಜಿಲ್ಲಾಧಿಕಾರಿ ಹಾಗೂ ಮಡಿಕೇರಿ ದಸರಾ ಸಮಿತಿ ಅಧ್ಯಕ್ಷ ವೆಂಕಟ್ ರಾಜಾ ಅಭಿಪ್ರಾಯಪಟ್ಟರು.

ನಗರದ ಗಾಂಧಿ ಮೈದಾನದ ಕಲಾ ಸಂಭ್ರಮ ವೇದಿಕೆಯಲ್ಲಿ ಮಡಿಕೇರಿ ದಸರಾ ಸಮಿತಿ, ಕೊಡಗು ಜಿಲ್ಲಾ ಜಾನಪದ ಪರಿಷತ್ ವತಿಯಿಂದ ಕರ್ನಾಟಕ ಕೊಡವ ಸಾಹಿತ್ಯ ಸಂಸ್ಕೃತಿ ಅಕಾಡೆಮಿ, ಕರ್ನಾಟಕ ಅರೆಭಾಷಾ ಸಾಹಿತ್ಯ ಸಂಸ್ಕೃತಿ ಅಕಾಡೆಮಿ, ಕರ್ನಾಟಕ ಬ್ಯಾರಿ ಸಾಹಿತ್ಯ ಸಂಸ್ಕೃತಿ ಅಕಾಡೆಮಿಗಳ ಸಹಯೋಗದಲ್ಲಿ ಗುರುವಾರ ಆಯೋಜಿಸಿದ್ದ 5ನೇ ವರ್ಷದ ದಸರಾ ಜಾನಪದ ಉತ್ಸವವನ್ನು ಕೃಷಿ ಸಲಕರಣೆಯಿಂದ ಭತ್ತ ಅಳೆಯುವ ಮೂಲಕ ಉದ್ಘಾಟಿಸಿ ಮಾತನಾಡಿದ ಅವರು, ನಮ್ಮ ಮೂಲ ಸಂಸ್ಕೃತಿಯೊಂದಿಗೆ ಜಾನಪದ ಆಚರಣೆ, ಆಚಾರ–ವಿಚಾರ ಮುಂದಿನ ಪೀಳಿಗೆಗೆ ಹಸ್ತಾಂತರ ಮಾಡುವುದು ಅತ್ಯವಶ್ಯ. ಈ ನಿಟ್ಟಿನಲ್ಲಿ ಪೋಷಕರು ಮಕ್ಕಳಿಗೆ ನಮ್ಮ ಸುಂದರ ಸಂಸ್ಕೃತಿ, ಪರಿಸರದೊಂದಿಗೆ ಬೆರೆತು ಹೋಗಿರುವ ಜಾನಪದ ವಿಚಾರ ತಿಳಿಸಿಕೊಡುವ ಕಾರ್ಯವಾಗಬೇಕು ಎಂದರು.

ಅರಣ್ಯ ವಾಸಿಗಳಲ್ಲಿನ ಅತ್ಯಂತ ವಿಶಿಷ್ಟ ಜಾನಪದ ಆಚರಣೆ, ಅವರ ಸಂಸ್ಕೃತಿ ಉಳಿಸಿ ಬೆಳೆಸುವ ನಿಟ್ಟಿನಲ್ಲಿ ಪ್ರತಿಯೊಬ್ಬರು ಚಿಂತನೆ ಹರಿಸಬೇಕು. ಜಾನಪದ ಉಳಿಸಿ ಬೆಳೆಸುವ ಕಾರ್ಯದಲ್ಲಿ ತೊಡಗಿರುವ ಕೊಡಗು ಜಾನಪದ ಪರಿಷತ್ ತನ್ನ ಕಾರ್ಯ ಚಟುವಟಿಕೆಗಳಿಗೆ ಪೂರಕವಾಗಿ ಅಗತ್ಯ ಜಾಗಕ್ಕಾಗಿ ಪ್ರಸ್ತಾವನೆ ಸಲ್ಲಿಸಿದಲ್ಲಿ ಸಹಕಾರ ನೀಡುವುದಾಗಿ ಜಿಲ್ಲಾಧಿಕಾರಿ ತಿಳಿಸಿದರು. ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಅಜ್ಜಿನಿಕಂಡ ಮಹೇಶ್ ನಾಚಯ್ಯ ಮಾತನಾಡಿ, ಭಾರತದಂತಹ ಬಹುಸಂಸ್ಕೃತಿ ದೇಶ ವಿಶ್ವದ ಬೇರೆಲ್ಲೂ ಇಲ್ಲ. ಇದೇ ರೀತಿ ಕೊಡಗು ಜಿಲ್ಲೆಯಲ್ಲೂ ಹಲವು ಧರ್ಮದವರಿದ್ದು, ಎಲ್ಲರೂ ಒಂದಾಗಿ ಸೌಹಾರ್ದಯುತವಾಗಿ ಮುನ್ನಡೆಯುತ್ತಿರುವ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ದಸರಾ ಉತ್ಸವ ಜಾತಿ, ಧರ್ಮ ಮೀರಿ ಆಯೋಜಿಸಲಾಗುತ್ತಿದೆ. ಇಂತಹ ಸಮಾರಂಭಗಳಲ್ಲಿ ಸಾರ್ವಜನಿಕರು ಹೆಚ್ಚಾಗಿ ಪಾಲ್ಗೊಳ್ಳುವಂತಾಗಬೇಕು. ಸಹಬಾಳ್ವೆಯಿಂದ ಮಾತ್ರ ಶಾಂತಿಯುತ ಸಮಾಜಕ್ಕೆ ಅರ್ಥ ಬರುತ್ತದೆ. ಪ್ರತಿಯೊಬ್ಬರು ತಮ್ಮ ಬದುಕಿನುದ್ದಕ್ಕೂ ಜಾನಪದ ಸಂಸ್ಕೃತಿ ಅಳವಡಿಸಿಕೊಂಡು ಸಾಗಬೇಕೆಂದು ತಿಳಿಸಿದರು.

ಕರ್ನಾಟಕ ಅರೆಭಾಷಾ ಸಾಹಿತ್ಯ ಸಂಸ್ಕೃತಿ ಅಕಾಡೆಮಿ ಅಧ್ಯಕ್ಷ ಸದಾನಂದ ಮಾವಾಜಿ ಮಾತನಾಡಿ, ಅವನತಿಯ ಹಾದಿಯಲ್ಲಿ ಸಾಗುತ್ತಿರುವ ನಮ್ಮ ಜಾನಪದ ಕಲೆ, ಸಂಸ್ಕೃತಿ ಬಿಂಬಿಸುವ ಮುಖೇನ ಅವುಗಳ ಸಂರಕ್ಷಣೆಗೆ ದಸರಾ ಉತ್ಸವದಲ್ಲಿ ಜಾನಪದ ಕಾರ್ಯಕ್ರಮ ಆಯೋಜಿಸಿರುವುದು ಮೆಚ್ಚುಗೆ ಎಂದರು.

ಕೊಡಗು ಜಿಲ್ಲಾ ಜಾನಪದ ಪರಿಷತ್ ಅಧ್ಯಕ್ಷ ಬಿ.ಜಿ.ಅನಂತ ಶಯನ ಮಾತನಾಡಿ, ಜಿಲ್ಲೆಯಲ್ಲಿ ಜಾನಪದ ಕಲಾ ಪ್ರಕಾರಗಳು ಸಾಕಷ್ಟು ಶ್ರೀಮಂತವಾಗಿದೆ. ಆದರೆ, ಇದರ ಅರಿವು ಜನರಲ್ಲಿ ಇರಲಿಲ್ಲ. ಜಿಲ್ಲೆಯಲ್ಲಿ ಜಾನಪದ ಪರಿಷತ್ ಆರಂಭಗೊಂಡ ಬಳಿಕ ಕೆಲ ವರ್ಷಗಳಿಂದ ಜಾನಪದ ಘಟಕಗಳನ್ನು ಆರಂಭಿಸಲಾಗಿದೆ. ಎಲ್ಲರೂ ಒಂದಾಗಿ ಜಾನಪದ ಕಲೆ, ಸಂಸ್ಕೃತಿ ಉಳಿವಿಗೆ ಶ್ರಮಿಸೋಣವೆಂದು ಹಾರೈಸಿದರು.



ಮಡಿಕೇರಿ ದಸರಾದಲ್ಲಿ ಗಮನ ಸೆಳೆದ ಕೊಡವ ಜಾನಪದ ನೃತ್ಯ

ಪುಸ್ತಕಗಳ ಅನಾವರಣ

ಜಾನಪದ ದಸರಾದಲ್ಲಿ ಹಿರಿಯ ಸಾಹಿತಿ ಕಿಗ್ಗಾಲು ಗಿರೀಶ್ ರಚಿಸಿರುವ 'ಅಪ್ರತಿಮ ಸಾಹಸಿ ಜನರಲ್ ತಿಮ್ಮಯ್ಯ' ಪುಸ್ತಕ ಮತ್ತು ಸಾಹಿತಿ ಹಂಚೆಟ್ಟೀರ ಫ್ಯಾನ್ಸಿ ಮುತ್ತಣ್ಣ ಅವರ ಕಥಾ ಸಂಕಲನ 'ಒಡಲ ಉರಿ' ಅನ್ನು ಗಣ್ಯರು ಅನಾವರಣಗೊಳಿಸಿದರು.

ಇದೇ ವೇಳೆ ಜಾನಪದ ಕಲಾವಿದ ಸುಂಟಿಕೊಪ್ಪದ ಶಂಕರಯ್ಯ ಅವರನ್ನು ಸನ್ಮಾನಿಸಲಾಯಿತು. ವೇದಿಕೆಯಲ್ಲಿ ಜಾನಪದ ದಸರಾ ಸಂಚಾಲಕ ಹೆಚ್.ಟಿ.ಅನಿಲ್, ಜಾನಪದ ಪರಿಷತ್ ಪ್ರಮುಖರಾದ ಸಂಪತ್ ಕುಮಾರ್, ಅಂಬೆ ಕಲ್ಲು ಕುಶಾಲಪ್ಪ, ಸುಜಲಾ ದೇವಿ, ಟೋಮಿ ಥೋಮಸ್, ದಿಲನ್ ಚಂಗಪ್ಪ, ಪ್ರಶಾಂತ್, ಉಜ್ವಲ್ ರಂಜಿತ್ ಮತ್ತಿತರರು ಪಾಲ್ಗೊಂಡಿದ್ದರು.

ಪ್ರೊ.ಡಾ.ಶ್ರೀಧರ ಹೆಗಡೆಗೆ ಪುರಸ್ಕಾರ

ಮಡಿಕೇರಿ, ಅ.10– ನಗರದ ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಕಾಲೇಜಿನ ಹಿಂದಿ ವಿಭಾಗದ ಮುಖ್ಯಸ್ಥ ಪ್ರೊ.ಡಾ. ಶ್ರೀಧರ ಹೆಗಡೆ ಅವರಿಗೆ ಲಾಲ್ ಬಹದ್ದೂರ್ ಶಾಸ್ತ್ರಿ ಹಿಂದಿ ಅನುವಾದ ಪುರಸ್ಕಾರ ಲಭಿಸಿದೆ.



ರಾಜ್ಯ ಮಟ್ಟದ ಈ ಪುರಸ್ಕಾರವನ್ನು ಬೆಂಗಳೂರು ವಿಶ್ವವಿದ್ಯಾಲಯದ ಹಿಂದಿ ವಿಭಾಗ ನೀಡಿದೆ. ಪ್ರೊ.ಡಾ.ಶ್ರೀಧರ ಹೆಗಡೆ ಅವರು ಕುವೆಂಪು ಅವರ ನಾಟಕ 'ಬಲಿದಾನ'ವನ್ನು ಹಿಂದಿ ಭಾಷೆಗೆ ಅನುವಾದ ಮಾಡಿದ್ದಾರೆ. ಈ ಕೃತಿಗೆ ಲಾಲ್ ಬಹದ್ದೂರ್ ಶಾಸ್ತ್ರಿ ಹಿಂದಿ ಅನುವಾದ ಪುರಸ್ಕಾರ ಸಿಕ್ಕಿರುವುದರಿಂದ ಕನ್ನಡ ಮತ್ತು ಹಿಂದಿ ಭಾಷಾ ಬಾಂಧವ್ಯವೂ ಹೆಚ್ಚಿದಂತಾಗಿದೆ.

ರಾಷ್ಟ್ರ ಪ್ರಶಸ್ತಿ ವಿಜೇತ ಡಾ.ಶ್ರೀಧರ ಹೆಗಡೆ ಅವರು 22ಕ್ಕಿಂತ ಹೆಚ್ಚು ಕೃತಿಗಳನ್ನು ಕನ್ನಡದಲ್ಲಿ ಮತ್ತು 15ಕ್ಕಿಂತ ಹೆಚ್ಚು ಕೃತಿಗಳನ್ನು ಹಿಂದಿ ಭಾಷೆಯಲ್ಲಿ ರಚಿಸಿದ್ದಾರೆ. ಅಲ್ಲದೆ, ಕನ್ನಡದಿಂದ ಹಿಂದಿ ಭಾಷೆಗೆ 10ಕ್ಕಿಂತ ಅಧಿಕ ಹಾಗೂ ಹಿಂದಿಯಿಂದ ಕನ್ನಡಕ್ಕೆ 5ಕ್ಕಿಂತ ಹೆಚ್ಚು ಕೃತಿಗಳನ್ನು ಅನುವಾದಿಸಿ ಕನ್ನಡ ಮತ್ತು ಹಿಂದಿ ಸಾಹಿತ್ಯವ ಪುಷ್ಟೀಕರಿಸಿ ಸಾಹಿತ್ಯ ಕ್ಷೇತ್ರದ ಪ್ರಶಂಸೆಗೆ ಪಾತ್ರರಾಗಿದ್ದಾರೆ.

ಚೆರುಮಂದಂಡ ಕುಶ ನಿಧನ

ನಾಪೋಕ್ಲು, ಅ.10–ಸಮೀಪದ ಬೇತು ಗ್ರಾಮದ ದಿವಂಗತ ಚೆರುಮಂದಂಡ ಸುಬ್ರಮಣಿ ಅವರ ಮಗ ಚೆರುಮಂದಂಡ ಕುಶ (58) ಅನಾರೋಗ್ಯದಿಂದ ಗುರುವಾರ ನಿಧನರಾದರು.



ಮೃತರು ಪತ್ನಿ ಶೋಭಿತ, ಇಬ್ಬರು ಪುತ್ರರು ಸೇರಿದಂತೆ ಅಪಾರ ಬಂಧು–ಬಳಗ ಅಗಲಿದ್ದಾರೆ. ಶುಕ್ರವಾರ ಮೃತರ ಸ್ವಗೃಹ ಆವರಣದಲ್ಲಿ ಅಂತ್ಯಕ್ರಿಯೆ ಜರುಗಲಿದೆ.

ಅ.15ರಂದು ಕೆ.ವಿ.ಶಂಕರಗೌಡ 109 ಒಂದು ನೆನಪು ವಿಚಾರ ಸಂಕಿರಣ ಕಾರ್ಯಕ್ರಮ

ಮಂಡ್ಯ, ಅ.10–ಕರ್ನಾಟಕ ಸಾಹಿತ್ಯ ಅಕಾಡೆಮಿ, ಜಿಲ್ಲಾಡಳಿತ, ಕೆ.ವಿ.ಶಂಕರಗೌಡ ಅಧ್ಯಯ ಪೀಠ, ಕರ್ನಾಟಕ ಸಂಘ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಸಂಯುಕ್ತಾಶ್ರಯದಲ್ಲಿ ಅಕ್ಟೋಬರ್ 15ರ ಬೆಳಗ್ಗೆ 10.30ಕ್ಕೆ ಕೆ.ವಿ.ಶಂಕರಗೌಡ 109 ಒಂದು ನೆನಪು ವಿಚಾರ ಸಂಕಿರಣ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಕರ್ನಾಟಕ ಸಂಘದ ಅಧ್ಯಕ್ಷ ಪ್ರೊ.ಜಯಪ್ರಕಾಶ್‌ಗೌಡ ತಿಳಿಸಿದರು.



ಸುದ್ದಿಗೋಷ್ಠಿಯಲ್ಲಿ ಮಾತನಾಡುತ್ತಿರುವ ಪ್ರೊ.ಜಯ ಪ್ರಕಾಶ್‌ಗೌಡ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾರ್ಯಕ್ರಮವು ನಗರ ಜಿಲ್ಲಾ ಪಂಚಾಯಿತಿಯ ಕಾವೇರಿ ಸಭಾಂಗಣದಲ್ಲಿ ಬೃಹತ್ ಕೈಗಾರಿಕೆ ಹಾಗೂ ಉಕ್ಕು ಖಾತೆ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಘನ ಉಪಸ್ಥಿತಿಯಲ್ಲಿ ನಡೆಯಲಿದ್ದು, ಕನ್ನಡ ಸಂಸ್ಕೃತಿ ಇಲಾಖೆ ನಿರ್ದೇಶಕಿ ಡಾ.ಕೆ.ಧರಣಿದೇವಿ ಮಾಲಗತ್ತಿ ಉದ್ಘಾಟಿಸುವರು ಎಂದರು.

ಕಾರ್ಯಕ್ರಮದಲ್ಲಿ ಸಾಹಿತಿ ಡಾ.ರಾಗೌ ಆಶಯ ನುಡಿಗಳನ್ನಾಡುವರು, ಮುಖ್ಯ ಅತಿಥಿಗಳಾಗಿ ವಿಧಾನ ಪರಿಷತ್ ಸದಸ್ಯ ಕೆ.ವಿವೇಕಾನಂದ, ಮಾಜಿ ಸದಸ್ಯ ಕೆ.ಟಿ. ಶ್ರೀಕಂಠೇಗೌಡ, ಪಿಇಟಿ ಅಧ್ಯಕ್ಷ ವಿಜಯ್ ಆನಂದ್, ಜಿಲ್ಲಾಧಿಕಾರಿ ಡಾ.ಕುಮಾರ, ಜಿಪಂ ಸಿಇಓ ಡಾ.ಶೇಖ್ ತನ್ವೀರ್ ಆಸಿಫ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ, ಅಪರ ಜಿಲ್ಲಾಧಿಕಾರಿ ಡಾ.ಹೆಚ್.ಎಲ್.ನಾಗರಾಜು, ಕಸಾಪ ಜಿಲ್ಲಾ ಸಂಚಾಲಕಿ ಡಾ.ಮೀರಾ ಶಿವಲಿಂಗಯ್ಯ ಭಾಗವಹಿಸಲಿದ್ದು, ಕರ್ನಾಟಕ ಸಾಹಿತ್ಯ ಅಕಾಡೆಮಿ ಸದಸ್ಯ ಸಂಚಾಲಕಿ ಎಚ್.ಆರ್.ಸುಜಾತ ಉಪಸ್ಥಿತರಿರಲಿದ್ದು, ಅಕಾಡೆಮಿಯ ಅಧ್ಯಕ್ಷ ಎಲ್.ಎನ್.ಮುಕುಂದರಾಜ್ ಅಧ್ಯಕ್ಷತೆ ವಹಿಸುವರು ಎಂದು ವಿವರಿಸಿದರು.

ಮಧ್ಯಾಹ್ನ 12ಕ್ಕೆ ಕನ್ನಡ ಸಾಹಿತ್ಯ ಹಾಗೂ ಸಂಸ್ಕೃತಿಗೆ ಕೆ.ವಿ.ಶಂಕರಗೌಡರ ಕೊಡುಗೆ ಸಂಬಂಧ ಹಿರಿಯ ಸಾಹಿತಿ ಡಾ.ರಾಜಪ್ಪ ದಳವಾಯಿ ಉಪಸ್ಥಿತಿಯಲ್ಲಿ ವಿಚಾರ ಗೋಷ್ಠಿ, ಮಂಡ್ಯ ಜಿಲ್ಲೆಯ ಸಾಮಾಜೋ–ಆರ್ಥಿಕ ಮುನ್ನಡೆಗೆ ಕೆ.ವಿ.ಶಂಕರಗೌಡರ ಕೊಡುಗೆ ಸಂಬಂಧ ಡಾ.ಬಿ.ಆರ್. ರವಿಕಾಂತೇಗೌಡರ ಉಪಸ್ಥಿತಿಯಲ್ಲಿ ವಿಚಾರಗೋಷ್ಠಿ, ಸ್ವಾತಂತ್ರ್ಯ ನಂತರದ ಕರ್ನಾಟಕ ರಾಜಕೀಯದಲ್ಲಿ ಕೆ.ವಿ.ಶಂಕರಗೌಡರ ಸ್ಥಾನ ವಿಚಾರ ಡಾ.ಎಸ್.ಬಿ. ಶಂಕರಗೌಡರ ಉಪಸ್ಥಿತಿಯಲ್ಲಿ ವಿಚಾರಗೋಷ್ಠಿಗಳು ನಡೆಯಲಿವೆ ಎಂದು ಹೇಳಿದರು.

ಸಂಜೆ.4ಕ್ಕೆ ಸಮಾರೋಪ ಸಮಾರಂಭ ನಡೆಯಲಿದ್ದು, ಕೃಷಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಮತ್ತೆ ಮತ್ತೆ ಶಂಕರಗೌಡ ಪುಸ್ತಕ ಬಿಡುಗಡೆ ಮಾಡುವರು, ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಶಿವರಾಜ್ ತಂಗಡಗಿ ಸಮಾರೋಪ ನುಡಿಗಳನ್ನಾಡಲಿದ್ದು, ಶಾಸಕ ಪಿ.ರವಿಕುಮಾರ್‌ಗೌಡ ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ವಿಧಾನಪರಿಷತ್ ಸದಸ್ಯರಾದ ಮಧು ಜಿ.ಮಾದೇಗೌಡ, ದಿನೇಶ್‌ಗೂಳಿಗೌಡ, ಮಾಜಿ ಶಾಸಕ ಎಂ.ಶ್ರೀನಿವಾಸ್, ವಿಧಾನ ಪರಿಷತ್ ಮಾಜಿ ಸದಸ್ಯ ಬಿ. ರಾಮಕೃಷ್ಣ, ಉಪ ಅರಣ್ಯ ಸಂರಕ್ಷಣಾಧಿಕಾರಿ ಶಂಕರೇಗೌಡ ಭಾಗವಹಿಸುವರು ಎಂದು ತಿಳಿಸಿದರು. ಗೋಷ್ಠಿಯಲ್ಲಿ ಸಂಘದ ಕಾರ್ಯದರ್ಶಿ ಲೋಕೇಶ್ ಚಂದಗಾಲು, ಉಪಾಧ್ಯಕ್ಷ ತಗ್ಗಹಳ್ಳಿ ವೆಂಕಟೇಶ್, ನಿರ್ದೇಶಕ ನಾಗಪ್ಪ ಇದ್ದರು.

ನಾಳೆ ಅದ್ಧೂರಿ ಮಂಡ್ಯ ದಸರಾ

ಮಂಡ್ಯ,ಅ.10– ಕಳೆದ ಹತ್ತು ವರ್ಷಗಳಿಂದ ಮಂಡ್ಯ ಯೂತ್ ಗ್ರೂಪ್ ವತಿಯಿಂದ ನಡೆಸಿಕೊಂಡು ಬರುತ್ತಿರುವ ಮಂಡ್ಯ ದಸರಾ ಸಾಂಸ್ಕೃತಿಕ ಉತ್ಸವ ವಿಜಯ ದಶಮಿ ದಿನವಾದ ಶನಿವಾರ (ಅ.12) ದಂದು ಅದ್ಧೂರಿಯಾಗಿ ನಡೆಯಲಿದೆ ಎಂದು ಗ್ರೂಪ್ ಅಧ್ಯಕ್ಷ ಡಾ.ಅನಿಲ್ ಆನಂದ್ ಹೇಳಿದ್ದಾರೆ.



ಅಂದು ಮಧ್ಯಾಹ್ನ 3.15ರಿಂದ 3.50 ರೊಳಗೆ ಸಲ್ಲುವ ಶ್ರವಣನಕ್ಷತ್ರ ಕುಂಭ ಲಗ್ನದಲ್ಲಿ ಶ್ರೀ ಕಾಳಿಕಾಂಬ ದೇವಾಲಯದ ಬಳಿಯ ಗಜೇಂದ್ರಮೋಕ್ಷ ಕೊಳದ ಆವರಣದಲ್ಲಿರುವ ಬನ್ನಿಮರಕ್ಕೆ ಶಾಸಕ ಪಿ.ರವಿಕುಮಾರ್ ಸಾಂಪ್ರದಾಯಿಕವಾಗಿ ಪೂಜೆ ಸಲ್ಲಿಸುವರು. ನಂತರ ಬೆಳ್ಳಿ ರಥದಲ್ಲಿ ಪ್ರತಿಷ್ಠಾಪಿಸಿರುವ ಶ್ರೀ ಚಾಮುಂಡೇಶ್ವರಿ ವಿಗ್ರಹಕ್ಕೆ ಡಾ.ಅನಿಲ್ ಆನಂದ್ ಪೂಜೆ ನೆರವೇರಿಸಿ ಮೆರವಣಿಗೆಗೆ ವಿದ್ಯುಕ್ತ ಚಾಲನೆ ನೀಡಲಾಗುವುದು ಎಂದು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಶ್ರೀ ಚಾಮುಂಡೇಶ್ವರಿ ದೇವಿ ಮೆರವಣಿಗೆಗೆ ಆಕರ್ಷಕ ಜಾನಪದ ಕಲಾತಂಡಗಳು ಸಾಥ್ ನೀಡಲಿವೆ. ನಾದಸ್ವರ, ಕೇರಳ ಚಂಡೆ, ಭದ್ರಕಾಳಿ ವೀರಗಾಸೆ, ಡೊಳ್ಳು ಕುಣಿತ, ಪೂಜಾ ಕುಣಿತ, ಚಿಲಿಪಿಲಿ ಗೊಂಬೆ, ನಾಗರಹೊಳೆ ಜೇನು ಕುರುಬರ ಕುಣಿತ, ಸೋಮನ ಕುಣಿತ, ವೀರಮಕ್ಕಳ ಕುಣಿತ, ಬೆಂಕಿ ಭರಾಟೆ, ದೊಣ್ಣೆವರಸೆ, ಕೋಳಿಗೊಂಬೆ, ಹುಲಿ ವೇಷ, ಗೊರವರ ಕುಣಿತ, ಬಂಡೂರು ಕುರಿ, ಶ್ರೀರಂಗಪಟ್ಟಣ ಡ್ರಮ್ಸ್, ತಮಟೆ, ನಗಾರಿ, ಕಂಸಾಳೆ ಸೇರಿದಂತೆ ಹಲವು ಜಾನಪದ ಕಲಾತಂಡಗಳು ಮೆರವಣಿಗೆಯಲ್ಲಿ ಭಾಗವಹಿಸಲಿವೆ.

ಮೆರವಣಿಗೆಯು ಶ್ರೀ ಕಾಳಿಕಾಂಬ ದೇವಾಲಯದ ಆವರಣದಿಂದ ಹೊರಟು ಎಸ್.ಡಿ. ಜಯರಾಂ ವೃತ್ತದ ಬಳಿ ಬೆಂಗಳೂರು–ಮೈಸೂರು ಹೆದ್ದಾರಿ ಸೇರಿ ಅಲ್ಲಿಂದ ಮಹಾವೀರ ವೃತ್ತ ತಲುಪಲಿದೆ. ನಂತರ ವಿ.ವಿ. ರಸ್ತೆ ಮಾರ್ಗವಾಗಿ ಹೊಸಹಳ್ಳಿ ವೃತ್ತಕ್ಕೆ ಆಗಮಿಸಲಿದೆ. ಬಳಿಕ ನೂರಡಿ ರಸ್ತೆ ಮಾರ್ಗವಾಗಿ ತೆರಳಿ ಬನ್ನೂರು ರಸ್ತೆ ಮೂಲಕ ಶ್ರೀ ಚಾಮುಂಡೇಶ್ವರಿ ದೇವಾಲಯದ ಬಳಿ ಮೆರವಣಿಗೆ ಅಂತ್ಯಗೊಳ್ಳಲಿದೆ ಎಂದಿದ್ದಾರೆ.

ಮಂಡ್ಯ ಯೂತ್ ಗ್ರೂಪ್ ಪದಾಧಿಕಾರಿಗಳು ಶ್ವೇತ ವಸ್ತ್ರದಲ್ಲಿ ಕಾಣಿಸಿಕೊಳ್ಳಲಿದ್ದಾರೆ. ಮೆರವಣಿಗೆಯುದ್ದಕ್ಕೂ ಜೊತೆಯಾಗಿ ನಿಂತು ಸಾರ್ವಜನಿಕ ಸಂಚಾರಕ್ಕೆ ತೊಂದರೆಯಾಗದ ರೀತಿಯಲ್ಲಿ ಮುನ್ನಡೆಸಲಿದ್ದಾರೆ ಎಂದು ತಿಳಿಸಿದ್ದಾರೆ.

ಅ.16ರಂದು ಕಾವೇರಿ ಐದನೇ ಹಂತದ ಕುಡಿಯುವ ನೀರಿನ ಯೋಜನೆ ಲೋಕಾರ್ಪಣೆ

ಮಂಡ್ಯ, ಅ.10–ಮಳವಳ್ಳಿ ತಾಲೂಕಿನ ತೊರೆಕಾಡನಹಳ್ಳಿ (ಟಿ.ಕೆ.ಹಳ್ಳಿ)ಯಲ್ಲಿ ಅ.16ರಂದು ಬೆಳಗ್ಗೆ 10.30ಕ್ಕೆ ಕಾವೇರಿ ಐದನೇ ಹಂತದ ಕುಡಿಯುವ ನೀರಿನ ಯೋಜನೆ ಲೋಕಾರ್ಪಣೆ ಸಮಾರಂಭವನ್ನು ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಆವರಣದಲ್ಲಿ ಹಮ್ಮಿಕೊಳ್ಳಲಾಗಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಬೆಂಗಳೂರು ನಗರಾಭಿವೃದ್ಧಿ ಸಚಿವರೂ ಆದ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಲೋಕಾರ್ಪಣೆ ಮಾಡಲಿದ್ದು, ವಿಶೇಷ ಆಹ್ವಾನಿತರಾಗಿ ಕೇಂದ್ರ ಸಚಿವರಾದ ನಿರ್ಮಲಾ ಸೀತಾರಾಮನ್, ಹೆಚ್.ಡಿ.ಕುಮಾರಸ್ವಾಮಿ, ಶೋಭಾ ಕರಂದ್ಲಾಜೆ, ವಿ.ಸೋಮಣ್ಣ ರವರು ಭಾಗವಹಿಸಲಿದ್ದಾರೆ. ಮಳವಳ್ಳಿ ಶಾಸಕ ಪಿ.ಎಂ.ನರೇಂದ್ರಸ್ವಾಮಿ ಅಧ್ಯಕ್ಷತೆ ವಹಿಸಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ, ಸಚಿವರಾದ ರಾಮಲಿಂಗಾರೆಡ್ಡಿ, ಕೆ.ಜೆ.ಜಾರ್ಜ್, ದಿನೇಶ್ ಗುಂಡೂರಾವ್, ಕೃಷ್ಣ ಭೈರೇಗೌಡ, ಜಮೀರ್ ಅಹ್ಮದ್‌ಖಾನ್, ಭೈರತಿ ಸುರೇಶ್, ಮಂಡ್ಯ, ಬೆಂಗಳೂರು, ರಾಮನಗರ ಜಿಲ್ಲೆಯ ಶಾಸಕರು, ವಿಧಾನಪರಿಷತ್ ಸದಸ್ಯರು, ಸಂಸದರು ಹಾಗೂ ಅಧಿಕಾರಿ ವರ್ಗ ಉಪಸ್ಥಿತರಿರಲಿದ್ದಾರೆ.

ಬೆಂಗಳೂರಿನ ಸುಮಾರು 50 ಲಕ್ಷ ಫಲಾನುಭವಿಗಳು ಐದನೇ ಹಂತದ ಕುಡಿಯುವ ನೀರಿನ ಯೋಜನೆಯ ಸದುಪಯೋಗ ಪಡೆದುಕೊಳ್ಳಲಿದ್ದು, 4 ಲಕ್ಷ ವಿಸ್ತೀರ್ಣದ ಸಂಪರ್ಕವನ್ನು ಈ ಯೋಜನೆ ಹೊಂದಿದೆ. ಕಾಮಗಾರಿಗೆ ಈವರೆಗೆ 4336 ಕೋಟಿ ರೂ. ವೆಚ್ಚ ತಗುಲಿದ್ದು, 775 ಎಂಎಲ್‌ಡಿ ಹೆಚ್ಚುವರಿ ನೀರು ಪೂರೈಕೆ ಬೆಂಗಳೂರು ನಗರಕ್ಕೆ ಸಿಗಲಿದೆ. ಬಿಬಿಎಂಪಿ ವ್ಯಾಪ್ತಿಯ 110 ಹಳ್ಳಿಗಳಿಗೆ ನೀರು ಸರಬರಾಜಾಗಲಿದ್ದು, ಯಲಹಂಕ, ಯಶವಂತಪುರ, ಬೆಂಗಳೂರು ದಕ್ಷಿಣ, ಬ್ಯಾಟರಾಯ ನಪುರ, ಬೊಮ್ಮನಹಳ್ಳಿ ವಲಯದ ಮನೆ ಮನೆಗೂ ಕಾವೇರಿ ನೀರು ಪೂರೈಕೆಯಾಗಲಿದೆ ಎಂದು ಪ್ರಕಟಣೆ ತಿಳಿಸಿದೆ.

ನಿರಾಶ್ರಿತರು ಕಾನೂನಿನ ಆಶ್ರಯ ಪಡೆಯಬಹುದು

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಸದಸ್ಯ ಕಾರ್ಯದರ್ಶಿ ಈಶ್ವರ್ ಮಾಹಿತಿ

ಚಾಮರಾಜನಗರ, ಅ.10–ನಿರಾಶ್ರಿತರಿಗೆ ರಾಜ್ಯ ಸರ್ಕಾರದ ಅನುದಾನದಲ್ಲಿ ಎನ್‌ಜಿಓಗಳ ಮುಖಾಂತರ ವಸತಿ ಸೌಕರ್ಯ ನೀಡಲಾಗುತ್ತಿದ್ದು, ನಿರಾಶ್ರಿತರು ಕಾನೂನಿನ ಆಶ್ರಯವನ್ನೂ ಪಡೆಯಬಹುದು ಎಂದು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಸದಸ್ಯ ಕಾರ್ಯದರ್ಶಿ ಈಶ್ವರ್ ತಿಳಿಸಿದರು.



ಚಾಮರಾಜನಗರದ ನಿರಾಶ್ರಿತರ ಕೇಂದ್ರದಲ್ಲಿ ನಡೆದ ಶಿಬಿರದಲ್ಲಿ ಆರೋಗ್ಯ ತಪಾಸಣೆ ನಡೆಸಲಾಯಿತು.

ನಗರದ ನ್ಯಾಯಾಲಯ ರಸ್ತೆಯ ನಿರಾಶ್ರಿತರ ಕೇಂದ್ರದಲ್ಲಿ ಗುರುವಾರ ನಿರಾಶ್ರಿತರಿಗೆ ಆರೋಗ್ಯ ತಪಾಸಣೆ ಶಿಬಿರಕ್ಕೆ ಗಿಡ ನೆಡುವ ಮೂಲಕ ಚಾಲನೆ ನೀಡಿ ಮಾತನಾಡಿದ ಅವರು, ತಂದೆ–ತಾಯಿಗೆ ವಯಸ್ಸಾಗುತ್ತಿದ್ದಂತೆ ಕೆಲವರು ಮನೆಯಿಂದ ಹೊರಹಾಕುವ ಸಂಗತಿಗಳನ್ನು ನೋಡುತ್ತಿದ್ದೇವೆ. ಆಸ್ತಿ ಮತ್ತು ಹಣಗಳನ್ನು ತಂದೆ–ತಾಯಿಂದ ಪಡೆದು ಮಕ್ಕಳು ಹೊರ ಹಾಕಿದರೆ ಅಂತಹ ಮಕ್ಕಳ ವಿರುದ್ಧ ದಾವೆ ಹಾಕಬಹುದು. ಮನೆಯ ಹಿರಿಯರನ್ನು ನೋಡಿಕೊಳ್ಳುವುದು ಮಕ್ಕಳ ಜವಾಬ್ದಾರಿಯಾಗಿದೆ ಎಂದು ಎಚ್ಚರಿಸಿದರು.

ಇತ್ತೀಚಿನ ದಿನಗಳಲ್ಲಿ ವಿದ್ಯಾವಂತ ಮಕ್ಕಳು ಪೋಷಕರನ್ನು ವೃದ್ಧಾಶ್ರಮ, ಅನಾಥಶ್ರಮಗಳಿಗೆ ಬಿಡುತ್ತಿರುವುದು ಹೆಚ್ಚಾಗಿದೆ. ಕೆಲವರು ರಸ್ತೆಬದಿಯಲ್ಲಿ ಮಲಗುವುದು, ಆಹಾರವಿಲ್ಲದೆ ಎಷ್ಟೋ ಜನ ಪ್ರಾಣವನ್ನೇ ಕಳೆದುಕೊಂಡಿದ್ದಾರೆ. ಸಾರ್ವಜನಿಕರ ಗಮನಕ್ಕೆ ಬಂದರೆ ಅಂತಹ ವ್ಯಕ್ತಿಗಳನ್ನು ನಿರಾಶ್ರಿತರ ಕೇಂದ್ರಕ್ಕೆ ಕರೆತಂದರೆ ಅವರಿಗೆ ಸೌಕರ್ಯ ಸಿಗಲಿದೆ ಎಂದರು.

ಕೌಶಲಾಭಿವೃದ್ಧಿ ನಿಗಮದ ಮ್ಯಾನೇಜರ್ ಡಾ.ಪುಟ್ಟಸ್ವಾಮಿ ಮಾತನಾಡಿ, ಜಿಲ್ಲಾ ಕೌಶಲಾಭಿವೃದ್ಧಿ ಇಲಾಖೆ ಮತ್ತು ನಗರಸಭೆ ರಸ್ತೆಬದಿ ನಿರಾಶ್ರಿತರಿಗೆ ವಸತಿ ಸೌಕರ್ಯ, ಊಟದ ವ್ಯವಸ್ಥೆ, ಸೋಪು ಹಾಗೂ ಇನ್ನಿತರೆ ವಸ್ತುಗಳನ್ನು ಸರ್ಕಾರದ ವತಿಯಿಂದ ನೀಡಲಾಗುತ್ತಿದೆ. ನಿರಾಶ್ರಿತರು ಬೆಳಗ್ಗೆ ಹೊರಗಡೆ ಹೋಗಿ ಸಂಜೆ ಕೇಂದ್ರಕ್ಕೆ ಬರಬಹುದು. ಅವರಿಗೆ ಪ್ರತಿತಿಂಗಳು ಆರೋಗ್ಯ ತಪಾಸಣೆ ನಡೆಸಲಾಗುವುದು ಎಂದು ತಿಳಿಸಿದರು.

ವೈದ್ಯಾಧಿಕಾರಿ ಡಾ.ರಿಯಾ ಮಾತನಾಡಿ, ಎಲ್ಲರೂ ಪ್ರತಿ 3 ತಿಂಗಳಿಗೊಮ್ಮೆ ಆರೋಗ್ಯ ತಪಾಸಣೆ ಮಾಡಿಸಿಕೊಳ್ಳುವುದು ಉತ್ತಮ. ಇದರಿಂದ ಆರೋಗ್ಯದ ಏರು ಪೇರುಗಳನ್ನು ತಿಳಿಯಬಹುದು ಎಂದರು.

ಕಾರ್ಯಕ್ರಮದಲ್ಲಿ ನಗರಸಭೆ ಯೋಜನಾಧಿಕಾರಿ ವೆಂಕಟನಾಯಕ್, ಗ್ರೀನ್ ಗ್ರಾಮೀಣಾಭಿವೃದ್ಧಿ ಸಂಸ್ಥೆ ಅಧ್ಯಕ್ಷ ಪ್ರಭುಸ್ವಾಮಿ, ಕಾರ್ಯದರ್ಶಿ ಮಹದೇವಸ್ವಾಮಿ, ನಿರಾಶಿತರ ಆಶ್ರಮದ ಕೋಮಲ, ಶಿವಕುಮಾರ್, ನಂದನ್, ಶುಶ್ರೂಷಕರಾದ ಶಿವಮ್ಮ, ದಿವ್ಯಬೇಬಿ ಹಾಜರಿದ್ದರು.

ಗ್ರಾಪಂ ನೌಕರರ ಮುಷ್ಕರ ತಾತ್ಕಾಲಿಕ ಸ್ಥಗಿತ

ಚಾಮರಾಜನಗರ, ಅ.10–ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಅಧಿಕಾರಿಗಳು, ನೌಕರರು ಹಾಗೂ ಎಲ್ಲಾ ವೃಂದ ಸಂಘಗಳು, ಗ್ರಾಪಂ ಸದಸ್ಯರ ಒಕ್ಕೂಟದ ನೇತೃತ್ವದಲ್ಲಿ ಬೇಡಿಕೆ ಈಡೇರಿಸುವಂತೆ ಒತ್ತಾಯಿಸಿ ನಗರದಲ್ಲಿ ನಡೆಸುತ್ತಿರುವ ಅನಿರ್ಧಿಷ್ಟಾವಧಿ ಮುಷ್ಕರವನ್ನು ಗುರುವಾರ ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಯಿತು.



ಚಾಮರಾಜನಗರದಲ್ಲಿ ನಡೆಯುತ್ತಿದ್ದ ಗ್ರಾಪಂ ನೌಕರರ ಧರಣಿ ನಿರತರನ್ನು ಭೇಟಿ ಮಾಡಿದ ಶಾಸಕ ಎ.ಆರ್.ಕೃಷ್ಣಮೂರ್ತಿ ಸಮಸ್ಯೆ ಆಲಿಸಿದರು.

ನಗರದ ಜಿಲ್ಲಾಡಳಿತ ಭವನದ ಮುಂಭಾಗದ ಪಿಡಿಓ ಹಾಗೂ ನೌಕರರು ಕಳೆದೊಂದು ವಾರದಿಂದ ರಾಜ್ಯ ಸರ್ಕಾರದ ವಿರುದ್ಧ ನಡೆಸುತ್ತಿರುವ ಧರಣಿ ನಿಲ್ಲಿಸಿದ್ದು, ಮುಂದೆ ರಾಜ್ಯ ಸಂಘ ಮುಷ್ಕರ ನಡೆಸುವ ಸೂಚನೆ ನೀಡಿದರೆ ಅ.14ರಿಂದ ಮತ್ತೆ ಮುಷ್ಕರ ಪ್ರಾರಂಭಿಸಲಾಗುವುದು ಎಂದು ಪ್ರತಿಭಟನಾಕಾರರು ತಿಳಿಸಿದರು.

ಎನ್.ಮಹೇಶ್ ಬೆಂಬಲ: ಪ್ರತಿಭಟನಾ ಸ್ಥಳಕ್ಕೆ ಮಾಜಿ ಸಚಿವ ಎನ್.ಮಹೇಶ್ ಭೇಟಿ ನೀಡಿ, ನೌಕರರ ಬೇಡಿಕೆ ಬಗ್ಗೆ ಚರ್ಚಿಸಿ, ಪ್ರತಿಭಟನೆಗೆ ಬೆಂಬಲ ಸೂಚಿಸಿದರು. ಶಾಸಕ ಎ.ಆರ್.ಕೃಷ್ಣಮೂರ್ತಿ ಧರಣಿ ನಿರತರನ್ನು ಭೇಟಿ, ಮಾಡಿ ಅವರ ಸಮಸ್ಯೆ ಆಲಿಸಿದರು.

ಪ್ರತಿಭಟನೆಯಲ್ಲಿ ಪಿಡಿಓ ನೌಕರರ ಸಂಘದ ಅಧ್ಯಕ್ಷ ಡಿ.ಕುಮಾರಸ್ವಾಮಿ, ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಅಧ್ಯಕ್ಷ ಹೊಂಗನೂರು ಚಂದ್ರು, ತಾಪಂ ಮಾಜಿ ಅಧ್ಯಕ್ಷ ಮಹದೇವ್, ಕೇಶವಮೂರ್ತಿ, ಸಂಘದ ಗೌರವಾಧ್ಯಕ್ಷ ಎನ್.ಜಿ. ಮಾದಪ್ಪ, ಬಿಜೆಪಿ ಮುಖಂಡ ಸೋಮಣ್ಣ ಉಪ್ಪಾರ್, ಭಾರತೀಯ ವಿದ್ಯಾರ್ಥಿ ಸಂಘದ ಸಂಯೋಜಕ ಪರ್ವತ್ ರಾಜ್ ಇತರರು ಇದ್ದರು.

ಸಂಸ್ಕರಣ ಘಟಕ ಆರಂಭಕ್ಕೆ ವಿರೋಧ...



ಗುಂಡ್ಲುಪೇಟೆ ತಾಲೂಕಿನ ಗುರುವಿನಪುರದಲ್ಲಿ ಚೆಂಡು ಹೂ ಸಂಸ್ಕರಣ ಘಟಕ ಆರಂಭಿಸದಂತೆ ಒತ್ತಾಯಿಸಿ ರಾಜ್ಯ ರೈತ ಸಂಘಟನೆಗಳ ಒಕ್ಕೂಟ ಹಾಗೂ ಕಬ್ಬು ಬೆಳೆಗಾರರ ಸಂಘದ ಕಾರ್ಯಕರ್ತರು ಚಾಮರಾಜನಗರದಲ್ಲಿ ಪ್ರತಿಭಟನೆ ನಡೆಸಿದರು. ಕಬ್ಬು ಬೆಳೆಗಾರರ ಸಂಘದ ರಾಜ್ಯಾಧ್ಯಕ್ಷ ಹಳ್ಳಿಕೆರೆಹುಂಡಿ ಭಾಗ್ಯರಾಜ್, ಉಪಾಧ್ಯಕ್ಷ ಕೆರೆಹುಂಡಿ ರಾಜಣ್ಣ, ಪ್ರಧಾನ ಕಾರ್ಯದರ್ಶಿ ಮಲಿಯೂರು ಹರ್ಷ, ಜಿಲ್ಲಾಧ್ಯಕ್ಷ ಹಾಲಿನ ನಾಗರಾಜ್, ಉಪಾಧ್ಯಕ್ಷರಾದ ಮಲಿಯೂರು ಪ್ರವೀಣ್, ಅರಳಿಕಟ್ಟೆ ಕುಮಾರ್, ಬಾಬು, ಮಂಜುನಾಥ್ ಭಾಗವಹಿಸಿದ್ದರು.

ಸುಮಾ ಮಹೇಶ್ ನಿಧನ

ಚಾಮರಾಜನಗರ, ಅ.10–ತಾಲೂಕಿನ ಸಂತೇಮರಹಳ್ಳಿ ಹೋಬಳಿ ಹೆಗ್ಗವಾಡಿಪುರ ಗ್ರಾಮದ ನಿವಾಸಿ ಹಾಗೂ ರಾಜ್ಯ ರೈತ ಸಂಘದ ಮುಖಂಡ ಹೆಚ್.ಸಿ.ಮಹೇಶ್ ಕುಮಾರ್ ಅವರ ಪತ್ನಿ ಸುಮಾ (55) ಅನಾರೋಗ್ಯದಿಂದ ಗುರುವಾರ ನಿಧನರಾದರು. ಮೃತರಿಗೆ ಪತಿ, ಪುತ್ರರಾದ ಹೆಚ್.ಎಂ. ಅಜೇಯ್, ಅರ್ಜುನ್ ಇದ್ದಾರೆ. ಮೃತರ ತೋಟದಲ್ಲಿ ಅಂತ್ಯಕ್ರಿಯೆ ನಡೆಯಿತು.



ಬಿಳಿಗಿರಿರಂಗನಾಥ ದೇಗುಲದ ಹುಂಡಿಯಲ್ಲಿ 31.15 ಲಕ್ಷ ಸಂಗ್ರಹ



ಬಿಳಿಗಿರಿರಂಗನಬೆಟ್ಟದ ದೇಗುಲದ ಹುಂಡಿ ಹಣ ಎಣಿಕೆ ಕಾರ್ಯ.

ಯಳಂದೂರು, ಅ.10–ತಾಲೂಕಿನ ಪ್ರಸಿದ್ಧ ಪ್ರವಾಸಿ ತಾಣ ಬಿಳಿಗಿರಿರಂಗನಬೆಟ್ಟದ ದೇಗುಲದ ಹುಂಡಿಯಲ್ಲಿ 31,15,367 ರೂ. ಸಂಗ್ರಹವಾಗಿದೆ.

ಕಂದಾಯ ಇಲಾಖೆ, ದೇಗುಲದ ಸಿಬ್ಬಂದಿ ಬೆಟ್ಟದ ಅಲಮೇಲು ಅಮ್ಮನವರ ದೇಗುಲ ಮುಂಭಾಗದ ಆವರಣದಲ್ಲಿ ಹುಂಡಿ ಹಣ ಎಣಿಕೆ ಕಾರ್ಯ ನಡೆಸಿದರು. ಮಲೇಶಿಯಾ 1, ಯುರೋ 10 ಡಾಲರ್ ಸೇರಿದಂತೆ ಒಟ್ಟು 31,15,367 ರೂ. ಹುಂಡಿಯಲ್ಲಿ ಸಂಗ್ರಹವಾಗಿವೆ ಎಂದು ದೇಗುಲದ ಕಾರ್ಯನಿರ್ವಾಹಕಾಧಿಕಾರಿ ಮೋಹನ್ ಕುಮಾರ್ ತಿಳಿಸಿದರು.

ತಹಸೀಲ್ದಾರ್ ಜಯಪ್ರಕಾಶ್, ಉಪತಹಸೀಲ್ದಾರ್ ಮಾದೇಶ, ಕರ್ನಾಟಕ ಗ್ರಾಮೀಣ ಬ್ಯಾಂಕ್ ವ್ಯವಸ್ಥಾಪಕ ಪ್ರಭುಸ್ವಾಮಿ, ಪಾರುಪತ್ತೇದಾರ ರಾಜು, ಸರೋಜ, ಪೊಲೀಸ್ ಸಿಬ್ಬಂದಿ ಗುರುಸಿದ್ದಯ್ಯ, ಮತ್ತಿತರರು ಇದ್ದರು.



ಪ್ರಿಯಾಂಕಾ ಉಪೇಂದ್ರ ಉಗ್ರಾವತಾರ

ನಟಿ ಪ್ರಿಯಾಂಕಾ ಉಪೇಂದ್ರ ಅವರು ದುರುಳರನ್ನು ಮಟ್ಟ ಹಾಕುವ ದುರ್ಗಿಯ ಅವತಾರದಲ್ಲಿ ಕಾಣಿಸಿಕೊಂಡಿರುವ ಚಿತ್ರ ಉಗ್ರಾವತಾರ. ಎಸ್.ಜಿ.ಸತೀಶ್ ಅವರ ನಿರ್ಮಾಣದ ಈ ಚಿತ್ರಕ್ಕೆ ಗುರುಮೂರ್ತಿ ಕಥೆ, ಚಿತ್ರಕಥೆ ಬರೆದು ಆಕ್ಷನ್‌ಕಟ್ ಹೇಳಿದ್ದಾರೆ. ಇತ್ತೀಚೆಗೆ ಈ ಚಿತ್ರದ ಟ್ರೇಲರನ್ನು ನಟ ಉಪೇಂದ್ರ ಬಿಡುಗಡೆಗೊಳಿಸಿದರು. ಟ್ರೈಲರ್‌ನಲ್ಲಿ ಪತ್ನಿಯ ಉಗ್ರಾವತಾರ ನೋಡಿದ ನಂತರ ಮಾತನಾಡಿದ ಉಪೇಂದ್ರ, ಟ್ರೇಲರ್‌ನಲ್ಲಿ ನಿರ್ದೇಶಕರ ಶ್ರಮ ಕಾಣಿಸುತ್ತದೆ. ಭವಿಷ್ಯದಲ್ಲಿ ಸ್ಟಾರ್ ನಿರ್ದೇಶಕರಾಗುವ ಎಲ್ಲಾ ಲಕ್ಷಣಗಳು ಅದರಲ್ಲಿ ಕಾಣಿಸುತ್ತಿದೆ. ನನ್ನ ಪತ್ನಿಯ ಉಗ್ರಾವತಾರವನ್ನು ಮನೆಯಲ್ಲಿ ನೋಡಿದ್ದೇನೆ. ಆದರೆ ಪೊಲೀಸರು ಗ್ಲಾಮರಸ್ ಆಗಿ ಕಾಣಿಸಬಾರದು. ಅದೇ ನನ್ನ ಆಕ್ಷೇಪಣೆ. ಪೊಲೀಸರು ಗ್ಲಾಮರಸ್ ಆದರೆ, ರೌಡಿಗಳನ್ನು ಸದೆಬಡಿಯುವುದಾದರೂ ಹೇಗೆ ಎಂದು ಹಾಸ್ಯಮಯವಾಗಿ ಹೇಳಿದರು. ಮಾತು ಮುಂದುವರೆಸುತ್ತಾ, ಜನರ ಆಶೀರ್ವಾದ ಇದ್ದರೆ ನೂರಾರು ಹೊಸ ಕಲಾವಿದರು ಹುಟ್ಟಿಕೊಳ್ಳುತ್ತಾರೆ. ಹತ್ತಾರು ಕುಟುಂಬಗಳ ದೀಪ ಬೆಳಗುತ್ತೆ. ಸಣ್ಣಪುಟ್ಟ ತಪ್ಪುಗಳು ಇದ್ದರೂ, ಅದನ್ನು ಕ್ಷಮಿಸುವ ದೊಡ್ಡಗುಣ ನಮ್ಮ ಕನ್ನಡಿಗರಲ್ಲಿದೆ. ಸಿನಿಮಾ ನೋಡದೆ ಹಾಗಿದೆ, ಹೀಗಿದೆ ಎಂದು ಸುದ್ದಿ ಹಬ್ಬಿಸಬೇಡಿ ಎಂದು ಮನವಿ ಮಾಡಿದರು. ನಾಯಕಿ ಪ್ರಿಯಾಂಕ ಉಪೇಂದ್ರ ಮಾತನಾಡಿ, ಈ ಪಾತ್ರವನ್ನು ನನ್ನಿಂದ ಮಾಡಲು ಸಾಧ್ಯನಾ ಎಂಬ ಪ್ರಶ್ನೆ ಕಾಡಿತು. ಭಾರತದಲ್ಲಿ ಹೆಣ್ಣು ಮಕ್ಕಳ ಮೇಲೆ ಶೋಷಣೆ ನಡೆಯುತ್ತಲೆ ಇದೆ. ಸ್ವಯಂರಕ್ಷಣೆ, ಸುರಕ್ಷ ಆ್ಯಪ್, ಪೊಲೀಸರಿಗೂ ಗೌರವ ಕೊಡಿ. ಅವರು ಸಮಾಜಕ್ಕೆ ರಕ್ಷಣೆ ಜತೆಗೆ ಸಹಾಯ ಮಾಡುತ್ತಾರೆ ಎಂಬುದನ್ನು ಹೇಳಲಾಗಿದೆ ಎಂದರು.

ಕಥೆ ಕೇಳಿ ಪಾತ್ರ ಮಾಡುತ್ತೇನೆಂದು ಹೇಳಿದಾಗಿನಿಂದ ಇಲ್ಲಿಯವರೆಗೂ ಪ್ರಿಯಾಂಕ ಮೇಡಂ ಅವರು ನಮಗೆ ಪ್ರೋತ್ಸಾಹಿಸುತ್ತಲೇ ಬಂದಿದ್ದಾರೆ. ಹೆಣ್ಣಿಗೆ ಹೇಗೆ ಗೌರವ ಕೊಡಬೇಕು. ತಮ್ಮ ತಾಯಿ, ಅಕ್ಕ, ತಂಗಿಯನ್ನು ನೋಡುವಂತೆ, ಬೇರೆ ಹೆಣ್ಣು ಮಕ್ಕಳನ್ನೂ ಕಾಣಬೇಕು. ಸಮಾಜದಲ್ಲಿ ನಡೆಯುತ್ತಿರುವ ಒಂದಷ್ಟು ನೈಜ ಘಟನೆಗಳನ್ನು ಚಿತ್ರದಲ್ಲಿ ಬಳಸಲಾಗಿದೆ. ಮೇಡಂ ಈ ಚಿತ್ರದಿಂದ ಆಕ್ಷನ್ ಕ್ವೀನ್ ಆಗಿದ್ದಾರೆ. ಚಿತ್ರದ ಐದು ಫೈಟ್‌ಗಳೂ ವಿಭಿನ್ನವಾಗಿವೆ. ಉಗ್ರಾವತಾರ ನಾಲ್ಕು ಭಾಷೆಗಳಲ್ಲಿ ರಿಲೀಸಾಗುತ್ತಿದೆ, ಈಗಾಗಲೇ ಡಬ್ಬಿಂಗ್ ಮುಗಿದಿದೆ ಎಂದು ನಿರ್ದೇಶಕ ಗುರುಮೂರ್ತಿ ಹೇಳಿದರು.



ಸಂಬಂಧಗಳ ಸುತ್ತ ಸಂತೋಷ ಸಂಗೀತ...

ಗಂಡ, ಹೆಂಡತಿ ಇಬ್ಬರೂ ಒಂದೇ ಉದ್ಯೋಗ ಮಾಡುವಾಗ ಏನೇನೆಲ್ಲ ಸಮಸ್ಯೆಗಳನ್ನು ಎದುರಿಸಬೇಕಾಗುತ್ತೆ ಎಂಬುದನ್ನು ನಿರ್ದೇಶಕ ಸಿದ್ದು ಅವರು ಸಂತೋಷ ಸಂಗೀತ. ಎಂಬ ಚಿತ್ರದ ಮೂಲಕ ಹೇಳಹೊರಟಿದ್ದಾರೆ. ಆ ಚಿತ್ರದ ಟ್ರೈಲರ್ ಇತ್ತೀಚೆಗೆ ಬಿಡುಗಡೆಯಾಯಿತು. ನಿಜ ಜೀವನದಲ್ಲಿ ಪತಿ ಪತ್ನಿಯರಾಗಿರುವ ಅರ್ನವ್ ವಿನ್ಯಾಸ್ ಹಾಗೂ ರಾಣಿವರದ್ ಈ ಚಿತ್ರದಲ್ಲೂ ಸಹ ಅದೇ ಪಾತ್ರಗಳನ್ನು ನಿರ್ವಹಿಸಿರುವುದು ಈ ಚಿತ್ರದ ವಿಶೇಷ.

ಎಂ.ಸಿ.ಎ. ಪದವೀಧರರಾದ ಸಿದ್ದು ಎಸ್. ಅವರಿಗೆ ಮೊದಲಿಂದಲೂ ಸಿನಿಮಾ ನಿರ್ದೇಶನದ ಮೇಲೆ ಹೆಚ್ಚು ಆಸಕ್ತಿ. ವೇದಿಕೆಯಲ್ಲಿ ಚಿತ್ರದ ಕುರಿತಂತೆ ಮಾತನಾಡುತ್ತ, ಲಾಕ್‌ಡೌನ್ ಬಿಡುವಿನ ಸಮಯದಲ್ಲಿ ಬರೆದ ಕಥೆಯಿದು, ಸಂತೋಷ, ಸಂಗೀತ ನಾಯಕ, ನಾಯಕಿಯ ಹೆಸರು. ಜೀವನದಲ್ಲಿ ಗಂಡ ಹೆಂಡತಿ ನಡುವೆ ಹೊಂದಾಣಿಕೆ ಇಲ್ಲದೆ ಹೋದರೆ ಏನಾಗುತ್ತ ಎಂಬುದು ಚಿತ್ರದಲ್ಲಿದೆ. ಫ್ಯಾಮಿಲಿ ಎಂಟರ್‌ಟೈನರ್ ಜೊತೆಗೆ ಕಮರ್ಷಿಯಲ್ ಎಲಿಮೆಂಟ್ಸ್ ಕೂಡ ಚಿತ್ರದಲ್ಲಿದ್ದು, ಇದನ್ನು ಕಾಲೇಜ್ ಸ್ಟೋರಿ, ಟ್ವಿಸ್ಟ್ ಲವ್‌ಸ್ಟೋರಿ ಅಂತಲೂ ಹೇಳಬಹುದು ಎಂದರು. ಡಿಸೆಂಬರ್ ಒಳಗೆ ಚಿತ್ರವನ್ನು ತೆರೆಗೆ ತರುವುದಾಗಿಯೂ ಅವರು ಹೇಳಿದರು. ನಾಯಕ ಅರ್ನವ್ ವಿನ್ಯಾಸ್ ಮಾತನಾಡುತ್ತ, 2017ರಲ್ಲಿ ರಿಲೀಸಾದ ಹೊಂಬಣ್ಣ ಚಿತ್ರದ ಮೂಲಕ ಇಂಡಸ್ಟ್ರಿಗೆ ಬಂದೆ. ಪ್ರೇಮಂ ಎಂಬ ಚಿತ್ರದ ನಂತರ ನಾನು ಅಭಿನಯಿಸುತ್ತಿರುವ ಮತ್ತೊಂದು ಚಿತ್ರವಿದು. ಒಬ್ಬ ಉದ್ಯಮಿಯಾಗಿ ಚಿತ್ರದಲ್ಲಿ ಕಾಣಿಸಿಕೊಂಡಿದ್ದೇನೆ. ಕುಟುಂಬದ ಒಳಗೇ ನಡೆಯೋ ಕಥೆಯಿದು ಎಂದು ಹೇಳಿದರು.

ನಾಯಕಿ ರಾಣಿ ವರದ್ ಮಾತನಾಡುತ್ತ, ಈ ವರ್ಷ ನನಗೆ ತುಂಬಾ ಸ್ಪೆಷಲ್, ಏಕೆಂದರೆ ನಾನು ಟ್ವಿನ್ಸ್‌ಗೆ ತಾಯಿಯಾಗುತ್ತಿದ್ದೇನೆ. ಅಲ್ಲದೆ ನನ್ನ ಮೊದಲ ಚಿತ್ರವೂ ರಿಲೀಸಾಗುತ್ತಿದೆ, ಒಂದೇ ಉದ್ಯಮದಲ್ಲಿರುವ ಪತಿ, ಪತ್ನಿ ನಡುವೆ ಏನೆಲ್ಲ ಸಮಸ್ಯೆ ತಲೆದೋರುತ್ತದೆ ಎಂದು ಹೇಳೋ ಕಥೆಯಿದು, ಆಕೆ ತನ್ನ ಕನಸನ್ನು ನನಸು ಮಾಡಿಕೊಳ್ಳಲು ಹೊರಟಾಗ ಯಾವೆಲ್ಲಾ ಸವಾಲುಗಳು ಎದುರಾಗುತ್ತದೆ ಎಂದು ನನ್ನ ಪಾತ್ರದ ಮೂಲಕ ತೋರಿಸಲಾಗಿದೆ ಎಂದು ಹೇಳಿದರು. ಮತ್ತೊಬ್ಬ ನಾಯಕಿ ನಕ್ಷತ್ರ ಮಾತನಾಡುತ್ತ, ನಾಯಕನ ಪರ್ಸನಲ್ ಸೆಕ್ರಟರಿಯಾಗಿ ಕಾಣಿಸಿಕೊಂಡಿದ್ದೇನೆ. ಗಂಡ, ಹೆಂಡತಿ ಇಬ್ಬರ ನಡುವೆ ಬರುವ ಮತ್ತೊಬ್ಬ ಹುಡುಗಿ ಎಂದರು. ಹಿರಿಯ ಕಲಾವಿದರಾದ ದೊಡ್ಡಣ್ಣ, ಅವಿನಾಶ್, ಲಯಕೋಕಿಲ, ಕವನ, ಅಮಿತ್, ಲೋಕೇಶ್, ಕವನ, ಅಮಿತ್ ಚಿತ್ರದ ಇತರೆ ಪಾತ್ರಗಳಲ್ಲಿದ್ದಾರೆ.

'ಜಸ್ಟ್ ಮ್ಯಾರೀಡ್' ಮದುವೆಯಾದವರ ಹಾಡು-ಪಾಡು...

ಸಂಗೀತ ನಿರ್ದೇಶಕರಿಬ್ಬರ ಪ್ರಯತ್ನದಲ್ಲಿ ಹೊರಬರುತ್ತಿರುವ ಚಿತ್ರ ಜಸ್ಟ್ ಮ್ಯಾರೀಡ್. ಬಿಗ್ ಬಾಸ್ ಶೈನ್‌ಶೆಟ್ಟಿ ಹಾಗೂ ಅಂಕಿತ ಅಮರ್ ಪ್ರಮುಖ ಪಾತ್ರದಲ್ಲಿ ನಟಿಸಿರುವ ಈ ಚಿತ್ರವನ್ನು ಕಾಂತಾರ ಖ್ಯಾತಿಯ ಅಜನೀಶ್ ಲೋಕನಾಥ್ ನಿರ್ಮಿಸಿದ್ದು, ಸಿ.ಆರ್.ಬಾಬಿ ಆಕ್ಷನ್ ಕಟ್ ಹೇಳಿದ್ದಾರೆ. ಇತ್ತೀಚೆಗೆ ಈ ಚಿತ್ರದ ಟೀಸರ್ ಬಿಡುಗಡೆ ಕಾರ್ಯಕ್ರಮ ನಡೆಯಿತು. ನಟ ಉಪೇಂದ್ರ, ತಮಿಳು ನಿರ್ದೇಶಕ ನಿಥಿಲನ್ ಹಾಗೂ ಅಜಯ್ ಭೂಪತಿ ಜಸ್ಟ್ ಮ್ಯಾರೀಡ್ ಚಿತ್ರದ ಟೀಸರ್‌ಗೆ ಚಾಲನೆ ನೀಡಿದರು.



ವೇದಿಕೆಯಲ್ಲಿ ನಟ ಉಪೇಂದ್ರ ಮಾತನಾಡುತ್ತ, ನಾನು ಬಾಬಿ ಅವರ ಕೆಲಸವನ್ನು ಹತ್ತಿರದಿಂದ ನೋಡಿದ್ದೇನೆ. ಇನ್ನು ಅಜನೀಶ್ ಅವರ ಸಂಗೀತ ಸಾಮರ್ಥ್ಯವನ್ನು ಇಡೀ ದೇಶವೇ ಮೆಚ್ಚಿದೆ. ನನ್ನ ಯುಐ ಚಿತ್ರಕ್ಕೂ ಅವರೇ ಮ್ಯೂಸಿಕ್ ಮಾಡಿದ್ದಾರೆ. ಕೈತುಂಬಾ ಕೆಲಸ ಇದ್ದರೂ ಅವರಿಗೆ ಸ್ವಲ್ಪವೂ ಅಹಂ ಇಲ್ಲ. ಟೀಸರ್ ತುಂಬಾ ಇಂಟರೆಸ್ಟಿಂಗ್ ಆಗಿದೆ. ಅಲ್ಲದೆ ಕಲಾವಿದರ ಅಭಿನಯ ಹಾಗೂ ತಂತ್ರಜ್ಞರ ಕೆಲಸವೂ ಎದ್ದು ಕಾಣುತ್ತದೆ ಎಂದರು. ನಿರ್ದೇಶಕಿ ಸಿ.ಆರ್.ಬಾಬಿ ಮಾತನಾಡುತ್ತ, ಸಿನಿಮಾ ನಿರ್ದೇಶನ ಮಾಡಬೇಕೆನ್ನುವುದು ನನ್ನ ಬಹು ವರ್ಷಗಳ ಕನಸು. ನನ್ನ ನಿರ್ದೇಶನದ ಮೊದಲ ಚಿತ್ರವನ್ನು ಸ್ನೇಹಿತ ಅಜನೀಶ್ ನಿರ್ಮಾಣ ಮಾಡಿದ್ದಾರೆ. ದಕ್ಷಿಣದ ಮೂವರು ಜನಪ್ರಿಯ ನಿರ್ದೇಶಕರು ಟೀಸರನ್ನು ಲಾಂಚ್ ಮಾಡಿದ್ದು ಖುಷಿಯಾಗಿದೆ. ಸದ್ಯದಲ್ಲೇ ಜಸ್ಟ್ ಮ್ಯಾರೀಡ್ ಚಿತ್ರ ಪ್ರೇಕ್ಷಕರ ಮುಂದೆ ಬರಲಿದೆ ಎಂದರು.

ಸಂಗೀತ ನಿರ್ದೇಶಕ ಹಾಗೂ ನಿರ್ಮಾಪಕ ಅಜನೀಶ್ ಲೋಕನಾಥ್ ಮಾತನಾಡುತ್ತ, ನನಗೆ ಮೊದಲ ಗುರು ಎಂದರೆ ನನ್ನ ತಂದೆ ಲೋಕನಾಥ್, ಚಿತ್ರರಂಗದಲ್ಲಿ ನನ್ನ ಗುರುಗಳು ಎಂದರೆ ಸಿ.ಆರ್.ಬಾಬಿ ಹಾಗೂ ಕೆ.ಕಲ್ಯಾಣ್, ಬಾಬಿ ಅವರೊಂದು ಅದ್ಭುತವಾದ ಕಥೆ ಮಾಡಿ, ಮೊದಲ ಬಾರಿಗೆ ನಿರ್ದೇಶನ ಮಾಡಿದ್ದಾರೆ. ಚಿತ್ರ ಇನ್ನೇನು ರಿಲೀಸ್ ಹಂತಕ್ಕೆ ತಲುಪಿದೆ ಎಂದರು. ನಾಯಕ ನಟ ಶೈನ್‌ಶೆಟ್ಟಿ ಮಾತನಾಡುತ್ತ, ಚಿತ್ರದಲ್ಲಿ ನನ್ನ ಪಾತ್ರ ತುಂಬಾ ಇಂಟರೆಸ್ಟಿಂಗಾಗಿದೆ, ಸಂಗೀತ ಕ್ಷೇತ್ರದಲ್ಲಿ ಗುರುತಿಸಿಕೊಂಡಿದ್ದ ಬಾಬಿ ಹಾಗೂ ಅಜನೀಶ್ ಈ ಚಿತ್ರದ ಮೂಲಕ ಹೊಸಹೆಜ್ಜೆ ಇಟ್ಟಿದ್ದಾರೆ ಎಂದರು.

ನಾಯಕಿ ಅಂಕಿತ ಅಮರ್ ಮಾತನಾಡುತ್ತ, ನಾನು ಅಜನೀಶ್‌ರ ಸಂಗೀತದ ದೊಡ್ಡ ಫ್ಯಾನ್. ಒಮ್ಮೆ ಅವರೇ ಕಾಲ್ ಮಾಡಿ, ನೀವೇ ನಮ್ಮ ಚಿತ್ರದ ನಾಯಕಿ ಎಂದಾಗ ಆಶ್ಚರ್ಯವಾಯಿತು, ಸಹನ ಎಂಬ ಪಾತ್ರದಲ್ಲಿ ನಾನು ಕಾಣಿಸಿಕೊಂಡಿದ್ದೇನೆ. ಬಾಬಿ ಅವರು ಮೊದಲ ಬಾರಿಗೆ ಆದರೂ ಎಲ್ಲರೂ ಮೆಚ್ಚುವ ಹಾಗೆ ನಿರ್ದೇಶನ ಮಾಡಿದ್ದಾರೆ ಎಂದರು.

ಹಿರಿಯನಟಿ ಶ್ರುತಿ, ರವಿಶಂಕರ್‌ಗೌಡ, ಶ್ರೀಮಾನ್, ವಾಣಿ ಹರಿಕೃಷ್ಣ, ಸಾಕ್ಷಿ ಅಗರವಾಲ್ ಸೇರಿ ಎಲ್ಲ ಕಲಾವಿದರು ತಂತಮ್ಮ ಪಾತ್ರಗಳ ಕುರಿತಂತೆ ಮಾತನಾಡಿದರು, ರಘು ನಿಡುವಳ್ಳಿ ಈ ಚಿತ್ರಕ್ಕೆ ಸಂಭಾಷಣೆ ಬರೆದಿದ್ದಾರೆ ಹಿರಿಯನಟ ದೇವರಾಜ್, ನಿರ್ದೇಶಕ ಅನೂಪ್ ಭಂಡಾರಿ ಕೂಡ ಚಿತ್ರದಲ್ಲಿ ಅಭಿನಯಿಸಿದ್ದಾರೆ.

ಅ.17ರಿಂದ ಸಿಂಹರೂಪಿಣಿ ದರ್ಶನ



ಶ್ರೀ ಮಾರಮ್ಮ ದೇವಿಯ ಮಹಿಮೆ ಹೇಳುವ ಭಕ್ತಿಪ್ರಧಾನ ಕಥಾಹಂದರ ಹೊಂದಿದ ಚಿತ್ರ 'ಸಿಂಹರೂಪಿಣಿ'. ಕಿನ್ನಾಳ ರಾಜ್ ಅವರ ನಿರ್ದೇಶನದ ಈ ಚಿತ್ರವೀಗ ಬಿಡುಗಡೆಗೆ ಸಿದ್ಧವಾಗಿದ್ದು, ಅ.17ಕ್ಕೆ ತೆರೆಕಾಣಲಿದೆ. ಕೆ.ಎಂ.ನಂಜುಂಡೇಶ್ವರ ಕಥೆ ಬರೆದು ನಿರ್ಮಾಣ ಮಾಡಿದ್ದಾರೆ. ವಿಶೇಷವಾಗಿ ಈ ಚಿತ್ರದಲ್ಲಿ ನಿರೂಪಕಿಯರಾದ ದಿವ್ಯ ಆಲೂರು ಹಾಗೂ ಅಂಕಿತಾಗೌಡ ಪ್ರಮುಖ ಪಾತ್ರಗಳಲ್ಲಿ ಕಾಣಿಸಿಕೊಂಡಿದ್ದಾರೆ.


ನವರಾತ್ರಿ ಹಬ್ಬದ ಸಂದರ್ಭದಲ್ಲಿ ಚಿತ್ರದ ಹಾಡುಗಳ ಬಿಡುಗಡೆ ಕಾರ್ಯಕ್ರಮ ನಡೆಯಿತು. ಪ್ರಮುಖ ಪಾತ್ರ ನಿರ್ವಹಿಸಿರುವ ನಟ ಸುಮನ್ ಮಾತನಾಡಿ, ಇಷ್ಟು ವರ್ಷದ ಅನುಭವದಲ್ಲಿ ಈ ಸಿನಿಮಾ ನನಗೆ ತೃಪ್ತಿ ನೀಡಿದೆ. ದೇವಿ ಇದ್ದಾರಾ ಎನ್ನುವ ಪ್ರಶ್ನೆಗಳಿಗೆ ನನ್ನ ಪಾತ್ರ ಉತ್ತರವಾಗಲಿದೆ ಎಂದು ಹೇಳಿದರು. ನಿರ್ದೇಶಕ ಕಿನ್ನಾಳ ರಾಜ್ ಮಾತನಾಡುತ್ತ, ಗ್ರಾಮೀಣ ಭಾಗದಲ್ಲಿ ಏನೇ ಕಷ್ಟ ಎದುರಾದರೂ ಅವರು ನಂಬಿರುವ ದೇವರ ಮೊರೆ ಹೋಗುತ್ತಾರೆ. ಜಾತ್ರೆ, ಉತ್ಸವಗಳಲ್ಲಿ ಇನ್ನೂ ನಂಬಿಕೆ ಇದೆ ಎಂಬುದನ್ನು ಚಿತ್ರದ ಪಾತ್ರಗಳ ಮೂಲಕ ತೋರಿಸಿದ್ದೇವೆ, ಹಾಗೆಯೇ ದೇವಿಯು ಮಹಾಲಕ್ಷ್ಮೀ ರೂಪದಲ್ಲಿ ಭೂಮಿಗೆ ಬರುತ್ತಾಳೆ. ಮುಂದೆ ಆಕೆ ಏಕೆ ಮಾರಮ್ಮ ಆಗ್ತಾಳೆ ಎನ್ನುವುದೇ ಚಿತ್ರದ ಕಥಾಹಂದರ. ರಾಕ್ಷಸರನ್ನು ಸಂಹಾರ ಮಾಡಲು ಪಾರ್ವತಿದೇವಿ ಏಳು ಅವತಾರಗಳಲ್ಲಿ ಬರುತ್ತಾಳೆ. ಅದರಲ್ಲಿ ಕೊನೆಯ ಅವತಾರವೇ ಮಾರಮ್ಮದೇವಿ. ನಿರ್ಮಾಪಕರು ಎಲ್ಲಿಯೂ ರಾಜಿಯಾಗದೆ ಹಣ ಹಾಕಿದ್ದಾರೆ. ಗಾಯಕ ಜಸ್ಕರಣ್‌ಸಿಂಗ್ ಹಾಡಿರುವ ಲವ್ ಸಾಂಗ್ ಹಿಟ್ ಆಗಿದೆ ಎಂದು ಹೇಳಿದರು. ನಮ್ಮ ಚಿತ್ರದಲ್ಲಿ ನೂರ ಇಪ್ಪತ್ತಕ್ಕೂ ಹೆಚ್ಚು ಕಲಾವಿದರು ಅಭಿನಯಿಸಿದ್ದಾರೆ. ಹಿರಿಯರು, ಕಿರಿಯರು ಅಂತ ನೋಡದೆ ನಾವೆಲ್ಲರೂ ಆ ತಾಯಿಯ ಮಕ್ಕಳು ಅಂದುಕೊಂಡು ಚೆನ್ನಾಗಿ ನಟಿಸಿದ್ದಾರೆ ಎಂದು ನಿರ್ಮಾಪಕ ಕೆ.ಎಂ. ನಂಜುಂಡೇಶ್ವರ ಅವರು ಹೇಳಿದರು.

ಕಲಾವಿದರಾದ ಯಶ್ ಶೆಟ್ಟಿ, ಅಂಕಿತಾಗೌಡ, ದಿವ್ಯಾ ಆಲೂರು, ನೀನಾಸಂ ಅಶ್ವಥ್, ಹರೀಶ್ ರಾಯ್, ವಿಜಯ ಚೆಂಡೂರು, ಯಶಸ್ವಿನಿ, ಖುಷಿ ಬಸ್ರೂರು, ಮನಮೋಹನ್ ರೈ, ಸಾಗರ್, ಸಂಗೀತ ಸಂಯೋಜಕ ಆಕಾಶ ಪರ್ವ, ಛಾಯಾಗ್ರಾಹಕ ಕಿರಣ್ ಇವರೆಲ್ಲ ತಮ್ಮ ಪಾತ್ರಗಳ ಬಗ್ಗೆ ಮಾತನಾಡಿ ಸಂತಸ ಹಂಚಿಕೊಂಡರು.

ಸಿನಿಪದಬಂಧ-546



ಉಮ್ಮತ್ತೂರು ಇಂದುಶೇಖರ್
ಮೊ.9880820462



ಹೆಸರು ______

ವಿಳಾಸ ______

ದೂರವಾಣಿ ಸಂಖ್ಯೆ ______

ಎಡದಿಂದ ಬಲಕ್ಕೆ

1.ಹತ್ತನೇ ದಿನದ ಹಬ್ಬದಲ್ಲಿ ಗೆಲುವಿದೆ! 6
3.ದಸರಾ ಅಂಬಾರಿ ಕದಿಯುವ ಕತೆಯ ಚಿತ್ರವಿದು! 4
5.ಮೈಸೂರು ಅರಸರ ವಂಶ 2
6.ಅಶೋಕ್ ಅಭಿನಯದಲ್ಲಿ ಬಂದ ಎಲ್ಲಾ ಅರಸರ ಅರಸ 6
8."ದಸರಾ _ _ ನಿನ್ನನ್ನು ನೋಡಲು ನಮ್ಮೂರಿಂದ ಬಂದೆ ಕಣೆ.... ", 2
10.ಮೈಸೂರು ದಸರಾ ಎಷ್ಟೊಂದು _ _ _ 3
12.ಅನಂತ್ ನಾಗ್ ಅಭಿನಯದ ಅರಸನ ಸೊಬಗಿನ ಗೃಹ 7
15.ದಸರಾದಲ್ಲಿ ಕಾಣಿಸಿಕೊಂಡ ಕನ್ನಡದ ಫಿಲಂ ಸ್ಟಾರ್ಸ್ 7
16.ಬನ್ನಿ ಮರದ ಪೂಜೆಗೆಂದು ಹೊರಟ ಮೆರವಣಿಗೆ 5

ಮೇಲಿನಿಂದ ಕೆಳಕ್ಕೆ

1.ಗೆಲುವಿನ ಅಧಿದೇವತೆ 5
2.ಮೈಸೂರಿನ ನಾಡ ಹಬ್ಬ 3
3.ಒಂಬತ್ತು ಇರುಳಿನ ಹಬ್ಬವಿದು 4
4.ಹಬ್ಬಗಳಲ್ಲಿ ಅಲಂಕಾರಕ್ಕಾಗಿ ಕಟ್ಟುವ ಚಿಗುರು 6
7.ರಕ್ಕಸನನ್ನು ಸಂಹರಿಸಿದ ದೇವಿಗೆ ಹೀಗೇನ್ನಿ 8
9.ಪೇರಾಲ ನಿರ್ದೇಶನದ ಚಾಮುಂಡಿ 5
11.ಇಲ್ಲೇ ಮೇಲಿನಿಂದ ಕೆಳಕ್ಕೆ '12' ರಲ್ಲಿರುವುದನ್ನು ಹೊತ್ತ ಪ್ರಾಣಿ 2
12.ಇಲ್ಲೇ ಮೇಲಿನಿಂದ ಕೆಳಕ್ಕೆ '11' ರಲ್ಲಿರುವ ಪ್ರಾಣಿ ಹೊತ್ತದ್ದು 3
13.ಅಂಬರೀಷ್ ಅಭಿನಯದ ಪ್ರಾಣಿಗಳ ತಾಣ 4
14.ಒಂದು ಬಗೆಯ ತಂತಿ ವಾದ್ಯ ನುಡಿಸಿದ ನಟಿ 3
15.ಸಂಪದ್ಭರಿತ ನಟಿ 2

ಸಿನಿ ಪದಬಂಧ 545ರ ಉತ್ತರ

ಅ	ದೇ	ಕ	ಣ್ಣು			ಕ	ಥಾ	ನಾ	ಯ	ಕ
ನು		ಶಾ		ಕ	ಸ್ತೂ	ರಿ		ಗ		
ರಾ		ರಿ		ಳ		ಮ	ಧು	ಮಂ	ಚ	
ಧ		ವೀ		ಸಾ		ಲೆ		ಡ		
	ಕ	ರ	ಡಿ	ಪು	ರ			ಲ	ಕ್ಷ್ಮ	ಣ
	ರು			ರ			ರ			
ನ	ಳಿ	ನಿ		ದ	ಳ	ಪ	ತಿ		ಪ	
	ನ			ಹು			ಪ	ಲ್ಲ	ವಿ	
ಕಿಂ	ಕ	ರ		ಡು		ಶ್ರೃ	ತಿ		ತ್ರ	
	ರೆ		ಯು	ಗ	ಳ				ಪ್ರೇ	
				ರು			ಚಂ	ದ್ರ	ಮ	

ವಿಜೇತರು: ಬಹದ್ದೂರ್ ಬಾಲು, ನಂ. 422, ಗೋಕುಲಂ. 2ನೇ ಹಂತ, ಮೈಸೂರು.

ವಿಳಾಸ: 'ಸಿನಿಬಂಧ' ವಿಭಾಗ, 'ಮೈಸೂರು ಮಿತ್ರ' ದಿನಪತ್ರಿಕೆ, ಬನ್ನಿಮಂಟಪ, ಮೈಸೂರು-570 015

ಮೈಸೂರು ಮಿತ್ರ

ಹುಣಸೂರು ನಗರಸಭೆ ಸಾಮಾನ್ಯ ಸಭೆ

ಅಧಿಕಾರಿಗಳ ತರಾಟೆಗೆ ತೆಗೆದುಕೊಂಡ ಶಾಸಕರು



ಹುಣಸೂರು ನಗರಸಭೆಯಲ್ಲಿ ಸಾಮಾನ್ಯ ಸಭೆ ನಡೆಯಿತು.

ಹುಣಸೂರು, ಅ.10– ನಗರಸಭೆ ವ್ಯಾಪ್ತಿ ಕಂದಾಯ ನಿವೇಶನಗಳನ್ನು ಗುರುತಿಸಿ ನಾಮ ಫಲಕ ಅಳವಡಿಸುವಂತೆ ಈ ಹಿಂದಿನ ಸಭೆಯಲ್ಲಿ ಸೂಚಿಸಿದ್ದರೂ, ನಾಮಫಲಕ ಅಳವಡಿಸದೇ ಬೇಜವಾಬ್ದಾರಿತನ ಪ್ರದರ್ಶಿಸಿದ ಕಂದಾಯ ಅಧಿಕಾರಿಗಳನ್ನು ಶಾಸಕ ಜಿ.ಡಿ.ಹರೀಶ್‌ಗೌಡ ತರಾಟೆಗೆ ತೆಗೆದುಕೊಂಡರು.

ನಗರಸಭೆಯಲ್ಲಿ ಗುರುವಾರ ನಡೆದ ಸಾಮಾನ್ಯ ಸಭೆಯಲ್ಲಿ ಕಂದಾಯ ಅಧಿಕಾರಿ ಮಧುಸೂದನ್ ಮತ್ತು ಸಿಬ್ಬಂದಿ ಕಾರ್ಯವೈಖರಿಗೆ ಅಸಮಾಧಾನ ವ್ಯಕ್ತಪಡಿಸಿದ ಶಾಸಕರು, ವಾರದೊಳಗೆ ನಗರಸಭೆ ಆಸ್ತಿಗಳಿಗೆ ನಾಮಫಲಕ ಅಳವಡಿಸದಿದ್ದರೆ, ನಿರ್ಲಕ್ಷ್ಯ ತೋರುವ ಅಧಿಕಾರಿ ಹಾಗೂ ಸಿಬ್ಬಂದಿಗಳ ಅಮಾನತಿಗೆ ಶಿಫಾರಸ್ಸು ಮಾಡುವುದಾಗಿ ಎಚ್ಚರಿಕೆ ನೀಡಿದರು.

ನಗರಸಭೆ ವ್ಯಾಪ್ತಿಯಲ್ಲಿ 1284 ವಾಣಿಜ್ಯ ಮಳಿಗೆಗಳಿದ್ದು, ಈ ಪೈಕಿ 348 ಮಳಿಗೆಯವರು ಮಾತ್ರ ಪರವಾನಗಿ ಪಡೆದಿದ್ದಾರೆ. ಉಳಿದವರು ಪರವಾನಗಿ ಪಡೆಯದೇ ವ್ಯವಹಾರ ನಡೆಸುತ್ತಿದ್ದು, ಇದರಿಂದ ನಗರಸಭೆ ಆದಾಯ ಸೋರಿಕೆಯಾಗುತ್ತಿದೆ ಎಂದು ಸದಸ್ಯ ಸ್ವಾಮಿಗೌಡ ಸೇರಿದಂತೆ ಮತ್ತಿತರರು ಗಮನ ಸೆಳೆದಾಗ ಇದಕ್ಕುತ್ತರಿಸಿದ ಅಧಿಕಾರಿ ಶಶಿಕುಮಾರ್ ಪರವಾನಗಿ ಪಡೆಯದ ವಾಣಿಜ್ಯ ಮಳಿಗೆ ಮಾಲೀಕರಿಗೆ ಈಗಾಗಲೇ ಹಲವು ಬಾರಿ ನೋಟಿಸ್ ನೀಡಿ ಪರವಾನಗಿ ಪಡೆಯುವಂತೆ ಸೂಚಿಸಿದ್ದರೂ ಪಡೆದಿಲ್ಲ. ಮುಂದಿನ ದಿನಗಳಲ್ಲಿ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದರು.

ತೆರಿಗೆ ನವೀಕರಣ: ನಗರಸಭೆ ವ್ಯಾಪ್ತಿ ಹೊಸದಾಗಿ ಮನೆ ಅಥವಾ ವಾಣಿಜ್ಯ, ಕೈಗಾರಿಕೆ ಕಟ್ಟಡ ನಿರ್ಮಿಸುವವರಿಗೆ ತೆರಿಗೆ ದರ ನವೀಕರಿಸುವ ಪ್ರಸ್ತಾವನೆಗೆ ಸಭೆಯಲ್ಲಿ ಮಿಶ್ರ ಪ್ರತಿಕ್ರಿಯೆ ಎದುರಾಗಿ, ಮನೆ ನಿರ್ಮಿಸುವವರಿಗೆ ತೆರಿಗೆ ಯಥಾಸ್ಥಿತಿ ಕಾಯ್ದುಕೊಂಡು ವಾಣಿಜ್ಯ, ಕೈಗಾರಿಕೆ ಉದ್ದೇಶಕ್ಕೆ ನಿರ್ಮಿಸುವ ಕಟ್ಟಡಗಳಿಗೆ ತೆರಿಗೆ ದರ ಹೆಚ್ಚಿಸಲು ತೀರ್ಮಾನಿಸಲಾಯಿತು.

ವಾಣಿಜ್ಯ ಮಳಿಗೆ: ನಗರಸಭೆಯ ವಿವಿಧ ಯೋಜನೆಯಡಿ ನಿರ್ಮಿಸಿರುವ ವಾಣಿಜ್ಯ ಮಳಿಗೆ ಬಾಡಿಗೆ ಹರಾಜು ಪ್ರಕ್ರಿಯೆಗೆ ಸಂಬಂಧಿಸಿದಂತೆ ಸದಸ್ಯರಾದ ಕೃಷ್ಣರಾಜಗುಪ್ತ, ದೊಡ್ಡಹೆಜ್ಜೂರು ರಮೇಶ್, ಹರೀಶ್ ಮಾತನಾಡಿ, ಕಳೆದ ಸಾಲಿನಲ್ಲಿ ಎದುರಾದ ಮಳಿಗೆ ಬಾಡಿಗೆ ಹರಾಜು ಪ್ರಕ್ರಿಯೆಗೆ ಕಾನೂನಾತ್ಮಕ ಸಮಸ್ಯೆ ಒಂದು ಪಾಠವಾಗಿದೆ. ಈ ಬಾರಿ ಹರಾಜು ಪ್ರಕ್ರಿಯೆ ನಡೆಸುವ ಮುನ್ನ ನ್ಯಾಯಾಲಯದಲ್ಲಿ ತಡೆಯಾಜ್ಞೆ ತಂದು ಹಳೆ ಸೇತುವೆ ಮತ್ತು ಜೆಎಲ್‌ಬಿ ರಸ್ತೆ ಮತ್ತಿತರ ಕಡೆಗಳಲ್ಲಿರುವ ಮಳಿಗೆಗಳಲ್ಲಿ ಹಾಲಿ ಇರುವ ಬಾಡಿಗೆದಾರರನ್ನು ಖಾಲಿ ಮಾಡಿಸಿ ನಂತರ ಹೊಸದಾಗಿ ಹರಾಜು ನಡೆಸುವಂತೆ ಸದಸ್ಯ ಸಲಹೆ ನೀಡಿದರು.

ನಗರದಲ್ಲಿ ಒಳಚರಂಡಿ ಮತ್ತು ಕುಡಿಯುವ ನೀರು ಪೈಪ್‌ಲೈನ್ ಅಳವಡಿಸುವ ಕಾಮಗಾರಿ ನಡೆಯುತ್ತಿದ್ದು ರಸ್ತೆ ಸಂಪೂರ್ಣ ಹಾಳಾಗುತ್ತಿದೆ. ಸಂಬಂಧಿಸಿದ ಇಲಾಖೆ ರಸ್ತೆ ಡಾಂಬರೀಕರಣ ಮಾಡಬೇಕು. ಇಲ್ಲವಾದಲ್ಲಿ ನಗರಸಭೆಗೆ ಹೆಚ್ಚಿನ ಹೊರೆ ಬೀಳಲಿದೆ ಎಂದು ಸದಸ್ಯ ಮಲ್ಲಿಕ್ ಪಾಷ ಸಭೆ ಗಮನಕ್ಕೆ ತಂದರು.

ಇದಕ್ಕೆ ಆಯುಕ್ತೆ ಮಾನಸ ಉತ್ತರಿಸಿ, ನಿಯಮಾನುಸಾರ ಒಳಚರಂಡಿ ಮತ್ತು ಕಾವೇರಿ ನೀರು ಸರಬರಾಜು ಮಾಡುವ ಕಾಮಗಾರಿ ಕೈಗೊಂಡಿರುವವರು ಹಾಳಾದ ರಸ್ತೆಗಳನ್ನು ಅವರೇ ಡಾಂಬರೀಕರಣ ಮಾಡುವ ಜವಾಬ್ದಾರಿ ಹೊತ್ತಿದ್ದಾರೆ. ಈ ಬಗ್ಗೆ ಚಿಂತಿಸುವ ಅಗತ್ಯವಿಲ್ಲ. ಪೈಪ್‌ಲೈನ್ ಕೆಲಸ ಮುಗಿದ ಮೇಲೆ ಡಾಂಬರೀಕರಣ ನಡೆಯಲಿದೆ ಎಂದರು.

ಅಕ್ರಮ ಸಕ್ರಮ: ನಗರದಲ್ಲಿ ಅನಧಿಕೃತ ಕುಡಿಯುವ ನೀರಿನ ಸಂಪರ್ಕ ಹೊಂದಿರುವವರ ಸಂಖ್ಯೆ ಅಧಿಕೃತ ಸಂಪರ್ಕಕ್ಕಿಂತ ಮೂರ್ನಾಲ್ಕು ಪಟ್ಟು ಹೆಚ್ಚಾಗಿದೆ. ಪ್ರಸ್ತುತ 4300 ಅಧಿಕೃತ ಸಂಪರ್ಕವಿದ್ದು, 12 ಸಾವಿರಕ್ಕೂ ಅನಧಿಕೃತ ಸಂಪರ್ಕಗಳಿವೆ ಇದರಿಂದ ನಗರಸಭೆ ಆದಾಯ ಸೋರಿಕೆಯಾಗುತ್ತಿದೆ. ಈ ಸಾಲಿನ ಕೊನೆ ವೇಳೆಗೆ ಅಕ್ರಮ ಸಕ್ರಮಗೊಳಿಸಲು ನಗರಸಭೆ ಈಗಾಗಲೇ ನಿಗದಿಗೊಳಿಸಿರುವ ತೆರಿಗೆ 3800 ರೂ. ಪಾವತಿಸಿ ಸಕ್ರಮ ಪಡಿಸಿಕೊಳ್ಳಲು ಒಂದು ವರ್ಷ ಕಾಲಾವಕಾಶ ನೀಡುವಂತೆ ಶಾಸಕ ಜಿ.ಡಿ.ಹರೀಶ್‌ಗೌಡ ಸೂಚಿಸಿದರು.

ವೈಜ್ಞಾನಿಕ ಸಂರಕ್ಷಣೆ: ನಗರಸಭೆಯಲ್ಲಿ ಕಡತ ನಿರ್ವಹಣೆ ಅವೈಜ್ಞಾನಿಕವಾಗಿದ್ದು, ಮನೆ, ನೀರು ಸೇರಿದಂತೆ ಮತ್ತಿತರ ತೆರಿಗೆ ಪಾವತಿಸಿದವರ ವಿವರ, ಸಾರ್ವಜನಿಕ ದಾಖಲೆಗಳು ವ್ಯವಸ್ಥಿತವಾಗಿ ಇಲ್ಲ. ಅಲ್ಲದೇ ಕೆಲವು ದಾಖಲೆಗಳು ನಾಪತ್ತೆಯಾಗಿವೆ. ಎಲ್ಲಾ ದಾಖಲೆಗಳನ್ನು ವ್ಯವಸ್ಥಿತವಾಗಿ ಸುಸ್ಥಿರಗೊಳಿಸಲು ಹಾಸನ ನಗರಸಭೆ ಕಂದಾಯ ಇಲಾಖೆಯಲ್ಲಿ ಡಿಜಿಟಲ್ ಆನ್‌ಲೈನ್‌ನಲ್ಲಿ ದಾಖಲಿಸಿರುವಂತೆ ನಾವು ಸಹ ನಮ್ಮ ನಗರಸಭೆಯಲ್ಲಿ ಡಿಜಿಟಲ್ ಆನ್‌ಲೈನ್‌ನಲ್ಲಿ ದಾಖಲಿಸಿ ಆಸ್ತಿ ದಾಖಲೆಗಳನ್ನು ಸಂರಕ್ಷಿಸಲು ತೀರ್ಮಾನಿಸಲಾಗಿದೆ. ಇದಕ್ಕೆ ಕೌನ್ಸಿಲ್ ಸಭೆ ಒಪ್ಪಿಗೆ ಸೂಚಿಸಬೇಕು ಎಂದು ಆಯುಕ್ತರು ತಿಳಿಸಿದರು.

ಫುಡ್‌ಕೋರ್ಟ್: ಬೀದಿ ಬದಿ ನಡೆಸುತ್ತಿರುವ ಫಾಸ್ಟ್‌ಫುಡ್ ಅಂಗಡಿಗಳಿಗೆ ನಗರಸಭೆ ಜಾಗದಲ್ಲಿ ವೈಜ್ಞಾನಿಕವಾಗಿ ಫುಡ್‌ಕೋರ್ಟ್ ನಿರ್ಮಿಸಿ ಆರೋಗ್ಯಕರ ಆಹಾರ ಮತ್ತು ತಿಂಡಿ ಪದಾರ್ಥಗಳನ್ನು ಸಾರ್ವಜನಿಕರಿಗೆ ಸಿಗುವಂತೆ ಮಾಡಲು ಅತೀ ಶೀಘ್ರ ನೂತನ ಯೋಜನೆಗೆ ಚಾಲನೆ ನೀಡಲಿದ್ದೇವೆ ಎಂದು ಅಧ್ಯಕ್ಷ ಶರವಣ ಸಭೆಗೆ ತಿಳಿಸಿದರು.

ಯೋಜನಾ ಪ್ರಾಧಿಕಾರಕ್ಕೆ ಸತೀಶ್ ಪುನರಾಯ್ಕೆ

ಹುಣಸೂರು ಯೋಜನಾ ಪ್ರಾಧಿಕಾರಕ್ಕೆ ನಗರಸಭೆಯಿಂದ ನಾಮ ನಿರ್ದೇಶನ ಸದಸ್ಯರಾಗಿ 8ನೇ ವಾರ್ಡ್ ಸದಸ್ಯ ಹೆಚ್.ಪಿ.ಸತೀಶ್ ಅವರನ್ನು ನಗರಸಭೆ ಸಾಮಾನ್ಯ ಸಭೆಯಲ್ಲಿ ಪುನರಾಯ್ಕೆ ಮಾಡಲಾಯಿತು.

4ನೇ ವಾರ್ಡ್‌ನ ಸದಸ್ಯೆ ಭವ್ಯ ಚಂದ್ರಶೇಖರ್ ಇದನ್ನು ವಿರೋಧಿಸಿ ಈಗಾಗಲೇ 5ನೇ ವಾರ್ಡ್‌ನ ಸ್ವಾಮಿಗೌಡರನ್ನು ಯೋಜನಾ ಪ್ರಾಧಿಕಾರಕ್ಕೆ ನಗರಸಭೆಯಿಂದ ಆಯ್ಕೆ ಮಾಡಲಾಗಿದೆ. ಒಮ್ಮೆ ಆಯ್ಕೆ ಮಾಡಿದವರನ್ನು ಪುರಸಭೆ ಅಧಿನಿಯಮ 4/ಡಿ2 ಅಡಿ ಯಾವುದೇ ಕಾರಣಕ್ಕೂ ಬದಲಾಯಿಸುವಂತಿಲ್ಲ ಇದು ಕಾನೂನು ಬಾಹಿರವಾಗಿದೆ ಎಂದರು.

ಇದಕ್ಕೆ ಪ್ರತಿಕ್ರಿಯಿಸಿದ ಶಾಸಕ ಹರೀಶ್‌ಗೌಡ, ಹೆಚ್.ಪಿ.ಸತೀಶ್ ಅವರನ್ನು ನಗರಸಭೆಯಿಂದ ಹುಣಸೂರು ಯೋಜನಾ ಪ್ರಾಧಿಕಾರಕ್ಕೆ 2021ರಲ್ಲಿ ನಾಮ ನಿರ್ದೇಶನ ಸದಸ್ಯರಾಗಿ ಆಯ್ಕೆ ಮಾಡಲಾಗಿತ್ತು. ನೀವು ಹೇಳಿದಂತೆ ಒಮ್ಮೆ ಆಯ್ಕೆಯಾದ ಸತೀಶ ಅವರನ್ನು ಬದಲಾಯಿಸಿ ಸ್ವಾಮಿಗೌಡರನ್ನು ಆಯ್ಕೆ ಮಾಡಿ ಕಳುಹಿಸಿರುವುದು ಕಾನೂನು ಬಾಹಿರವಾಗಿದೆ. ಹೀಗಾಗಿ ಸತೀಶ್ ಆಯ್ಕೆ ಊರ್ಜಿತವಾಗಿದೆ ಎಂದು ತಿಳಿಸಿದರು. ಇದಕ್ಕೆ ಕಾಂಗ್ರೆಸ್ ಸದಸ್ಯರು ವಿರೋಧ ವ್ಯಕ್ತಪಡಿಸಿದರು.

ಈ ವೇಳೆ ತೆಗೆದುಕೊಂಡ ಪರ ವಿರೋಧದ ಬಗ್ಗೆ ಕಾಂಗ್ರೆಸ್‌ನ 13 ಸದಸ್ಯರು ನಿರ್ಣಯದ ವಿರುದ್ಧವಾಗಿ ಕೈ ಎತ್ತಿದರೆ, ಜೆಡಿಎಸ್, ಬಿಜೆಪಿ ಮೈತ್ರಿಕೂಟದ 18 ಸದಸ್ಯರು ಪರವಾಗಿ ಕೈ ಎತ್ತಿ ಬೆಂಬಲ ಸೂಚಿಸಿದರು. ಬಹುಮತ ನಿರ್ಣಯದ ಮೇರೆಗೆ ಸತೀಶ್ ಅವರನ್ನು ಯೋಜನಾ ಪ್ರಾಧಿಕಾರಕ್ಕೆ ಮತ್ತೆ ಪುನರಾಯ್ಕೆ ಮಾಡಲಾಯಿತು.

ಕೆಎಸ್‌ಐಸಿಯಲ್ಲಿ ಆಯುಧ ಪೂಜೆ



ತಿ.ನರಸೀಪುರದ ಕೆಎಸ್‌ಐಸಿಯಲ್ಲಿ ಆಯುಧ ಪೂಜೆ ನಡೆಯಿತು. ಈ ವೇಳೆ ಪ್ರಧಾನ ವ್ಯವಸ್ಥಾಪಕರಾದ ಮಂಜುಳಾ, ಮಂಜಪ್ಪ, ಪುನೀತ, ಶಂಕರ್, ರಾಕೇಶ್, ಪರಶಿವ, ನವೀನ, ಮನು, ಭರತ, ಸೀತಾರಾಮ, ರಘು ಹಾಜರಿದ್ದರು.

ಸರಗೂರು: ಬಸವ ಬಳಗಕ್ಕೆ ಗಣಪತಿ ಅಧ್ಯಕ್ಷ



ಬಸವ ಬಳಗದ ಅಧ್ಯಕ್ಷರಾಗಿ ಗಣಪತಿ ಆಯ್ಕೆಯಾದರು.

ಸರಗೂರು, ಅ.10– ತಾಲೂಕಿನ ಬಸವ ಬಳಗದ ನೂತನ ಅಧ್ಯಕ್ಷರಾಗಿ ಹಂಚೀಪುರ ಗಣಪತಿ ಆಯ್ಕೆಯಾಗಿದ್ದಾರೆ.

ತಾಲೂಕು ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಅಧ್ಯಕ್ಷ ಕೆ.ಎಸ್.ವೀರಭದ್ರಪ್ಪ ಅಧ್ಯಕ್ಷತೆಯಲ್ಲಿ ನಡೆದ ನೂತನ ಪದಾಧಿಕಾರಿಗಳು ಮತ್ತು ನಿರ್ದೇಶಕರ ಪದಗ್ರಹಣದ ಕಾರ್ಯಕ್ರಮದಲ್ಲಿ ಬಸವ ಬಳಗದ ನೂತನ ಅಧ್ಯಕ್ಷರಾಗಿ ಹಂಚೀಪುರ ಗಣಪತಿ ಅವರನ್ನು ಮೊದಲ ಅವಧಿಗೆ ಆಯ್ಕೆ ಮಾಡಿದರೆ, 2ನೇ ಅವಧಿಗೆ ಶಂಕಳ್ಳಿ ನಂಜಪ್ಪ ಅವರನ್ನು ಆಯ್ಕೆ ಮಾಡಲಾಯಿತು.

ಈ ವೇಳೆ ಮಹಾಸಭಾ ಕಾರ್ಯಾಧ್ಯಕ್ಷ ಸಿ.ಕೆ.ಗಿರೀಶ್, ಉಪಾಧ್ಯಕ್ಷ ಎಸ್.ಎನ್.ಮೋಹನ್ ಕುಮಾರ್, ಡಿ.ಸಿ.ಸಿದ್ದಪ್ಪ, ಮಹಿಳಾ ಉಪಾಧ್ಯಕ್ಷೆ ಮಂಜುಳ, ಕೋಶಾಧ್ಯಕ್ಷ ಸಿ.ಎನ್.ಪ್ರಕಾಶ್, ಪ್ರಧಾನ ಕಾರ್ಯದರ್ಶಿ ಗುರುಸ್ವಾಮಿ, ಕಾರ್ಯದರ್ಶಿ ಬಸವರಾಜು, ಮಹಿಳಾ ಕಾರ್ಯದರ್ಶಿ ಮಹದೇವಮ್ಮ, ನಿರ್ದೇಶಕರಾದ ಹೆಚ್.ಸಿ.ಮಹದೇವಸ್ವಾಮಿ, ವಿರೂಪಾಕ್ಷ, ಮಾದಪ್ಪ, ಶ್ರೀಕಂಠ, ಮಂಜುನಾಥ್, ಲಿಂಗರಾಜು, ಸುರೇಶ್, ನೀಲಮ್ಮ ಗುರುಮಲ್ಲಪ್ಪ, ನಾಗರತ್ನ, ಪುಟ್ಟಮಣಿ, ಮಂಜುಳ ಹಾಗೂ ಇನ್ನಿತರರಿದ್ದರು.

ರತನ್ ಟಾಟಾ ಅವರಿಗೆ ಶ್ರದ್ಧಾಂಜಲಿ



ಪಿರಿಯಾಪಟ್ಟಣ ತಾಲೂಕಿನ ಬೈಲಕುಪ್ಪೆಯಲ್ಲಿ ಟಾಟಾ ಕಂಪನಿ ಸಂಸ್ಥಾಪಕ ರತನ್ ಟಾಟಾ ಅವರಿಗೆ ಜಿಕೆ ಗ್ರೂಪ್ ವತಿಯಿಂದ ಶ್ರದ್ಧಾಂಜಲಿ ಸಲ್ಲಿಸಲಾಯಿತು. ಈ ವೇಳೆ ಮೈಸೂರು ಜಿಲ್ಲಾ ಕಾಂಗ್ರೆಸ್ ಹಿರಿಯ ಕಾರ್ಯದರ್ಶಿ ಸಮಿವುಲ್ಲಾ ಖಾನ್, ಪತ್ರಕರ್ತ ರಾಜೇಶ್, ಜಿಕೆ ಗ್ರೂಪ್ ಸಿಬ್ಬಂದಿಗಳಾದ ಕಿರಣ್, ದೇವರಾಜ, ಮಾದೇಶ್ ಸೇರಿದಂತೆ ಇತರರಿದ್ದರು.

ಕವಿತೆ ಮನುಷ್ಯನನ್ನಾಗಿ ಮಾಡುವ ಒಂದು ಮಾಧ್ಯಮ

ಸಾಹಿತಿ ಮತ್ತು ಸಂಸ್ಕೃತಿ ಚಿಂತಕ ಸಂತೋಷ್ ಚೊಕ್ಕಾಡಿ



ಗ್ರಾಮೀಣ ದಸರಾ ಕವಿಗೋಷ್ಠಿಯನ್ನು ಸಾಹಿತಿ ಮತ್ತು ಸಂಸ್ಕೃತಿ ಚಿಂತಕ ಸಂತೋಷ್ ಚೊಕ್ಕಾಡಿ ಉದ್ಘಾಟಿಸಿದರು.

ಹೆಚ್.ಡಿ.ಕೋಟೆ, ಅ.10– ಕವಿತೆ ಓದುವುದು ಮತ್ತು ಬರೆಯುವುದು ಶ್ರೇಷ್ಠವಾದ ಕೆಲಸ. ಏಕೆಂದರೆ ಕವಿತೆ ಮನುಷ್ಯನನ್ನಾಗಿ ಮಾಡುವ ಒಂದು ಮಾಧ್ಯಮವಾಗಿ ಅರಳಿ ನಿಂತಿದೆ ಎಂದು ಸಾಹಿತಿ ಮತ್ತು ಸಂಸ್ಕೃತಿ ಚಿಂತಕ ಸಂತೋಷ್ ಚೊಕ್ಕಾಡಿ ತಿಳಿಸಿದರು.

ಪಟ್ಟಣದ ವಿಶ್ವ ಭಾರತಿ ಪ್ರಥಮ ದರ್ಜೆ ಕಾಲೇಜಿನ ಆವರಣದಲ್ಲಿ ತಾಲೂಕು ಕನ್ನಡ ಸಾಹಿತ್ಯ ಪರಿಷತ್ ಮತ್ತು ವಿಶ್ವ ಭಾರತಿ ಪ್ರಥಮ ದರ್ಜೆ ಕಾಲೇಜಿನ ಸಹಯೋಗದೊಂದಿಗೆ ಗ್ರಾಮೀಣ ದಸರಾ ಅಂಗವಾಗಿ ಹಮ್ಮಿಕೊಂಡಿದ್ದ ಗ್ರಾಮೀಣ ದಸರಾ ಕವಿಗೋಷ್ಠಿ ಉದ್ಘಾಟಿಸಿ ಮಾತನಾಡಿದ ಅವರು, ಇತ್ತೀಚಿನ ದಿನಗಳಲ್ಲಿ ಕವಿತೆಗಳನ್ನು ಓದುವ ಆಸಕ್ತಿ ಕಡಿಮೆಯಾಗಿದೆ. ಬೇರೆಯವರ ಕವಿತೆಗಳನ್ನು ಓದುವುದನ್ನು ಕವಿಯೊಬ್ಬ ರೂಢಿಸಿಕೊಂಡರೆ ಸೂಕ್ಷ್ಮ ಕವಿಯಾಗಬಲ್ಲ. ಮನುಷ್ಯನಿಗೆ ಪ್ರೀತಿ, ಕರುಣೆ, ಸಂಯಮಗಳನ್ನು ಕಲಿಸುವಲ್ಲಿ ಕವಿತೆಗಳು ಸಹಕಾರಿಯಾಗಿವೆ. ಪ್ರಾರಂಭದಲ್ಲಿ ಕವಿಗೆ ಪರಂಪರೆ ತಿಳುವಳಿಕೆ, ಹಿರಿಯ ಕವಿಗಳಾದ ಕುವೆಂಪು, ಬೇಂದ್ರೆ ಮಾಸ್ತಿ, ಅಡಿಗರು ಹೇಗೆ ಬರೆದಿದ್ದಾರೆ ಎಂಬ ತಿಳುವಳಿಕೆ ಹಾಗೂ ವರ್ತಮಾನ ಅರಿವು ಇರಬೇಕು ಎಂದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಸಾಹಿತಿ ಕೃಷ್ಣ ತಿಪ್ಪೂರು ಮಾತನಾಡಿ, ಹಿಂದೆ ರಾಜ ಮಹಾರಾಜರ ಆಶ್ರಯದಲ್ಲಿ ಅವರ ಆಸ್ಥಾನದಲ್ಲಿ ಆರಂಭವಾದ ಕವಿಗೋಷ್ಠಿಗಳು ಇಂದಿಗೂ ಸಹ ವಿವಿಧ ಆಯಾಮಗಳ ಮೂಲಕ ನಡೆಯುತ್ತಿವೆ ಎಂದು ತಿಳಿಸಿದರು.

ಗ್ರಾಮೀಣ ಭಾಗದಲ್ಲಿ ಕವಿಗಳಿಗೆ ಕವಿತೆಯನ್ನು ರಚಿಸಲು ಪೂರಕ ವಾತಾವರಣ ಸಿಗುತ್ತದೆ. ಕವಿತೆಗಳು ಹುಟ್ಟಬೇಕಾದರೆ ಪಟ್ಟಣ ಪ್ರದೇಶಗಳಿಂದ ಹೊರ ಬಂದು ಗ್ರಾಮೀಣ ಭಾಗದಲ್ಲಿನ ವಾತಾವರಣಕ್ಕೆ ಹೊಂದಾಣಿಕೆ ಮಾಡಿಕೊಂಡಾಗ ಮಾತ್ರ ಉತ್ತಮ ಕವಿತೆಗಳು ಹುಟ್ಟುತ್ತವೆ ಎಂದರು.

ಈ ವೇಳೆ ಕವಿಗಳಾದ ಕೆ.ರಮೇಶ್, ಎಸ್.ಎಸ್. ಮಹದೇವಯ್ಯ, ಸಂಜಯ್, ಅಪೂರ್ವ, ಸುಪ್ರಿತ್, ಶಿವಕುಮಾರ್, ಎಸ್.ಕೆ.ಪರೀಕ್ಷಿತ್, ಶರಣ್ಯ ತಮ್ಮ ಕವನಗಳಲ್ಲಿ ದಸರಾ ವೈಭವ, ಚಾಮುಂಡೇಶ್ವರಿ ಆರಾಧನೆ, ಕನ್ನಡನಾಡು ಕುರಿತು, ಬಾಲ್ಯವಿವಾಹ, ಮತದಾನ, ಪರಿಸರ ಪ್ರೇಮ, ಸಮಾಜದ ಗೊಂದಲ ಸೇರಿದಂತೆ ಇತರೆ ವಿಷಯಗಳು ಕುರಿತು ಕವನ ವಾಚಿಸಿದರು.

ಕಾರ್ಯಕ್ರಮದಲ್ಲಿ ವಿಶ್ವಭಾರತಿ ಎಜುಕೇಷನ್ ಟ್ರಸ್ಟ್ ಅಧ್ಯಕ್ಷ ವಿಶ್ವನಾಥ್ ಶೇಷಾಚಲ, ತಾಲೂಕು ಕಸಾಪ ಅಧ್ಯಕ್ಷ ಕನ್ನಡ ಪ್ರಮೋದ್, ಗೌರವ ಕಾರ್ಯದರ್ಶಿ ಗಿರೀಶ್ ಮೂರ್ತಿ, ತಾಲೂಕು ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷೆ ಎಂ.ಸಿ.ರಾಜೇಶ್ವರಿ, ಪ್ರಾಂಶುಪಾಲ ಕುಮಾರಸ್ವಾಮಿ, ಶಿವರಾಜು, ಸಿದ್ದರಾಜು, ಹೇಮಾವತಿ, ಪಲ್ಲವಿ, ರವಿಕುಮಾರ್, ಡಾ.ಸುದರ್ಶನ್, ಉಪನ್ಯಾಸಕರಾದ ಬಿ.ಬಸಪ್ಪ, ಬಿ.ಎಸ್.ರಮೇಶ್ ಇದ್ದರು.

ವಿಜೃಂಭಣೆಯ ಅರವಿಂದ ನಾಯಕಿ ಮಹಾರಥೋತ್ಸವ



ಶ್ರೀಅರವಿಂದ ನಾಯಕಿಯವರ ಮಹಾರಥೋತ್ಸವ ವಿಜೃಂಭಣೆಯಿಂದ ಜರುಗಿತು.

ನಂಜನಗೂಡು, ಅ.10– ತಾಲೂಕಿನ ಕಳಲೆ ಗ್ರಾಮದ ಲಕ್ಷ್ಮಿಕಾಂತಸ್ವಾಮಿ ದೇವಾಲಯದಲ್ಲಿ ಶ್ರೀಅರವಿಂದ ನಾಯಕಿಯವರ ಮಹಾರಥೋತ್ಸವ ಗುರುವಾರ ಸಾವಿರಾರು ಭಕ್ತರ ನಡುವೆ ವಿಜೃಂಭಣೆಯಿಂದ ನೆರವೇರಿತು.

ನವರಾತ್ರಿ ಮತ್ತು ಪವಿತ್ರೋತ್ಸವದ ಅಂಗವಾಗಿ ಅ.2ರಿಂದ 9 ದಿನಗಳ ಕಾಲ ಸಂಜೆ 7 ಗಂಟೆಗೆ ಶ್ರೀಲಕ್ಷ್ಮಿಕಾಂತಸ್ವಾಮಿ ಅವರ ಮಂಟಪೋತ್ಸವ ಹಾಗೂ ವೇದ ಪಾರಾಯಣ ಕಾರ್ಯಕ್ರಮ ಜರುಗಿತು. ತತ್ಸಂಬದ್ಧವಾಗಿ ಗುರುವಾರ ಬೆಳಗ್ಗೆ 10.45 ರಿಂದ 11.45ರ ಶುಭ ಲಗ್ನದಲ್ಲಿ ಶ್ರೀ ಅರವಿಂದ ನಾಯಕಿ ಅಮ್ಮನವರ ಉತ್ಸವ ಮೂರ್ತಿಯನ್ನು ರಥೋತ್ಸವದಲ್ಲಿ ಪ್ರತಿಷ್ಠಾಪನೆ ಮಾಡಲಾಯಿತು. ನಂತರ ರಥೋತ್ಸವಕ್ಕೆ ಚಾಲನೆ ನೀಡಲಾಯಿತು. ರಥೋತ್ಸವ ಗ್ರಾಮದ ಪ್ರಮುಖ ಬೀದಿಗಳಲ್ಲಿ ಸಂಚರಿಸಿ ಸ್ವಸ್ಥಾನ ಸೇರಿತು. ಈ ವೇಳೆ ಭಕ್ತರು ಇಷ್ಟಾರ್ಥ ಸಿದ್ಧಿಗಾಗಿ ಹರಕೆ ಕಟ್ಟಿ ಭಕ್ತಿ ಮೆರೆದರು.

ದೇವಾಲಯದ ಪಾರುಪತ್ತೆದಾರ್ ಜಯರಾಮು ಮಾತನಾಡಿ, ನವರಾತ್ರಿ ಮಹಾಸಭಾ ಹಾಗೂ ಪವಿತ್ರೋತ್ಸವದ ಅಂಗವಾಗಿ ಲಕ್ಷ್ಮಿಕಾಂತಸ್ವಾಮಿ ದೇವಾಲಯದಲ್ಲಿ ಪ್ರತಿದಿನ 9 ದಿನಗಳ ಕಾಲ ವೇದ ಪಾರಾಯಣ, ಮಂಟಪೋತ್ಸವ ಜರುಗಲಿದೆ. ಇಂದು ರಥೋತ್ಸವವೂ ವಿಜೃಂಭಣೆಯಿಂದ ಜರುಗಿದ್ದು, ಅ.12ರಂದು ಬನ್ನಿಮಂಟಪೋತ್ಸವ, ಸಂಜೆ 9ಗಂಟೆಗೆ ಪವಿತ್ರೋತ್ಸವ, ನಂತರ ಅಂಕುರಾರ್ಪಣೆ ಜರುಗಲಿದೆ. ಅ.15ರಂದು ಬೆಳಗ್ಗೆ ಪವಿತ್ರೋತ್ಸವ ರಾತ್ರಿ ಪೂರ್ಣಾಹುತಿಯೊಂದಿಗೆ ಅರವಿಂದ ನಾಯಕಿ ಅಮ್ಮನವರ ನವರಾತ್ರಿ ಮಹೋತ್ಸವ ಹಾಗೂ ಪವಿತ್ರೋತ್ಸವ ಕಾರ್ಯಕ್ರಮಗಳಿಗೆ ತೆರೆ ಬೀಳಲಿದೆ ಎಂದರು.

ಪ್ರತಿಯೊಬ್ಬರೂ ಬುದ್ಧನ ತತ್ವಾದರ್ಶ ಅಳವಡಿಸಿಕೊಳ್ಳಿ

ಸಾಹಿತಿ ಮಲ್ಕುಂಡಿ ಮಹದೇವಸ್ವಾಮಿ



ಹರದನಹಳ್ಳಿಯಲ್ಲಿ ದಮ್ಮ ದೀಪ ಪಯಣಕ್ಕೆ ಚಾಲನೆ ನೀಡಲಾಯಿತು.

ಮಲ್ಕುಂಡಿ, ಅ.10– ಪ್ರತಿಯೊಬ್ಬರೂ ತಮ್ಮ ಜೀವನದಲ್ಲಿ ಬುದ್ಧನ ತತ್ವಾದರ್ಶಗಳನ್ನು ಅಳವಡಿಸಿಕೊಳ್ಳಬೇಕು ಎಂದು ಸಾಹಿತಿ ಮಲ್ಕುಂಡಿ ಮಹದೇವಸ್ವಾಮಿ ತಿಳಿಸಿದರು.

ಇಲ್ಲಿಗೆ ಸಮೀಪದ ಹರದನಹಳ್ಳಿ ಗ್ರಾಮದಲ್ಲಿ ಅಂಬೇಡ್ಕರ್ ಸಾಹಿತ್ಯ ಅಕಾಡೆಮಿಯಿಂದ ಆಯೋಜಿಸಿದ್ದ ದಮ್ಮ ದೀಪ ಮತ್ತು ದಮ್ಮ ಪಯಣ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಅಂಬೇಡ್ಕರ್ ಅವರ ದಮ್ಮ ಮಾರ್ಗದರ್ಶನದಲ್ಲಿ 10 ಸಾವಿರ ಮನೆಗಳಲ್ಲಿ ದಮ್ಮ ದೀಪ ಹಚ್ಚುವ ಕಾರ್ಯಕ್ರಮ ರೂಪಿಸಲಾಗಿದೆ. 100 ಕಿಮೀ ದೂರದ ದಮ್ಮ ಪಯಣದಲ್ಲಿ ಪ್ರತಿ ಗ್ರಾಮಗಳ ಮನೆ ಮತ್ತು ಮನಗಳಲ್ಲಿ ದೀಪಯಾನ ಮಾಡಲಾಗುತ್ತಿದೆ. ಅ.14 ಅಂಬೇಡ್ಕರ್ ಅವರು ಬೌದ್ಧ ದಮ್ಮವನ್ನು ಸ್ವೀಕರಿಸಿದ ದಿನವಾಗಿದ್ದು, ಇಂದಿಗೆ 68 ವರ್ಷ ತುಂಬಿದೆ. ಈ ಹಿನ್ನೆಲೆಯಲ್ಲಿ ನಾವು ದಮ್ಮ ದೀಪ ಹಚ್ಚುವ ಕಾರ್ಯಕ್ರಮ ಆಯೋಜನೆ ಮಾಡಿದ್ದೇವೆ. ಪ್ರತಿ ಮನೆಗಳಲ್ಲಿ ಅಂಬೇಡ್ಕರ್ ಅವರನ್ನು ನೆನೆದು ಅ.14ರ ತನಕ ದೀಪ ಹಚ್ಚಿ ಭಗವಾನ್ ಗೌತಮ ಬುದ್ಧರಿಗೆ ಪ್ರಾರ್ಥನೆ ಸಲ್ಲಿಸಬೇಕು ಎಂದರು.

ಗ್ರಾಮದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಅವರ ಮೂರ್ತಿಗೆ ಪುಷ್ಪಾರ್ಚನೆ ಸಲ್ಲಿಸಿ ದಮ್ಮ ದೀಪ ಪಯಣಕ್ಕೆ ಕೊಳ್ಳೇಗಾಲದ ಚೇತನವನದ ಬೌದ್ಧ ವಿಹಾರದ ಸುಗತ ಪಾಲ ಬಂತೇಜಿ ಚಾಲನೆ ನೀಡಿದರು.

ಇದಕ್ಕೂ ಮುನ್ನಾ ಬುದ್ಧ ಮತ್ತು ಅಂಬೇಡ್ಕರ್ ಮೂರ್ತಿಯನ್ನು ಗ್ರಾಮಸ್ಥರು ಅದ್ದೂರಿಯಾಗಿ ಬರಮಾಡಿಕೊಂಡರು. ಗ್ರಾಮದ ಪ್ರಮುಖ ಬೀದಿಗಳಲ್ಲಿ ಸಾಗುತ್ತಿದ್ದ ಮೆರವಣಿಗೆಯಲ್ಲಿ ಬುದ್ಧ ಮತ್ತು ಅಂಬೇಡ್ಕರ್ ಅವರ ಮೂರ್ತಿಗೆ ಮಹಿಳೆಯರು, ಮಕ್ಕಳು ಹಾಗೂ ಯುವಕರು ಪುಷ್ಪಾರ್ಚನೆ ಮಾಡಿ, ದೀಪ ಹಚ್ಚಿ ಬುದ್ಧನ ಸ್ಮರಿಸಿದರು.

ಈ ವೇಳೆ ಮಾಜಿ ಮೇಯರ್ ಪುರುಷೋತ್ತಮ್, ತಾಪಂ ಮಾಜಿ ಸದಸ್ಯ ನಾಗೇಶರಾವ್ ರಾಜ್, ರಂಗರಾಮಯ್ಯ, ಜವರಯ್ಯ, ಚಂದ್ರಯ್ಯ, ಕಾಂಗ್ರೆಸ್ ಪಕ್ಷದ ಜಿಲ್ಲಾ ಉಪಾಧ್ಯಕ್ಷ ಹಾಗೂ ರಾಜ್ಯ ಸಮಿತಿ ಕಾರ್ಯದರ್ಶಿ ಮಹೇಶ್, ಬಸವರಾಜು, ಭಾನು ಪ್ರಕಾಶ್, ನವೀನ್, ಹರೀಶ್, ಮಹದೇವು, ಸೇರಿದಂತೆ ಇತರರಿದ್ದರು.

ಅ.28ಕ್ಕೆ ಚುನಾವಣೆ

ನಂಜನಗೂಡು, ಅ.10– ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ತಾಲೂಕು ಹಾಗೂ ಯೋಜನಾ ಶಾಖೆಗಳ ನಿರ್ದೇಶಕರ ಚುನಾವಣೆ ಅ.28 ರಂದು ನಡೆಯಲಿದೆ ಎಂದು ಚುನಾವಣಾಧಿಕಾರಿ, ನಿವೃತ್ತ ತಹಸೀಲ್ದಾರ್ ಬಾಲಸುಬ್ರಹ್ಮಣ್ಯ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಅ.9ರಿಂದ 18ರವರೆಗೆ ನಾಮಪತ್ರ ಸಲ್ಲಿಸಬಹುದಾಗಿದ್ದು, ವಾಪಸ್ ಪಡೆಯಲು ಅ.21 ಕೊನೆ ದಿನ ಅ.28 ರಂದು ಬೆಳಗ್ಗೆ 9 ರಿಂದ ಸಂಜೆ 4 ರವರೆಗೆ ಚುನಾವಣೆ ನಡೆಯಲಿದ್ದು, ಅಂದೇ ಮತ ಎಣಿಕೆ ನಡೆಸಿ ಫಲಿತಾಂಶ ಘೋಷಿಸಲಾಗುವುದು ಎಂದು ತಿಳಿಸಿದ್ದಾರೆ

ಸರ್ಜಿಕಲ್ ಬೆಡ್ ಕೊಡುಗೆ



ಮೈಸೂರು ತಾಲೂಕಿನ ಜಯಪುರ ಆರೋಗ್ಯ ಕೇಂದ್ರಕ್ಕೆ ವಕೀಲ ಪೃಥ್ವಿ ಕಿರಣ್‌ಶೆಟ್ಟಿ ಅವರು ಸರ್ಜಿಕಲ್ ಬೆಡ್ ಅನ್ನು ಕೊಡುಗೆ ನೀಡಿದರು. ಈ ವೇಳೆ ಆಡಳಿತ ವೈದ್ಯಾಧಿಕಾರಿ ಡಾ.ಗಾಯತ್ರಿ, ಆರೋಗ್ಯ ಕೇಂದ್ರದ ವೈದ್ಯರು, ಸಿಬ್ಬಂದಿ, ಕಾಂಗ್ರೆಸ್ ಮುಖಂಡ ಡಿ.ಮಹದೇವಸ್ವಾಮಿ ಇದ್ದರು.

ಸಮಾಜಕ್ಕಾಗಿ ಬದುಕನ್ನೇ ಮುಡುಪಾಗಿಟ್ಟ ರಾಜೇಂದ್ರ ಶ್ರೀಗಳು

ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಬಣ್ಣನೆ



ಕಾರ್ಯಕ್ರಮವನ್ನು ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿ ಉದ್ಘಾಟಿಸಿದರು.

ತಿ.ನರಸೀಪುರ, ಅ.10– ಜಗದ್ಗುರು ಡಾ.ಶ್ರೀಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳು ನಾಡಿಗೆ ಅಪಾರ ಸೇವೆ ಸಲ್ಲಿಸಿ, ಸಮಾಜದ ಸರ್ವಾಂಗೀಣ ಪ್ರಗತಿಗೆ ಅವರ ಬದುಕನ್ನೇ ಮುಡುಪಾಗಿಟ್ಟವರು ಎಂದು ಸುತ್ತೂರು ವೀರಸಿಂಹಾಸನ ಮಹಾಸಂಸ್ಥಾನ ಮಠದ ಶ್ರೀಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಬಣ್ಣಿಸಿದರು.

ಡಾ.ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳ ಜಯಂತಿ ಆಚರಣಾ ಸಮಿತಿಯಿಂದ ಪಟ್ಟಣದ ವಿದ್ಯೋದಯ ಕಾಲೇಜು ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದ್ದ ಡಾ.ಶಿವರಾತ್ರಿ ರಾಜೇಂದ್ರ ಶ್ರೀಗಳ 109ನೇ ಜಯಂತಿ ಮಹೋತ್ಸವದ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿ ಅವರು ಮಾತನಾಡಿದರು.

ರಾಜೇಂದ್ರ ಸ್ವಾಮಿಗಳು ಸಮಾಜ ಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದು ಕರ್ನಾಟಕದ ಪರ್ವಕಾಲ ಎಂದೇ ಹೇಳಬಹುದು. ಇಡೀ ಕರ್ನಾಟಕದಲ್ಲಿ ಮಠ ಮಾನ್ಯಗಳು ತಮ್ಮ ಸೇವಾ ಕ್ಷೇತ್ರವನ್ನು ವಿಭಿನ್ನವಾಗಿ ವಿಸ್ತರಿಸಿಕೊಂಡು ಹೋಗಿವೆ. ನಮ್ಮ ಭಾಗದಲ್ಲಿ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳು, ಸಿದ್ದಗಂಗೆ ಸಿದ್ಧಪುರುಷ ಶಿವಕುಮಾರ ಮಹಾಸ್ವಾಮಿಗಳು, ಚಿತ್ರದುರ್ಗದಲ್ಲಿ ಜಯದೇವ ಮಹಾಸ್ವಾಮಿಗಳು, ಸಿರಿಗೆರೆಯಲ್ಲಿ ಶಿವಕುಮಾರಸ್ವಾಮಿ, ಧಾರವಾಡದ ಮುರುಘಾ ಮಠದಲ್ಲಿ ಮೃತ್ಯುಂಜಯ ಸ್ವಾಮಿಗಳು ಸೇರಿದಂತೆ ಇಡೀ ಕರ್ನಾಟಕದಲ್ಲಿ ಸುವರ್ಣ ಯುಗ ಎನ್ನುವಂತೆ ಸ್ವಾಮಿಗಳ್ಯಾರು ಒಬ್ಬರಿಗೊಬ್ಬರು ಮಾತನಾಡಿಕೊಂಡು ಸಂಸ್ಥೆ ಕಟ್ಟಲಿಲ್ಲ. ಜನಸೇವಾ ಕಾರ್ಯದಲ್ಲಿ ತೊಡಗಿಕೊಳ್ಳಲಿಲ್ಲ. ಅವರು ಸ್ವಪ್ರೇರಣೆಯಿಂದ ಜನಸೇವೆಗೆ ತಮ್ಮ ಬದುಕನ್ನೇ ಮುಡುಪಾಗಿಟ್ಟರು. ನಿಸ್ವಾರ್ಥ ಸೇವೆ, ಅವರಿಗೆ ಸಮಾಜದ ಬಗ್ಗೆ ಇದ್ದ ಕಳಕಳಿ, ಸಮಾಜವನ್ನು ಸಂಘಟಿಸುವ ಕಾತರ ಅವರಲ್ಲಿ ತುಂಬಿ ತುಳುಕುತ್ತಿತ್ತು ಎಂಬುದು ಗಮನಿಸಬೇಕಾಗಿದೆ ಎಂದರು. ರಾಜೇಂದ್ರ ಶ್ರೀಗಳು ಸಂಸ್ಥೆ ಆರಂಭಿಸಿ ಕಷ್ಟದಲ್ಲಿದ್ದವರನ್ನು ಸಂರಕ್ಷಿಸಿ ಆಶ್ರಯಕೊಟ್ಟಿದ್ದರು. ಅವರ ವ್ಯಕ್ತಿತ್ವ ಚುಂಬಕ ವ್ಯಕ್ತಿತ್ವವಾಗಿತ್ತು ಎಂದು ಬಣ್ಣಿಸಿದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಗ್ರಾಮ ವಿದ್ಯೋದಯ ಶಿಕ್ಷಣ ಸಂಸ್ಥೆ ಕಾರ್ಯದರ್ಶಿ ಕೆ.ಪಿ.ಮಹದೇವಸ್ವಾಮಿ, ಶ್ರೀಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳಿಗೆ ಸಮಾಜದ ಬಗ್ಗೆ ದೂರದೃಷ್ಟಿ ಇತ್ತು. ಈ ಕಾರಣಕ್ಕೆ ಶಿಕ್ಷಣ ಮತ್ತು ಆಧ್ಯಾತ್ಮಿಕ ಸಂಸ್ಕಾರದಲ್ಲಿ ಸುತ್ತೂರು ಮಠ ಹೆಮ್ಮರವಾಗಿ ಬೆಳೆದಿದೆ. ಶ್ರೀಮಠ ಗ್ರಾಮೀಣ ಬಡವರು, ಅಶಕ್ತರನ್ನು ಶಿಕ್ಷಣ ಮತ್ತು ಅನ್ನ ದಾಸೋಹದ ಮೂಲಕ ಮುಖ್ಯವಾಹಿನಿಗೆ ತಂದು ಬೆಳೆಸಿದೆ ಎಂದ ಅವರು ಚಾತುರ್ವರ್ಣದ ಕಾರಣದಿಂದ ಸಮಾಜದಲ್ಲಿ ಬೇರೂರಿದ್ದ ಅಸಮಾನತೆಯನ್ನು ಸುತ್ತೂರು ಮಠ ಅನ್ನ ಮತ್ತು ಶಿಕ್ಷಣ ದಾಸೋಹದ ಮೂಲಕ ಅಳಿಸುತ್ತಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಶಿಕ್ಷಣದ ಮೂಲಕ ಮಕ್ಕಳನ್ನು ಉತ್ತಮ ಮನುಷ್ಯರನ್ನಾಗಿಸುವ, ಉತ್ತಮ ಪ್ರಜೆಯನ್ನಾಗಿಸುವ ಮಹಾನ್ ಕಾರ್ಯವನ್ನು ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳು ತಪಸ್ಸಿನಂತೆ ಮಾಡಿದರು ಎಂದರು.

ಕಾರ್ಯಕ್ರಮ ಉದ್ಘಾಟಿಸಿ ವಾಟಾಳು ಸೂರ್ಯ ಸಿಂಹಾಸನ ಮಠದ ಡಾ.ಸಿದ್ದಲಿಂಗ ಶಿವಾಚಾರ್ಯ ಸ್ವಾಮೀಜಿ ಆಶೀರ್ವಚನ ನೀಡಿದರು. ಮುಖ್ಯ ಅತಿಥಿ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾಧ್ಯಕ್ಷ ಹಿನಕಲ್ ಬಸವರಾಜು, ಖ್ಯಾತ ಹಿರಿಯ ವಕೀಲ ಸಿ.ಎಂ.ಜಗದೀಶ್ ಮಾತನಾಡಿದರು.

ಬಾಗಳಿ ಸರ್ಕಾರಿ ಶಾಲಾ ಶಿಕ್ಷಕಿ ಜ್ಯೋತಿ ಪರಮೇಶ್ ಹಲವಾರ ರಾಜೇಂದ್ರ ಶ್ರೀಗಳಿಗೆ ನುಡಿ ನಮನ ಸಲ್ಲಿಸಿದರು. ವೇದಿಕೆ ಕಾರ್ಯಕ್ರಮಕ್ಕೂ ಮೊದಲು ಸುತ್ತೂರು ಶ್ರೀಶಿವರಾತ್ರಿ ದೇಶಿಕೇಂದ್ರ ಶ್ರೀಗಳನ್ನು ಪಟ್ಟಣದ ಖಾಸಗಿ ಬಸ್ ನಿಲ್ದಾಣದಿಂದ ಮೆರವಣಿಗೆ ಮೂಲಕ ಕಾಲೇಜು ವೃತ್ತಕ್ಕೆ ಕರೆತಂದು ಅಲ್ಲಿ ತಾತ್ಕಾಲಿಕವಾಗಿ ನಿರ್ಮಿಸಲಾಗಿದ್ದ ರಾಜೇಂದ್ರ ಸ್ವಾಮಿಗಳ ಪುತ್ಥಳಿಗೆ ಪುಷ್ಪಾರ್ಚನೆ ಮಾಡಲಾಯಿತು.

> ಮಠದಲ್ಲಿ ಅನ್ನ, ಜ್ಞಾನ ದಾಸೋಹದಂತಹ ಸಮಾಜಮುಖಿ ಕಾರ್ಯಕ್ರಮಗಳು ಶ್ರೀಗಳ ಮಾರ್ಗದರ್ಶನದಲ್ಲಿ ನಿರಂತರವಾಗಿ ನಡೆದುಕೊಂಡು ಬಂದಿರುವುದು ಶ್ಲಾಘನೀಯ. ಶತಮಾನಗಳಿಂದ ದೀನ ದಲಿತರು ಎಂಬ ಭೇದ ಭಾವವಿಲ್ಲದೆ ದಾಸೋಹ ನಡೆಸಿ ಸಮ ಸಮಾಜದ ನಿರ್ಮಾಣಕ್ಕೆ ಶ್ರೀಮಠ ಶ್ರಮಿಸಿದೆ.
>
> - ಕೆ.ಪಿ.ಮಹದೇವಸ್ವಾಮಿ, ಗ್ರಾಮ ವಿದ್ಯೋದಯ ಶಿಕ್ಷಣ ಸಂಸ್ಥೆ ಕಾರ್ಯದರ್ಶಿ.

ಮದ್ದಾರಲಿಂಗಯ್ಯನಹುಂಡಿ ವಿರಕ್ತ ಮಠದ ಗೌರಿಶಂಕರಸ್ವಾಮಿ, ಸಿದ್ದರಹಳ್ಳಿ ಪಾರಮಾರ್ಥಿಕ ಗವಿಮಠದ ಮಲ್ಲಿಕಾರ್ಜುನ ಸ್ವಾಮಿ, ಮಾಡ್ರಹಳ್ಳಿ ಪಟ್ಟದ ಮಠದ ಶಾಂತಮಲ್ಲಿಕಾರ್ಜುನಸ್ವಾಮಿ, ಮುಡುಕನಪುರ ಹಲವಾರ ಮಠದ ಷಡಕ್ಷರ ದೇಶಿಕೇಂದ್ರ ಸ್ವಾಮಿ, ಮುಡುಕುತೊರೆ ಕಲ್ಲು ಮಠದ ನಂದಿಕೇಶ್ವರಸ್ವಾಮಿ, ವೀರಪ್ಪ ಒಡೆಯರಹುಂಡಿ ಮಠದ ರೇಣುಕಾ ಶಿವಾಚಾರ್ಯ ಸ್ವಾಮಿ, ಕಳ್ಳೀಪುರ ಮಠದ ಗುರುಪಾದ ಶಿವಾಚಾರ್ಯ ಸ್ವಾಮಿ, ಮಡುಕುತೊರೆ ತೋಪಿನಮಠದ ಮಲ್ಲಿಕಾರ್ಜುನ ಸ್ವಾಮಿ, ಸೋಸಲೆ ತೋಪಿನಮಠದ ಷಡಕ್ಷರಸ್ವಾಮಿ, ಮೇದನಿ ಪಟ್ಟದ ಮಠದ ಶಿವಲಿಂಗಸ್ವಾಮಿ, ಕರೋಹಟ್ಟಿ ವಿರಕ್ತ ಮಠದ ಬಸವಲಿಂಗ ದೇಶಿಕೇಂದ್ರ ಸ್ವಾಮಿ, ಸೇತುವೆ ಮಠದ ಸಹಜಾನಂದ ಸ್ವಾಮಿ, ಮೈಮಲ್ ಮಾಜಿ ಅಧ್ಯಕ್ಷ ಓಂಪ್ರಕಾಶ್, ಕಾರ್ಯಕ್ರಮದ ಆಯೋಜಕ ಕೃಷಿಕ ಸಮಾಜದ ಅಧ್ಯಕ್ಷ ಎಂ.ಶಿವಮಲ್ಲಪ್ಪ, ಬಸವ ಬಳಗದ ಅಧ್ಯಕ್ಷ ಪರಮೇಶ್ ಪಟೇಲ್, ಚಂದ್ರಧರ, ನಿರ್ದೇಶಕ ಸುಗಂಧರಾಜು, ದೊಡ್ಡನಹುಂಡಿ ನಂಜುಂಡಸ್ವಾಮಿ, ದಯಾನಂದ್ ಪಟೇಲ್, ಹೋಟೆಲ್ ರಾಜಣ್ಣ, ಎಂ.ಎಲ್.ನಮಿತ್‌ರಾಜ್, ಶಿವಕುಮಾರ್, ಜೆಎಸ್‌ಎಸ್ ಯೋಗೇಶ್, ನಿಂಗಪ್ಪ, ತೊಟ್ಟವಾಡಿ ಶಿವಕುಮಾರ್, ರವಿ ಚಂದ್ರದರ, ಉಮೇಶ್ ಮತ್ತಿತರಿದ್ದರು.

ಸಿಎಂ ಸಿದ್ದರಾಮಯ್ಯ ಒಳಗೊಂಡ ಮುಡಾ ಹಗರಣಕ್ಕೆ ಕುತೂಹಲದ ತಿರುವು


ಎ3 ಮಲ್ಲಿಕಾರ್ಜುನಸ್ವಾಮಿ, ಎ4 ದೇವರಾಜು ಲೋಕಾಯುಕ್ತ ಮುಂದೆ ಹಾಜರು: ತೀವ್ರ ವಿಚಾರಣೆ

● ಬೆಳಗ್ಗೆಯಿಂದ ಸಂಜೆ ತನಕ ಆರೋಪಿಗಳಿಗೆ ಡ್ರಿಲ್ ● ಸರಣಿ ಪ್ರಶ್ನೆಗಳನ್ನು ಕೇಳಿದ ತನಿಖಾ ತಂಡ ● ಕುತೂಹಲ ಮೂಡಿಸಿದ ಮುಂದಿನ ವಿಚಾರಣೆ

ಮೈಸೂರು, ಅ.10(ಬಿಎಲ್‌ಯು)– ಮುಖ್ಯಮಂತ್ರಿ ಸಿದ್ದರಾಮಯ್ಯ ಒಳಗೊಂಡ ಮುಡಾ ಹಗರಣದ ಎ3,ಎ4 ಇಬ್ಬರು ಆರೋಪಿಗಳನ್ನು ಇಂದು ಲೋಕಾಯುಕ್ತ ಪೊಲೀಸರು ವಿಚಾರಣೆ ಗೊಳಪಡಿಸಿದರು. ಲೋಕಾಯುಕ್ತ ಎಸ್ಪಿ ಉದೇಶ್ ನೇತೃತ್ವದ ತನಿಖಾ ತಂಡ ಬೆಳಿಗ್ಗೆಯಿಂದ ಸಂಜೆವರೆಗೆ ನಡೆಸಿದ ವಿಚಾರಣೆಯಲ್ಲಿ ಭೂಮಿ ಖರೀದಿ ಹಾಗೂ ಮಾರಾಟ ಸಂಬಂಧ ಪ್ರಶ್ನೆಗಳ ಮೇಲೆ ಪ್ರಶ್ನೆ ಕೇಳಿ ಮಾಹಿತಿ ಪಡೆದಿದ್ದಾರೆ.

ಸಿದ್ದರಾಮಯ್ಯ ವಿರುದ್ಧದ ಮುಡಾ ಹಗರಣದ ಲೋಕಾಯುಕ್ತರ ತನಿಖೆ ಮತ್ತಷ್ಟು ಚುರುಕುಗೊಂಡಿದೆ. ಈ ತನಕ ಹಗರಣದ ಭೂಮಿಯ ಮಹಜರು, ದಾಖಲಾತಿ ಪರಿಶೀಲನೆ ಮತ್ತು ದಾಖಲಾತಿ ಸಂಗ್ರಹದಲ್ಲಿ ತೊಡಗಿದ್ದ ಲೋಕಾಯುಕ್ತರು ಇದೇ ಮೊದಲ ಬಾರಿಗೆ ಪ್ರಕರಣದ ಆರೋಪಿಗಳನ್ನು ವಿಚಾರಣೆಗೊಳಪಡಿಸಿದರು.

ಮೈಸೂರಿನ ಕೆಸರೆ ಸರ್ವೆ ನಂಬರ್ 464ರ 3.16 ಎಕರೆ ಭೂಮಿಯ ಮೂಲ ಮಾಲೀಕ ಆರೋಪಿ ದೇವರಾಜು (ಎ4) ಹಾಗೂ ಸಿದ್ದರಾಮಯ್ಯ ಬಾವಮೈದ ಆರೋಪಿ ಮಲ್ಲಿಕಾರ್ಜುನ ಸ್ವಾಮಿ (ಎ3) ಪ್ರತ್ಯೇಕವಾಗಿ ಲೋಕಾಯುಕ್ತ ಕಚೇರಿಗೆ ಆಗಮಿಸಿದರು. ಬೆಳಿಗ್ಗೆ ಇಬ್ಬರನ್ನು ಪ್ರತ್ಯೇಕವಾಗಿ, ಮಧ್ಯಾಹ್ನದ ನಂತರ ಇಬ್ಬರನ್ನು ಮುಖಾ ಮುಖಿ ಕೂರಿಸಿ ಏಕಕಾಲಕ್ಕೆ ವಿಚಾರಣೆ ಮಾಡಿದರು.



ಮಲ್ಲಿಕಾರ್ಜುನ ಸ್ವಾಮಿ



ದೇವರಾಜು(ಮಧ್ಯದಲ್ಲಿರುವವರು)

ಹಾಗಾಗಿ ಇಂದು ಲೋಕಾಯುಕ್ತ ಕಚೇರಿ ಚಟುವಟಿಕೆಯ ಕೇಂದ್ರವಾಗಿತ್ತು. ಮೊದಲ ಮಹಡಿಯಲ್ಲಿ ನಡೆಯುತ್ತಿದ್ದ ವಿಚಾರಣೆಗೆ ಲೋಕಾಯುಕ್ತ ಸಿಬ್ಬಂದಿ ಆಗಾಗ್ಗೆ ದಾಖಲಾತಿಗಳನ್ನು ಕೊಂಡೊಯ್ಯುತ್ತಿದ್ದ ದೃಶ್ಯ ಕಂಡುಬಂತು.

ಮೊದಲೇ ಸಿದ್ಧಪಡಿಸಿಕೊಂಡಿದ್ದ ಪ್ರಶ್ನೆಗಳನ್ನು ದೇವರಾಜುಗೆ ಕೇಳಲಾಗಿದೆ. ನಿಮ್ಮ ಹೆಸರೇನು, ನಿಮ್ಮ ವಯಸ್ಸೆಷ್ಟು, ನಿಮ್ಮ ಸ್ವಂತ ಊರು ಯಾವುದು, ನೀವು ಸದ್ಯ ಎಲ್ಲಿ ವಾಸವಾಗಿದ್ದೀರಾ, ನಿಮಗೆ ಬಿ.ಎನ್.ಮಲ್ಲಿಕಾರ್ಜುನ ಸ್ವಾಮಿ ಪರಿಚಯವಿದೆಯೇ, ಎಷ್ಟು ವರ್ಷಗಳಿಂದ ಒಡನಾಟವಿದೆ, ಈಗ ಮಲ್ಲಿಕಾರ್ಜುನ ಸ್ವಾಮಿ ನಿಮ್ಮ ಸಂಪರ್ಕದಲ್ಲಿದ್ದಾರಾ, ಈ ಜಮೀನು ನಿಮಗೆ ಹೇಗೆ ಬಂತು, ಈ ಜಮೀನನ್ನು ಯಾವಾಗ ಮಾರಾಟ ಮಾಡಿದ್ದೀರಾ, ಯಾರಿಗೆ ಎಷ್ಟು ಹಣಕ್ಕೆ ಮಾರಾಟ ಮಾಡಿದ್ದೀರಾ, ನಿಮ್ಮ ಜಮೀನನ್ನು ಮುಡಾ ಭೂಸ್ವಾಧೀನ ಮಾಡಿಕೊಂಡಿದ್ದು ನಿಜವೇ, ಡಿನೋಟಿಫೈ ಆದ ಜಮೀನನ್ನು ಮತ್ತೆ ನೋಟಿಫೈ ಮಾಡಿದ್ದು ಯಾರು ಎಂಬಿವೆ ಸರಣಿ ಪ್ರಶ್ನೆಗಳನ್ನು ಕೇಳಿ ಉತ್ತರ ಪಡೆದರು.

ಸಾಕಷ್ಟು ವಯಸ್ಸಾಗಿರುವ ದೇವರಾಜು, ಹತ್ತಾರು ವರ್ಷದ ಹಿಂದಿನ ಬಹಳಷ್ಟು ಸಂಗತಿ ಮರೆತು ಹೋಗಿದೆ ಎಂದು ಲೋಕಾಯುಕ್ತರ ಬಹಳಷ್ಟು ಪ್ರಶ್ನೆಗಳಿಗೆ ಉತ್ತರ ನೀಡಿದರೆಂದು ತಿಳಿದು ಬಂದಿದೆ.

ಇನ್ನು ಮಲ್ಲಿಕಾರ್ಜುನ ಸ್ವಾಮಿಗೆ ಲೋಕಾಯುಕ್ತ ಅಧಿಕಾರಿಗಳು ಪ್ರಶ್ನೆಗಳ ಸುರಿಮಳೆಗೈಯ್ದರು. ಕೆಸರೆ ಭೂಮಿಯನ್ನು ದೇವರಾಜು ಅವರಿಂದ ಯಾವಾಗ ಖರೀದಿ ಮಾಡಿದ್ದೀರಾ, ಎಷ್ಟು ಹಣಕ್ಕೆ ಖರೀದಿ ಮಾಡಿದ್ದೀರಾ, ಯಾವಾಗ ಡಿನೋಟಿಫೈ ಆಯಿತು, ನಿಮ್ಮ ಸಹೋದರಿಗೆ ಯಾವಾಗ ದಾನಪತ್ರ ಬರೆದು ಕೊಟ್ಟಿದ್ದೀರಾ ಹೀಗೆ ಹಲವು ಪ್ರಶ್ನೆಗಳನ್ನು ಕೇಳಿ ಉತ್ತರ ಪಡೆದರೆನ್ನಲಾಗಿದೆ.

ಲೋಕಾಯುಕ್ತ ಕಚೇರಿಯಲ್ಲಿ ಒಂದು ಕಡೆ ಆರೋಪಿಗಳ ವಿಚಾರಣೆ ನಡೆಯುತ್ತಿದ್ದರೆ ಮತ್ತೊಂದು ಕಡೆ ಆಯುಧ ಪೂಜೆಗೆ ಸಿದ್ಧತೆ ಮಾಡಿಕೊಳ್ಳುತ್ತಿದ್ದರು. ಈಗ ಪ್ರಕರಣದ ಎ3 ಮತ್ತು ಎ4 ಆರೋಪಿಗಳನ್ನು ವಿಚಾರಣೆ ಮಾಡಿರುವ ಲೋಕಾಯುಕ್ತ ಪೊಲೀಸರು ಮೊದಲ ಆರೋಪಿ ಸಿಎಂ ಸಿದ್ದರಾಮಯ್ಯ ಹಾಗೂ ಅವರ ಪತ್ನಿ ಎರಡನೇ ಆರೋಪಿ ಪಾರ್ವತಿ ಅವರನ್ನು ಯಾವಾಗ ವಿಚಾರಣೆ ಮಾಡುತ್ತಾರೆ ಎಂಬ ಕುತೂಹಲವಿದೆ.


ಅಲ್ಲದೆ ಸಿದ್ದರಾಮಯ್ಯ ಹಾಗೂ ಪಾರ್ವತಿ ಅವರನ್ನು ಲೋಕಾಯುಕ್ತ ಕಚೇರಿಗೆ ಕರೆಸಿ ವಿಚಾರಣೆ ಮಾಡುತ್ತಾರೊ ಅಥವಾ ಅವರ ಮನೆಗೇ ಹೋಗಿ ವಿಚಾರಣೆ ಮಾಡುತ್ತಾರೋ? ಸಹಜ ಕುತೂಹಲ ಉದ್ಭವಿಸಿದೆ.

ಡಿಸೆಂಬರ್ 24 ರೊಳಗೆ ತನಿಖಾ ವರದಿಯನ್ನು ಬೆಂಗಳೂರಿನ ಜನ ಪ್ರತಿನಿಧಿಗಳ ವಿಶೇಷ ನ್ಯಾಯಾಲಯಕ್ಕೆ ಸಲ್ಲಿಸಬೇಕಿರುವ ಕಾರಣ ಲೋಕಾಯುಕ್ತ ಪೊಲೀಸರು ತ್ವರಿತಗತಿಯಲ್ಲಿ ತನಿಖೆ ಕೈಗೊಂಡಿದ್ದಾರೆ.

ಇಬ್ಬರಿಗೂ ರಾತ್ರಿವರೆಗೆ ಗ್ರಿಲ್

ಲೋಕಾಯುಕ್ತ ಪೊಲೀಸರು ಎ4 ದೇವರಾಜು ಅವರಿಗೆ ಸುಮಾರು 8 ಗಂಟೆ ಹಾಗೂ ಎ.3 ಮಲ್ಲಿಕಾರ್ಜುನ ಅವರಿಗೆ ಸುಮಾರು 10 ಗಂಟೆ ಕಾಲ ಗ್ರಿಲ್ ನಡೆಸಿದರು. ಇವರಿಬ್ಬರೂ ಬೆಳಗ್ಗೆ 11 ಗಂಟೆ ಸುಮಾರಿಗೆ ಲೋಕಾಯುಕ್ತ ಕಚೇರಿಯೊಳಗೆ ಹೋದರು. ಸಂಜೆ 7.10ಕ್ಕೆ ದೇವರಾಜು ಹಾಗೂ ರಾತ್ರಿ 9.25ಕ್ಕೆ ಮಲ್ಲಿಕಾರ್ಜುನ ಹೊರಬಂದರು. ಪೊಲೀಸರೊಂದಿಗೆ ಹೊರಬಂದ ಇಬ್ಬರೂ ಮಾಧ್ಯಮಗಳಿಗೆ ಪ್ರತಿಕ್ರಿಯೆ ನೀಡಲಿಲ್ಲ.

22 ಗ್ರ್ಯಾಂಡ್‌ಸ್ಲಾಮ್ ಪ್ರಶಸ್ತಿಗಳೊಂದಿಗೆ ರಾಫೆಲ್ ನಡಾಲ್ ಟೆನಿಸ್‌ಗೆ ವಿದಾಯ



ಸ್ಪೇನ್, ಅ.10–ಟೆನಿಸ್ ಲೋಕದ ಅನಭಿಷಕ್ತ ದೊರೆ ರಾಫೆಲ್ ನಡಾಲ್ ವೃತ್ತಿ ಬದುಕಿಗೆ ವಿದಾಯ ಘೋಷಿಸಿದ್ದಾರೆ. 38ನೇ ವಯಸ್ಸಿನಲ್ಲಿ ತಮ್ಮ ನೆಚ್ಚಿನ ಕ್ರೀಡೆಗೆ ವಿದಾಯ ಹೇಳಿರುವ ಸ್ಪೇನ್‌ನ ದಿಗ್ಗಜ ಟೆನಿಸ್ ಆಟಗಾರ ನಡಾಲ್, ತಮ್ಮ ಈ ನಿವೃತ್ತಿಯ ನಿರ್ಧಾರವನ್ನು ಸೋಶಿಯಲ್ ಮೀಡಿಯಾದಲ್ಲಿ ವಿಡಿಯೋ ಹರಿಬಿಡುವ ಮೂಲಕ ಹಂಚಿಕೊಂಡಿದ್ದಾರೆ.

ತಮ್ಮ ವೃತ್ತಿಜೀವನದಲ್ಲಿ 22 ಗ್ರ್ಯಾಂಡ್‌ಸ್ಲಾಮ್ ಪ್ರಶಸ್ತಿಗಳನ್ನು ಗೆದ್ದಿರುವ ನಡಾಲ್, ನವೆಂಬರ್‌ನಲ್ಲಿ ನಡೆಯಲಿರುವ ಡೇವಿಸ್ ಕಪ್ ಫೈನಲ್ ಪಂದ್ಯದ ನಂತರ ನಿವೃತ್ತಿಯಾಗುವುದಾಗಿ ಹೇಳಿಕೊಂಡಿದ್ದಾರೆ. ಡೇವಿಸ್ ಕಪ್ ಫೈನಲ್‌ನಲ್ಲಿ ಸ್ಪೇನ್, ನೆದರ್ಲೆಂಡ್ಸ್ ತಂಡವನ್ನು ಎದುರಿಸಲಿದ್ದು, ಈ ಪಂದ್ಯ ನವೆಂಬರ್ 19 ಮತ್ತು 21 ರ ನಡುವೆ ನಡೆಯಲಿದೆ.

'ನಾನು ವೃತ್ತಿಪರ ಟೆನಿಸ್‌ನಿಂದ ನಿವೃತ್ತಿಯಾಗುತ್ತಿದ್ದೇನೆ. ಕಳೆದ ಕೆಲವು ವರ್ಷಗಳಿಂದ ತುಂಬಾ ಕಷ್ಟವಾಗಿತ್ತು. ಅದರಲ್ಲೂ ಕಳೆದ ಎರಡು ವರ್ಷಗಳು ಸವಾಲಿನಿಂದ ಕೂಡಿದ್ದವು. ಇದು ತುಂಬಾ ಕಠಿಣ ನಿರ್ಧಾರ. ಆದರೆ ಜೀವನದ ಪ್ರತಿಯೊಂದು ಆರಂಭಕ್ಕೂ ಅಂತ್ಯವಿದೆ. ನನ್ನ ವೃತ್ತಿಜೀವನವನ್ನು ಕೊನೆಗೊಳಿಸಲು ಇದು ಸರಿಯಾದ ಸಮಯ ಎಂದು ನಾನು ಭಾವಿಸುತ್ತೇನೆ. ಇಷ್ಟು ಸುದೀರ್ಘ ವೃತ್ತಿಜೀವನವನ್ನು ನಾನು ಊಹಿಸಿರಲಿಲ್ಲ. ಈಗ ನನ್ನ ಕೊನೆಯ ಪಂದ್ಯದ ಬಗ್ಗೆ ತುಂಬಾ ಉತ್ಸುಕನಾಗಿದ್ದೇನೆ ಎಂದು ಹೇಳಿಕೊಂಡಿದ್ದಾರೆ.

ರತನ್ ಟಾಟಾ ಅವರಿಗೆ ಶ್ರದ್ಧಾಂಜಲಿ



ಮೈಸೂರಿನ ಚಾಮುಂಡಿಪುರಂ ವೃತ್ತದಲ್ಲಿ ರತನ್ ಟಾಟಾ ಅವರಿಗೆ ಶ್ರದ್ಧಾಂಜಲಿ ಅರ್ಪಿಸಲಾಯಿತು.

ಮೈಸೂರು, ಅ.10(ಜಿಎ)–ಭಾರತದ ಕೈಗಾರಿಕೋದ್ಯಮಿ ಟಾಟಾ ಸನ್ಸ್ ಸಂಸ್ಥಾಪಕ ರತನ್ ಟಾಟಾ ಅವರಿಗೆ ಅಪೂರ್ವ ಸ್ನೇಹ ಬಳಗ, ಪ್ರಜ್ಞಾವಂತ ನಾಗರಿಕ ವೇದಿಕೆ ಹಾಗೂ ಜೀವಧಾರ ರಕ್ತ ನಿಧಿ ಕೇಂದ್ರ ವತಿಯಿಂದ ನಗರದ ಚಾಮುಂಡಿಪುರಂ ವೃತ್ತದಲ್ಲಿ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಈ ವೇಳೆ ಪಾಲಿಕೆ ಮಾಜಿ ಸದಸ್ಯ ಮಾ.ವಿ. ರಾಮ್‌ಪ್ರಸಾದ್ ಮಾತನಾಡಿ, ರತನ್ ಟಾಟಾ ಅವರು ಟಾಟಾ ಸನ್ಸ್ ಮೂಲಕ ಹಲವಾರು ಉದ್ಯಮಗಳನ್ನು ಸ್ಥಾಪಿಸಿ ದೇಶದಲ್ಲಿ ಲಕ್ಷಾಂತರ ಮಂದಿಗೆ ಉದ್ಯೋಗದಾತರಾಗಿ ಭಾರತವನ್ನು ಜಾಗತಿಕವಾಗಿ ಅಂತರರಾಷ್ಟ್ರೀಯ ಮಟ್ಟದಲ್ಲಿ ಟಾಟಾ ಬ್ರಾಂಡ್ ಜನಪ್ರಿಯಗೊಳಿಸಿದ್ದರು ಎಂದರು.

ಅವಕಾಶಗಳಿಗಾಗಿ ಕಾಯಬಾರದು ಅವಕಾಶವನ್ನು ಸೃಷ್ಟಿಸಿಕೊಳ್ಳಬೇಕು ಎನ್ನುವ ಮೂಲಕ ಯುವ ಉದ್ಯಮಿಗಳಿಗೆ ಸ್ಫೂರ್ತಿಯಾಗಿ, ಸಮಾಜದಲ್ಲಿ ಸಂಪಾದನೆ ಶ್ರೀಮಂತಿಕೆಯ ಜೊತೆ ಹೃದಯ ಶ್ರೀಮಂತಿಕೆ ತೋರಿಸಿಕೊಟ್ಟವರು ರತನ್ ಟಾಟಾ ಎಂದು ಸ್ಮರಿಸಿದರು.

ಈ ಸಂದರ್ಭದಲ್ಲಿ ಪಾಲಿಕೆ ಮಾಜಿ ಸದಸ್ಯ ಬಿ.ವಿ.ಮಂಜುನಾಥ್, ಬಿಜೆಪಿ ನಗರ ಉಪಾಧ್ಯಕ್ಷ ಜೋಗಿ ಮಂಜು, ಬಿಜೆಪಿ ಯುವ ಮೋರ್ಚಾ ಅಧ್ಯಕ್ಷ ರಾಕೇಶ್ ಗೌಡ, ಪ್ರಧಾನ ಕಾರ್ಯದರ್ಶಿ ಲೋಹಿತ್, ಜೀವಧಾರ ರಕ್ತನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ಅಪೂರ್ವ ಸ್ನೇಹ ಬಳಗದ ಅಧ್ಯಕ್ಷ ಅಪೂರ್ವ ಸುರೇಶ್, ಅಜಯ್ ಶಾಸ್ತ್ರಿ, ಪ್ರಜ್ಞಾವಂತ ನಾಗರಿಕ ವೇದಿಕೆ ಅಧ್ಯಕ್ಷ ಕಡಕೊಳ ಜಗದೀಶ್, ಅಖಿಲ ಭಾರತೀಯ ಗ್ರಾಹಕ ಪಂಚಾಯತ್ ಮೈಸೂರು ಘಟಕದ ಅಧ್ಯಕ್ಷ ಸಿ.ಎಸ್.ಚಂದ್ರಶೇಖರ್, ಜೆಡಿಎಸ್ ಕಾರ್ಯಾಧ್ಯಕ್ಷ ಪ್ರಕಾಶ್ ಪ್ರಿಯದರ್ಶನ್, ದೂರ ರಾಜಣ್ಣ, ಕಾಂಗ್ರೆಸ್ ಯುವ ಮುಖಂಡ ಸಂತೋಷ್ ಕಿರಾಳು, ಮಧು ಎನ್.ಪೂಜಾರ್, ಧರ್ಮೇಂದ್ರ ಮತ್ತಿತರರು ಉಪಸ್ಥಿತರಿದ್ದರು.

ಅರಮನೆ ವೇದಿಕೆಯಲ್ಲಿ ಸೂಸಿದ ಸ್ವರತರಂಗದ ಸುರಭಿ; ನೃತ್ಯದ ಬೆಡಗು–ಬಿನ್ನಾಣ



ಅರಮನೆ ವೇದಿಕೆಯಲ್ಲಿ ಗುರುವಾರ ನಡೆದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು.

● ಮುದಗೊಳಿಸಿದ ರಂಗಗೀತೆಗಳ ನಾದಲೋಕ ● 'ಹರೇ ಕೃಷ್ಣ ಹರೇ ರಾಮು...' ಭಜನೆಗೆ ಹೊಮ್ಮಿದ ಭಕ್ತಿಯ ಸಿಂಚನ ● 8 ದಿನಗಳ ಸಾಂಸ್ಕೃತಿಕ ಸಂಭ್ರಮಕ್ಕೆ ತೆರೆ

ಮೈಸೂರು,ಅ.10(ಪಿಎಂ)– ಅರಮನೆ ವೇದಿಕೆಯಲ್ಲಿ ಸೂಸಿದ ಸ್ವರತರಂಗದ ಸುರಭಿ... ನೃತ್ಯದ ಬೆಡಗು–ಬಿನ್ನಾಣ... ಮುದಗೊಳಿಸಿದ ರಂಗಗೀತೆಗಳ ನಾದಲೋಕ... ಹೀಗೆ ವೈವಿಧ್ಯಮಯ ಸಾಂಸ್ಕೃತಿಕ ಸೌರಭದೊಂದಿಗೆ 8 ದಿನಗಳ ರಸದೌತಣಕ್ಕೆ ತೆರೆ ಬಿದ್ದಿತು.

ದಸರಾ ಮಹೋತ್ಸವ ಪ್ರಯುಕ್ತ ಸಾಂಸ್ಕೃತಿಕ ಉಪಸಮಿತಿ ವತಿಯಿಂದ ಇಲ್ಲಿ ಹಮ್ಮಿಕೊಂಡಿರುವ ಸಾಂಸ್ಕೃತಿಕ ಕಾರ್ಯಕ್ರಮದ ಅಂಗವಾಗಿ 8ನೇ ದಿನವಾದ ಗುರುವಾರ ಸಂಜೆ ಇಂತಹ ಕಲಾ ಲೋಕವೊಂದು ಅನಾವರಣಗೊಂಡು ಸಭಿಕರ ಮೋಡಿ ಮಾಡಿತು.

'ಸ್ವರತರಂಗ ಸಂಗೀತ ಸಂಜೆ' ಶೀರ್ಷಿಕೆಯಡಿ ಜೀ ಕನ್ನಡ ರಿಯಾಲಿಟಿ ಶೋ ಖ್ಯಾತಿಯ ಗಾಯಕರಾದ ಚನ್ನಪ್ಪ, ಸುಹಾನ, ಸೈಯದ್, ಸುಪ್ರೀತ್, ರಮೇಶ್ ಹಾಗೂ ಮೈಸೂರಿನ ಅಮೂಲ್ಯ ನಡೆಸಿಕೊಟ್ಟ ಗಾಯನ ಶ್ರೋತೃಗಳನ್ನು ಸಂಗೀತದ ಅಲೆಯಲ್ಲಿ ಸಂಭ್ರಮಿಸುವಂತೆ ಮಾಡಿತು. 'ಪರಮಾತ್ಮ' ಚಿತ್ರದ 'ತನ್ಮಯಳಾದೆನು ತಿಳಿಯುವ ಮುನ್ನವೇ...' ಗೀತೆಯನ್ನು ಗಾಯಕಿ ಅಮೂಲ್ಯ ಸುಶ್ರಾವ್ಯವಾಗಿ ಸಾದರಪಡಿಸಿ ಸಭಿಕರಿಂದ ಅಭಿಮಾನದ ಚಪ್ಪಾಳೆ ಗಿಟ್ಟಿಸಿದರು. ಅಲ್ಲದೆ, 'ಈ ಕನ್ನಡ ಮಣ್ಣನು ಮರಿಬೇಡ ಓ ಅಭಿಮಾನಿ...', 'ಯಾಕೆ ಬಡಿದಾಡ್ತಿ ತಮ್ಮ...' ಸೇರಿದಂತೆ ಮೊದಲಾದ ಚಿತ್ರಗೀತೆಗಳು ಈ ಗಾಯಕರ ಕಂಠಸಿರಿಯಲ್ಲಿ ಮೂಡಿಬಂದು ಸಂಗೀತದ ಝುಂಕಾರ ಹೊಮ್ಮಿತು.

ನಂತರ ವೇದಿಕೆಯಲ್ಲಿ ಮೂಡಿಬಂದ ರಾಜಸ್ತಾನಿ ಫೋಕ್ ಮತ್ತು ಸೂಫಿ ಡ್ಯಾನ್ಸರ್ಸ್ ಜುಗಲ್‌ಬಂದಿ ಸಭಿಕರ ಮನಸೂರೆಗೊಂಡಿತು. ಮಮೆಖಾನ್ ಮತ್ತು ಫ್ಲೇವರ್ಸ್ ಆಫ್ ಇಂಡಿಯಾ–ಕಂಟೆಂಪರರಿ ಡ್ಯಾನ್ಸ್ ಕಂಪನಿ ನಡೆಸಿಕೊಟ್ಟ ಈ ಕಾರ್ಯಕ್ರಮಕ್ಕೆ ಪ್ರೇಕ್ಷಕರು ಸಂಭ್ರಮಿಸಿದರು. ಈ ತಂಡದ ನೃತ್ಯದ ಬೆಡಗು–ಬಿನ್ನಾಣ ಹಾಗೂ ಗಾನ ಮೋಡಿಗೆ ಸಭಿಕರು ಮನಸೋತು ಚಪ್ಪಾಳೆಯ ಮಳೆ ಸುರಿಸಿದರು.

ಅದೇ ರೀತಿ ವೈ.ಎಂ.ಪುಟ್ಟಣ್ಣಯ್ಯ ಮತ್ತು ಅವರ ತಂಡದ ಗಾಯಕರು ನಡೆಸಿಕೊಟ್ಟ ರಂಗಗೀತೆಗಳ ಗಾಯನವು ಸಭಿಕರನ್ನು ಬೆರಗಾಗುವಂತೆ ಮಾಡಿತು. ಶ್ರೀ ಕೃಷ್ಣ ಗಾರುಡಿ ನಾಟಕದಲ್ಲಿ ನಾರದಮುನಿ ಪಾತ್ರಧಾರಿಯು ಹಾಡುವ ಹಾಡೊಂಡದಕ್ಕೆ ಸಭಿಕರು ಚಪ್ಪಾಳೆ ತಟ್ಟಿ ಸಂಭ್ರಮಿಸಿದರು. ಅಲ್ಲದೆ, 'ಗೋಪಾಲ ಮನಮೋಹನ... ಗೋವಿಂದ ಮಧುಸೂದನ...', 'ಕಂಡೆ ನಾ ಲಂಕಪುರವ...' ಮೊದಲಾದ ಗೀತೆಗಳು ಮೂಡಿಬಂದು ಪೌರಾಣಿಕ ಪಾತ್ರಗಳನ್ನು ನೆನಪಿಸಿದವು.



ಅಂತೆಯೇ ಮೈಸೂರು ಇಸ್ಕಾನ್‌ನ ಅಧ್ಯಕ್ಷ ಸ್ತುತ ಕೃಷ್ಣ ಮಹಾರಾಜ್ ಅವರ ನೇತೃತ್ವದಲ್ಲಿ ನಡೆಸಿಕೊಟ್ಟ 'ಭಜನ ಸಂಕೀರ್ತನ್' ಕಾರ್ಯಕ್ರಮವು ಸಭಿಕರನ್ನು ಭಕ್ತಿಭಾವದಲ್ಲಿ ತೇಲುವಂತೆ ಮಾಡಿತು. 'ಹರೇ ಕೃಷ್ಣ ಹರೇ ರಾಮ...' ಭಜನೆಗೆ ಭಕ್ತರು ಎದ್ದುನಿಂತು ತಾಳ ತಟ್ಟುವ ಮೂಲಕ ಭಕ್ತಿಯ ಪರಾಕಾಷ್ಠೆ ಮೆರೆದರು. ಅಲ್ಲದೆ, ಅಕ್ಕೈ ಪದ್ಮಸಾಲಿ ಮತ್ತು ತಂಡದ ಜೋಗಪ್ಪ ಜೋಗಮ್ಮ ಚೌಡಿಕೆ ಪದಗಳು, ಹಾವೇರಿಯ ಖಾಸಿಂ ಅಲಿ ಮತ್ತು ಅವರ ತಂಡದ ಸುಗಮ ಸಂಗೀತ ಹಾಗೂ ತುಮಕೂರಿನ ಸಿದ್ದಲಿಂಗಯ್ಯ ಹಿರೇಮಠ ಮತ್ತು ಅವರ ತಂಡದ ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ ಸಭಿಕರನ್ನು ತಲೆದೂಗುವಂತೆ ಮಾಡಿತು. ಆ ಮೂಲಕ ಈ ಬಾರಿಯ ದಸರಾ ಮಹೋತ್ಸವದ ಅರಮನೆ ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ತೆರೆ ಬಿದ್ದಿತು.





ಅರಮನೆ ವೇದಿಕೆಯಲ್ಲಿ ಗುರುವಾರ ಮೈಸೂರು ಇಸ್ಕಾನ್‌ನ ಅಧ್ಯಕ್ಷ ಸ್ತುತ ಕೃಷ್ಣ ಮಹಾರಾಜ್ ನೇತೃತ್ವದಲ್ಲಿ 'ಭಜನ ಸಂಕೀರ್ತನ್ ಕಾರ್ಯಕ್ರಮ ನಡೆಯಿತು. ಮತ್ತೊಂದು ಚಿತ್ರದಲ್ಲಿ ಭಜನೆಗೆ ಭಕ್ತರು ಎದ್ದುನಿಂತು ತಾಳತಟ್ಟಿ ಭಕ್ತಿಭಾವ ವ್ಯಕ್ತಪಡಿಸುತ್ತಿರುವುದನ್ನು ಕಾಣಬಹುದು.

ಪ್ರತ್ಯೇಕ ಸಭೆ ಮಾಡಿದರೆ, ಬಹಿರಂಗ ಹೇಳಿಕೆ ನೀಡಿದರೆ ಶಿಸ್ತು ಕ್ರಮಕ್ಕೆ ಎಐಸಿಸಿ ಸೂಚನೆ

ಸಚಿವರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಎಚ್ಚರಿಕೆ

ಬೆಂಗಳೂರು, ಅ.10– ಪಕ್ಷದ ಶಿಸ್ತು ಉಲ್ಲಂಘಿಸಿದರೆ ಶಿಸ್ತು ಕ್ರಮ ಕೈಗೊಳ್ಳುವಂತೆ ರಾಜ್ಯ ಕಾಂಗ್ರೆಸ್ ಉಸ್ತುವಾರಿ ಸಚಿವ ಸುರ್ಜೆವಾಲಾ ಅವರಿಗೆ ಎಐಸಿಸಿ ಅಧ್ಯಕ್ಷರ ಸೂಚನೆ ನೀಡಿದ್ದಾರೆ. ಶಿಸ್ತು ಉಲ್ಲಂಘಿಸಿದರೆ ಸಚಿವ ಸ್ಥಾನದಿಂದ ವಜಾ ಮಾಡುವಂತೆ ತಿಳಿಸಿದ್ದಾರೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸಂಪುಟ ಸಭೆಯಲ್ಲಿ ಎಚ್ಚರಿಕೆ ನೀಡಿದ್ದಾರೆ.

ತಮ್ಮ ನೇತೃತ್ವದಲ್ಲಿಂದು ನಡೆದ ಕ್ಯಾಬಿನೆಟ್ ಸಭೆಯಲ್ಲಿ ಮಾತನಾಡಿದ ಅವರು, ಸಚಿವರಿಗೆ ಎಚ್ಚರಿಕೆ ನೀಡಿದ್ದಾರೆ. ನನ್ನ ಮತ್ತು ಶಿವಕುಮಾರ್ ಇಬ್ಬರೊಟ್ಟಿಗೂ ಕೆ.ಸಿ.ವೇಣುಗೋಪಾಲ್ ಮಾತನಾಡಿದ್ದಾರೆ. ಇನ್ನು ಮುಂದೆ ಸಭೆ ಸೇರುವುದು, ಮಾತನಾಡುವುದು, ಮಾಡಬಾರದು. ಮುಂದೆ ಅಂತಹ ಪರಿಸ್ಥಿತಿ ನಿರ್ಮಾಣವಾದರೆ ಅದಕ್ಕೆ ಸಂಬಂಧಪಟ್ಟವರೇ ಜವಾಬ್ದಾರರಾಗುತ್ತಾರೆ ಎಂದಿದ್ದಾರೆ.

ಯಾವಿದೇ ಸಚಿವರು ಸಭೆ ಮಾಡಿದರೆ, ಬಹಿರಂಗವಾಗಿ ಮಾತನಾಡಿದರೆ ಅವರಿಗೆ ಎಐಸಿಸಿಯಿಂದ ನೀವೇ ನೋಟಿಸ್ ನೀಡಿ. ಪಕ್ಷದ ಶಿಸ್ತು ಉಲ್ಲಂಘಿಸಿದ್ದು ಸಾಬೀತಾದರೆ ಸಚಿವ ಸ್ಥಾನದಿಂದ ವಜಾ ಮಾಡಿ. ಇವಿಷ್ಟು ನಿರ್ದೇಶನ ಎಐಸಿಸಿ ಅಧ್ಯಕ್ಷರಿಂದ ರಾಜ್ಯ ಕಾಂಗ್ರೆಸ್ ಉಸ್ತುವಾರಿಗೆ ಬಂದಿದೆ. ಕೆ.ಸಿ. ವೇಣುಗೋಪಾಲ್ ಹಾಗೂ ಸುರ್ಜೆವಾಲ ಇಬ್ಬರೂ ಈ ವಿಚಾರವನ್ನು ನನ್ನ ಗಮನಕ್ಕೆ ತಂದಿದ್ದಾರೆ. ನಿಮ್ಮ ಸಭೆ, ನಿಮ್ಮ ಮಾತು, ನಿಮ್ಮ ಜವಬ್ದಾರಿ ಎಂದು ಸಿಎಂ ಹೇಳಿದ್ದಾರೆ ಎನ್ನಲಾಗಿದೆ.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ವಿಶ್ವಂ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ವೆಟ್ಟೈಯನ್ (ತ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ದೇವರ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಮಾರ್ಟಿನ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಮಾರ್ಟಿನ್ (ಕ)	4 ಪ್ರದರ್ಶನಗಳು
ರಾಜಕಮಲ್	
ಭೈರಾದೇವಿ (ಕ)	4 ಪ್ರದರ್ಶನಗಳು
ಸಂಗಂ	
ಮಾರ್ಟಿನ್ (ಕ)	4 ಪ್ರದರ್ಶನಗಳು
ಲಿಡೋ	
ಕೃಷ್ಣಂ ಪ್ರಣಯ ಸಖಿ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ವಿಶ್ವಂ (ತೆ)	4 ಪ್ರದರ್ಶನಗಳು
ಪ್ರಭಾ	
ಭೀಮ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ವೆಟ್ಟೈಯನ್ (ತ): ಬೆ.9.55ಕ್ಕೆ, ಸಂ.4ಕ್ಕೆ, ರಾ.10.05ಕ್ಕೆ, ಮಾರ್ಟಿನ್ (ಕ): ಮ.1.05ಕ್ಕೆ, ರಾ.7.10ಕ್ಕೆ.
ಸ್ಕ್ರೀನ್ 2	ಜಿಗ್ರಾ (ಹಿಂ): ಬೆ.10.15ಕ್ಕೆ, ರಾ.7ಕ್ಕೆ, ರಾ.10ಕ್ಕೆ, ಮಾರ್ಟಿನ್ (ಕ): ಮ.1.15ಕ್ಕೆ, ಬ್ಲ್ಯಾಕ್ (ತ): ಸಂ.4.30ಕ್ಕೆ.
ಸ್ಕ್ರೀನ್ 3	ಮಾರ್ಟಿನ್ (ಕ): ಬೆ.10.10ಕ್ಕೆ, ರಾ.7ಕ್ಕೆ, ಇಬ್ಬನಿ ತಬ್ಬಿದ ಇಳೆಯಲಿ (ಕ): ಮ.1.15ಕ್ಕೆ, ಅನ್ನ (ಕ): ಸಂ.4.30ಕ್ಕೆ, ವಿಕ್ಕಿ ವಿದ್ಯಾ ಕಾ ಹೂ ವಾಲ ವೀಡಿಯೋ (ಹಿಂ): ರಾ.10ಕ್ಕೆ.
ಸ್ಕ್ರೀನ್ 4	ಮಾರ್ಟಿನ್ (ಕ): ಬೆ.9ಕ್ಕೆ, ಸಂ.4ಕ್ಕೆ, ರಾ.10ಕ್ಕೆ, ವೆಟ್ಟೈಯನ್ (ತ): ಮ.12.50ಕ್ಕೆ, ಸಂ.6.55ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519


ಸ್ಕ್ರೀನ್ 1	ದೇವರ 1 (ತೆ): ಮ.12.20ಕ್ಕೆ, ವೆಟ್ಟೈಯನ್ (ತ): ಮ.3.35ಕ್ಕೆ, ಸಂ.6.40ಕ್ಕೆ, ಮಾರ್ಟಿನ್ (ಕ): ರಾ.9.45ಕ್ಕೆ.
ಸ್ಕ್ರೀನ್ 2	ವೆಟ್ಟೈಯನ್ (ತ): ಬೆ.10ಕ್ಕೆ, ಮಾರ್ಟಿನ್ (ಕ): ಮ.1ಕ್ಕೆ, ಮ.3.30ಕ್ಕೆ, ಸಂ.6.40ಕ್ಕೆ, ರಾ.9.30ಕ್ಕೆ
ಸ್ಕ್ರೀನ್ 3	ಮಾರ್ಟಿನ್ (ಕ): ಬೆ.9ಕ್ಕೆ, ಬೆ.11.50ಕ್ಕೆ, ಮ.2.40ಕ್ಕೆ, ಸಂ.5.30ಕ್ಕೆ, ವೆಟ್ಟೈಯನ್ (ತ): ರಾ.8.20ಕ್ಕೆ.
ಸ್ಕ್ರೀನ್ 4	ವೆಟ್ಟೈಯನ್ (ಕ): ಮ.12.25ಕ್ಕೆ, ವೆಟ್ಟೈಯನ್ (ತ): ಮ.3.30ಕ್ಕೆ, ಸಂ.6.35ಕ್ಕೆ, ರಾ.9.40ಕ್ಕೆ.

ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಇಕ್ಬಾಲ್ ಶರೀಫ್ ನಿಧನ



ಮೈಸೂರು, ಅ.10– ಮೈಸೂರು ಶಾಂತಿ ನಗರ ನಿವಾಸಿ ದಿವಂಗತ ಇಸ್ಮಾಯಿಲ್ ಶರೀಫ್ ಅವರ ಪುತ್ರ ಹಾಗೂ ಪೇಂಟಿಂಗ್ ಕಂಟ್ರಾಕ್ಟರ್ ಇಕ್ಬಾಲ್ ಶರೀಫ್ (55) ಇಂದು ಮೈಸೂರಿನ ಜಯದೇವ ಹೃದ್ರೋಗ ಆಸ್ಪತ್ರೆಯಲ್ಲಿ ನಿಧನರಾದರು. ಮೃತರು ತಾಯಿ, ಪತ್ನಿ, ಇಬ್ಬರು ಪುತ್ರಿಯರು, ಸಹೋದರಿಯರು, ಬಾಮದಿರು ಹಾಗೂ ಅಪಾರ ಬಂಧು ವರ್ಗವನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಮಂಡಿ ಮೊಹಲ್ಲಾದ ಮಸ್ಜಿದ್ ಈದ್ಗಾದಲ್ಲಿ ನಮಾಜ್ ಜೋಹರ್ ನಂತರ ಟಿಪ್ಪು ಸರ್ಕಲ್‌ನಲ್ಲಿರುವ ಸ್ಮಶಾನದಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.